
ಕೃಷಿ ಜಾನಪದ

ಡಾ. ಎಂ.ಎನ್. ವಾಲಿ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಕೃಷಿ ಜಾನಪದ

ಡಾ. ಎಂ. ಎಸ್. ವಾಲಿ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

KRUSHI JAANAPADA by : **Dr. M.N. Wali**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 120 Price : Rs. **40/-** **2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು

ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ

ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ

ಶ್ರೀ ಬಿ.ಎಂ. ಪಾಟೀಲ, ಬಿಜಾಪುರ

ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ

ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ

ಶ್ರೀ ಅ.ಸಿ. ಹಿರೇಮಠ, ಹಾವೇರಿ

ಪ್ರೊ. ಕೆ.ಬಿ. ತಳಗೇರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಡಾ. ಜಗನ್ನಾಥ ಹೆಬ್ಬಾಳೆ, ಬೀದರ

ಶ್ರೀ ಕ.ಮ. ಪುರದ, ರಾಯಚೂರು

ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ

ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ

Sri H.B.L. Rao, Navi Mumbai

Sri I.V. Bhatta, Kasaragod

Sri C. Ramaswamy, Chennai

Sri H. Ramachandrappa, Ananthpura

ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ

ಡಾ. ಕಮಲಾ ಹಂಪನಾ, ಬೆಂಗಳೂರು

ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀಮತಿ ಭಾನು ಮುಷ್ತಾಕ್, ಹಾಸನ

ಶ್ರೀ ರಫಾಯಲ್ ರಾಜ್, ಬೆಂಗಳೂರು

ಡಾ. ಎಲ್. ಹನುಮಂತಯ್ಯ, ಬೆಂಗಳೂರು

ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ

ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲುಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ನುಡಿ

'ಕನ್ನಡ ಸಾಹಿತ್ಯ ಪರಿಷತ್ತು' ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ. ಕ್ರಿ.ಶ.೧೯೧೫ರಲ್ಲಿ ಆರಂಭಗೊಂಡ ಈ ಸಂಸ್ಥೆ ಶತಮಾನದತ್ತ ದಾಪುಗಾಲು ಹಾಕುತ್ತಿರುವುದು ನಮಗೆಲ್ಲ ಅಭಿಮಾನದ ಸಂಗತಿ. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಉಳಿಸಿ, ಬೆಳೆಸಿ, ಕಾಪಾಡುವ ಹೊಣೆ ಈ ಪರಿಷತ್ತಿನದು. ಇದರ ಚುಕ್ಕಾಣಿ ಹಿಡಿದು ಇದುವರೆಗೆ ಶ್ರಮಿಸಿದವರು ಅನೇಕ ಮಹನೀಯರು. ಈ ನಾಡಿನ ಸಾಹಿತ್ಯದ ಭವ್ಯ ಪರಂಪರೆಯನ್ನು ಜನಸಾಮಾನ್ಯರಿಗೆ ಪರಿಚಯಿಸುವ ಹಾಗೂ ಅವರನ್ನು ಮುಖ್ಯವಾಹಿನಿಯಲ್ಲಿ ತರುವ ೭೧ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಕರ್ನಾಟಕ ರಾಜ್ಯದ ಒಳಹೊರಗೆ ನಡೆದಿರುವುದು ಉಲ್ಲೇಖನೀಯ. ಈ ಮೂಲಕ ಪ್ರತಿಯೊಂದು ಸಮ್ಮೇಳನಕ್ಕೆ ಒಬ್ಬರಂತೆ ಸಮ್ಮೇಳನಾಧ್ಯಕ್ಷರನ್ನು ಆಯ್ಕೆಮಾಡಿ ಅವರನ್ನು ಗೌರವಿಸುವ, ಅವರ ವಿಚಾರಗಳನ್ನು ದಾಖಲಿಸುವ ಸತ್‌ಸಂಪ್ರದಾಯ ನಡೆದು ಬಂದಿರುವುದು ಹೆಮ್ಮೆಯ ವಿಚಾರ. ಹೀಗೆ ಇದುವರೆಗೆ ಗೌರವಿಸಲ್ಪಟ್ಟವರು ಎಪ್ಪತ್ತೊಂದು ಜನ ಅಗ್ರಗಣ್ಯ ಸಾಹಿತಿಗಳು. ಪ್ರತಿಯೊಂದು ಸಮ್ಮೇಳನದಲ್ಲಿ ಕೋಟಿಗಟ್ಟಲೇ ಹಣದ ಗ್ರಂಥಗಳು ಮಾರಾಟವಾಗುತ್ತಿರುವುದು ಪುಸ್ತಕ ಸಂಸ್ಕೃತಿಯ ದ್ಯೋತಕ. ವರುಷದಿಂದ ವರುಷಕ್ಕೆ ಈ ಸಮ್ಮೇಳನಗಳು ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿರುವುದು ಇವುಗಳ ಪ್ರಯೋಜನಕ್ಕೆ ಸಾಕ್ಷಿ. ಒಟ್ಟಿನಲ್ಲಿ ಈ ಸಾಹಿತ್ಯ ಸಮ್ಮೇಳನಗಳೆಂದರೆ ನಮ್ಮ ನಾಡಿನ ಸಾಹಿತ್ಯ-ಸಂಸ್ಕೃತಿಯ ಜ್ಞಾನದಾಸೋಹಗಳು; ಜನ ಸಮೂಹದ ಸಾಂಸ್ಕೃತಿಕ ಜಾತ್ರೆಗಳು!

ಇದೀಗ ಬೀದರದಲ್ಲಿ ಬರುವ ಜನವರಿಯಲ್ಲಿ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಶ್ರೀ ಶಾಂತರಸರು ಆಯ್ಕೆಯಾಗಿದ್ದಾರೆ. ಸಮ್ಮೇಳನದ ತಯಾರಿ ಭರದಿಂದ ಸಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕೇಂದ್ರದ ಅಧ್ಯಕ್ಷರಾಗಿ ಪ್ರೊ. ಚಂದ್ರಶೇಖರ ಪಾಟೀಲರು ಆರಿಸಿಬಂದ ಮೇಲೆ ಕ್ರಿಯಾಶೀಲರಾದ ಅವರಿಂದ ಪರಿಷತ್ತಿನ ಕಾರ್ಯಯೋಜನೆಗಳು ತೃಪ್ತಿಕರವಾಗಿ ಸಾಗಿವೆ. ಈ ಸಮ್ಮೇಳನದ ಸವಿನೆನಪಿಗಾಗಿ ೭೨ ಗ್ರಂಥಗಳನ್ನು ಬರೆಯಿಸಿ ಪ್ರಕಟಿಸುವ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲರು 'ಕೃಷಿ ಜಾನಪದ' ಕುರಿತು ಒಂದು ಗ್ರಂಥ ಬರೆದು ಕೊಡುವ ಹೊಣೆ ನನಗೆ ಹೊರಿಸಿದರು. ಜಾನಪದ ಕ್ಷೇತ್ರ ನನಗೆ ಪ್ರಿಯವಾದುದು. ಈ ಕ್ಷೇತ್ರದಲ್ಲಿ ನಾನು ಈಗಾಗಲೇ ಒಂದಿಷ್ಟು ಕಾರ್ಯ ಮಾಡಿರುವುದರಿಂದ ಅವರ ಆದೇಶವನ್ನು ಮೌನವಾಗಿ ಒಪ್ಪಿಕೊಂಡೆ. ಅವರು ಕೊಟ್ಟ ಅಲ್ಪಾವಧಿಯಲ್ಲಿ ಈ ಕಾರ್ಯಮಾಡಿ ಮುಗಿಸಿದ ತೃಪ್ತಿ ನನಗಿದೆ.

ಜಾನಪದ ಕ್ಷೇತ್ರ ತುಂಬ ವಿಸ್ತಾರವಾದುದು. ಭೂಮಿಯ ಒಳಗಿನಿಂದ ಬೆಳೆದು ಆಕಾಶದಕಡೆಗೆ ಅರಳಿನಿಲ್ಲುವ ಕ್ರಿಯೆಯೇ ಜಾನಪದ. ಇದರಲ್ಲಿ ಮಾನವಿಕ ಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ ಹೀಗೆ ಹಲವಾರು ಶಾಸ್ತ್ರಗಳ ಬೇರುಗಳಿವೆ.

'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಮಾತು ಜನಪದ ಸಾಹಿತ್ಯದ ಹಿರಿಮೆಗೆ ಸಾಕ್ಷಿ. ನಮ್ಮದು ಕೃಷಿಪ್ರಧಾನ ದೇಶ. ಈ ಮಾತು ನಮ್ಮ ನಾಡಿಗೂ ಇಡಿಯಾಗಿ ಅನ್ವಯಿಸುತ್ತಿದೆ. ನಮ್ಮದು ಕೃಷಿ ಸಂಸ್ಕೃತಿ. ನೂರಕ್ಕೆ ೮೦ರಷ್ಟು ಜನರು ಕೃಷಿಯನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಕೃಷಿಗೆ ಸಂಬಂಧಿಸಿದ ರೈತನ ಜೀವನಾನುಭವಗಳು ಬಹುಕಾಲದಿಂದ ಸಾಗಿ ಬಂದಿವೆ. ಕೃಷಿಕ ನೇಗಿಲು ಯೋಗಿಯೂ ಅಹುದು; ಕಾಯಕ ಜೀವಿಯೂ ಅಹುದು. ದಾಸೋಹ ರೈತನಲ್ಲಿ ರಕ್ತಗತ. ಒಟ್ಟಿನಲ್ಲಿ ಅವನದು ಆದರ್ಶ ಬದುಕು. ಕೋಟಿ ವಿದ್ಯೆಗಳಲ್ಲಿ ಅವನದು ಮೇಲಾದ ಮೇಟಿವಿದ್ಯೆ! ಕೃಷಿಗೆ ಸಂಬಂಧಿಸಿದ ಜಾನಪದರ ಬದುಕಿನ ಸಂಗತಿಗಳನ್ನು ಇಲ್ಲಿಯ ಈ ಕೃತಿಯಲ್ಲಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಈ ಅವಕಾಶವನ್ನು ಒದಗಿಸಿಕೊಟ್ಟ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೂ, ಪುಸ್ತಕ ಪ್ರಕಟಣಾ ಆಯ್ಕೆ ಸಮಿತಿಯ ಸರ್ವರಿಗೂ, ಸಮ್ಮೇಳನದ ಸ್ವಾಗತಸಮಿತಿಯ ಎಲ್ಲಾ ಪದಾಧಿಕಾರಿಗಳಿಗೂ ಹತ್ತು ಬಳ್ಳಚ್ಚಿ ನಮನ ಸಲ್ಲಿಸುವೆ.

ವಿಜಾಪುರ

ಡಾ. ಎಂ. [illegible] ವಾಲಿ

ಪರಿವಿಡಿ

ಕೃಷಿ ಜಾನಪದ

ಜಾನಪದ ಕ್ಷೇತ್ರ ವಿಸ್ತಾರವಾದುದು. ಅದರ ಬೇರುಗಳನ್ನು ಹಲವು ಶಾಸ್ತ್ರಗಳಲ್ಲಿ ಕಾಣುತ್ತೇವೆ. ಜಾನಪದದ ಕೊಡುಗೆ ಮಾನವ ಸಂಸ್ಕೃತಿಗೆ ಅಪಾರ. ಜಾನಪದದ ಪೂರ್ಣ ಜ್ಞಾನವಿಲ್ಲದೆ ಮಾನವ ಸಂಸ್ಕೃತಿಯ ಸಮಗ್ರ ಅಧ್ಯಯನ ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಜಾನಪದ ಎಂದರೇನು? ಎಂಬ ಪ್ರಶ್ನೆಗೆ ವ್ಯಾಖ್ಯೆ ಕೊಡುವುದು ದುಸ್ತರ; ಅದಕ್ಕೆ ವ್ಯಾಖ್ಯಾನವೇ ಬೇಕು. ತೀರ ಸಂಕ್ಷಿಪ್ತವಾಗಿ ಹೇಳುವದಾದರೆ ಭೂಮಿಯ ಒಳಗಿಂದ ಅಂಕುರಿಸಿ ಆಕಾಶದ ಕಡೆಗೆ ಅರಳಿನಿಲ್ಲುವ ಪ್ರಕ್ರಿಯೆಯನ್ನು ಜಾನಪದ ಎಂದು ಹೇಳಬಹುದು. ಒಟ್ಟಿನಲ್ಲಿ ಇದು ವಿರಾಟಸ್ವರೂಪಿ, ವಿಶ್ವವ್ಯಾಪಿ. ಇದಕ್ಕೆ ಸಾವಿಲ್ಲ ಅಂದರೆ ಇದು ಚಿರಂಜೀವಿ. ಜಾನಪದದಲ್ಲಿ ಜನಪದ ಸಾಹಿತ್ಯ, ಕಲೆ, ವಿಜ್ಞಾನ, ಜನತೆಯ ಸಂಸ್ಕೃತಿ –ಮೊದಲಾದವುಗಳು ಸಮಾವೇಶವಾಗುತ್ತವೆ.

'ಜಾನಪದ ಸಾಹಿತ್ಯ' – ಹಳ್ಳಿಯ ಬೆಳ್ಳಿ– ಬಂಗಾರ; ಮುತ್ತು–ಮಾಣಿಕ. ಇದು ಹಾಲು–ಜೇನಿನ ಹಿರಿಹೊಳೆ. ಈ ಸಾಹಿತ್ಯರಾಶಿ ಮುಗಿಯದಂತಹದು. ''ಕೈಯಿಂದ ಕೆಲಸ, ತಲೆಯಿಂದ ವಿಚಾರ, ಹೃದಯದಿಂದ ಪ್ರೀತಿ– ಈ ಮೂರರ ಸಮನ್ವಯವೇ ಯೋಗ. ಇದೇ ಸಾಮಾನ್ಯ ಜೀವನಯೋಗ. ಸಾಮಾನ್ಯ ಜೀವನವೆಂದರೆ ಜಾನಪದ ಜೀವನ''. ಮಂಗಳೂರಿನಲ್ಲಿ ನಡೆದ ಎರಡನೆಯ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಡಾ. ಸಿಂಪಿ ಲಿಂಗಣ್ಣನವರು ಹೇಳಿದ ಮಾತಿದು. ಅಂತೆಯೇ ಜಾನಪದಕ್ಕೆ ಇಷ್ಟೊಂದು ಮಹತ್ವ. ಜನಪದ ಸಾಹಿತ್ಯದಲ್ಲಿ ಜನಪದ ಹಾಡು, ಕಥೆ, ಗಾದೆ, ಒಗಟು–ಒಡಪು ಇತ್ಯಾದಿ ಸಮಾವೇಶವಾಗುತ್ತವೆ. ಹೀಗಾಗಿ ಇದು ಒಂದು ಇಡೀ ಜನಾಂಗದ ಸಮಗ್ರಜೀವನದ ಜೀವನಾಡಿ ಎನಿಸಿದೆ. ಇದರ ಸತ್ವವೇ ಸತ್ವ! ಇದರ ಚೆಲುವೇ ಚೆಲುವು!! ಅಶಿಕ್ಷಿತರ ಅಂತರಂಗದ ಅಮೂಲ್ಯರತ್ನವಿದು !!!

ಸ್ವಾತಂತ್ರ್ಯಾನಂತರದ ವ್ಯಕ್ತಿಸ್ವಾತಂತ್ರ್ಯ ಹಾಗೂ ಬುದ್ಧಿಸ್ವಾತಂತ್ರ್ಯಗಳ ಕಾರಣದಿಂದಾಗಿ ವ್ಯಕ್ತಿ ತನ್ನ ಹಿಂದಿನ ರೀತಿ–ನೀತಿಗಳನ್ನು ತೀವ್ರವಾಗಿ ಬದಲಾಯಿಸಿಕೊಳ್ಳತೊಡಗಿದ್ದಾನೆ. ಹೀಗಾಗಿ ಜಾನಪದ ಸಾಹಿತ್ಯ ನಶಿಸತೊಡಗಿದೆ. ಯಾಂತ್ರೀಕೃತ ಬದುಕಿಗೊಳಗಾದ ಎಲ್ಲಾ ದೇಶಗಳಲ್ಲಿಯೂ ಇದೇ ಸ್ಥಿತಿ ತಲೆದೋರಿದೆ. ಇದು ಅನಿವಾರ್ಯ. ಏಕೆಂದರೆ ಬೇವು ಬಿತ್ತಿ ಬೆಲ್ಲ ಪಡೆಯುವುದು ಹೇಗೆ ಸಾಧ್ಯ? ಯಂತ್ರಗಳು ಬಂದಂದಿನಿಂದ ಬೀಸುವ ಕಲ್ಲು, ಒರಳು–ಒನಕೆಗಳು ಮಾಯವಾಗಿವೆ. ಇದರೊಡನೆ ಬೀಸುವ–ಕುಟ್ಟುವ ಹಾಡುಗಳು

ಅರ್ಥಕಳೆದುಕೊಂಡಿವೆ. ಮೂರು ದಿನಗಳ ಮದುವೆ ನಿಂತುಹೋಗಿ ತಾಸೊಪ್ಪತ್ತಿನ ಮದುವೆ ನಡೆಯುತ್ತಿರುವಾಗ ಮದುವೆಯ ವಿವಿಧ ಸಂದರ್ಭದ ಹಾಡುಗಳಿಗೆ ಉಳಿಗಾಲವಿಲ್ಲದಂತಾಗಿದೆ. ಇಂದಿನ ಹಳ್ಳಿಗಳಲ್ಲಿ ಹಬ್ಬ-ಹುಣ್ಣಿಮೆಗಳ ಸಡಗರ ಹಿಂದಿನಂತಿಲ್ಲ. ಅವು ಅರ್ಥ ಕಳೆದುಕೊಂಡು ಕಾಟಾಚಾರಕ್ಕಾಗಿ ಉಳಿದಿವೆ. ಜಾನಪದಕಲೆಗಳ ಸ್ಥಿತಿಯೂ ಇದಕ್ಕೆ ಭಿನ್ನವಾಗಿಲ್ಲ. ಈ ಸಾಹಿತ್ಯ-ಕಲೆಗಳು ನಮ್ಮ ಜನಜೀವನದ ಭಾಗೀರಥಿ. ಇವನ್ನು ರಕ್ಷಿಸುವ ಭಾರ ನಮ್ಮದೇ ಎಂಬುದರಲ್ಲಿ ಎರಡು ಮಾತಿಲ್ಲ.

ನಮ್ಮದು ಕೃಷಿಪ್ರಧಾನವಾದ ದೇಶ. ಈ ಮಾತು ನಮ್ಮ ನಾಡಿಗೂ ಅನ್ವಯಿಸುವುದು. ಪ್ರತಿಶತ 80 ರಷ್ಟು ಜನರು ಬೇಸಾಯವನ್ನೇ ಅವಲಂಬಿಸಿ ಬದುಕುತ್ತಿದ್ದಾರೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು; ಕೃಷಿಯಿಂದ ಖುಷಿ; ಉತ್ತಮ ಬೇಸಾಯ ಮಧ್ಯಮ ವ್ಯಾಪಾರ ಕನಿಷ್ಠ ನೌಕರಿ; ಕೈ ಕೆಸರಾದರೆ ಬಾಯಿ ಮೊಸರು, ಒಕ್ಕಲಿಗನೊಕ್ಕದಿರೆ ಬಿಕ್ಕುವದು ಜಗವೆಲ್ಲ- ಮುಂತಾದ ಗಾದೆಗಳು ಕೃಷಿಯ ಮಹತಿಯನ್ನು ಎತ್ತಿ ಸಾರುತ್ತವೆ. ಜಾನಪದಕ್ಕೂ ಕೃಷಿಗೂ ಅವಿನಾಭಾವಿ ಸಂಬಂಧವಿದೆ. ಕೃಷಿ ಸಂಸ್ಕೃತಿ ನಶಿಸಿದರೆ ಉಳಿಗಾಲವಿಲ್ಲ. ಕೃಷಿ-ಜಾನಪದವನ್ನು ಕುರಿತು ಈ ಮುಂದಿನ ಪುಟಗಳಲ್ಲಿ ವಿವರಿಸಲಾಗಿದೆ.

1. ಭೂಮಿತಾಯಿ

ಬೆಳಗಾಗಿ ನಾನೆದ್ದು ಯಾರ್‍ಯಾರ ನೆನೆಯಲಿ।
ಎಳ್ಳು ಜೀರಿಗಿ ಬೆಳೆಯೋಳ । ಭೂಮಿತಾಯಿ ।
ಎದ್ದೊಂದು ಗಳಿಗಿ ನೆನದೇನ ॥

ಜನಪದರ ದೃಷ್ಟಿಯಲ್ಲಿ ಭೂಮಿತಾಯಿ ಪ್ರಥಮದೈವತ. ಅವಳು ಜಗದಾಧಾರ. ಅವಳಿತ್ತ ಬೆಳೆ ಮಾನವಕೋಟಿಯ ಪ್ರಸಾದ. ಕೃಷಿಕನಿಗೆ ಭೂಮಿ ಬರಿಯ ಭೂಮಿಯಲ್ಲ. ಅವಳು ಭೂಮಿತಾಯಿ; ಭೂದೇವಿ. ಅಂತೆಯೇ ಅವರು ಎದ್ದೊಡನೆ ಒಂದು ಗಳಿಗೆಯಾದರೂ ಆ ತಾಯಿಯನ್ನು ನೆನೆಯದೆ ಇರಲಾರರು. ಇಲ್ಲಿ ಜನಪದರ ಕೃತಜ್ಞತಾ ಭಾವವನ್ನು ಕಾಣುತ್ತೇವೆ.

ಜನಪದರಿಗೆ ಭೂವ್ಯಾಮೋಹ ಹೆಚ್ಚು. ಅವರ ಸಂಸ್ಕೃತಿಯ ಹಿನ್ನೆಲೆಯಲ್ಲಿ ಇದು ಸ್ವಾಭಾವಿಕವೂ ಅಹುದು. ವಾಸ್ತವವಾಗಿ ಆದಿಮಾನವನಿಂದ ಮೊದಲುಗೊಂಡು ಇಂದಿನವರೆಗೂ ಎಲ್ಲರೂ ಬಯಸುವುದು ಹೆಣ್ಣು, ಹೊನ್ನು ಮತ್ತು ಮಣ್ಣು ಈ ಮೂರನ್ನೇ. ಈ ಮೋಹಕ್ಕೆ ಒಳಗಾಗಿ ಬಾಳುತ್ತಿರುವ ಜನಾಂಗದ ಇತಿಹಾಸವನ್ನು ಮಾನವ ಶಾಸ್ತ್ರದಲ್ಲಿ ಕಾಣುತ್ತೇವೆ. ಈ ಮೂರರ ಕಾರಣವಾಗಿಯೇ ರಾಮಾಯಣ, ಮಹಾಭಾರತ, ಇಲಿಯಡ್, ಒಡಿಸ್ಸಿ- ಮೊದಲಾದ ಜಗದ್ವಿಖ್ಯಾತ ಮಹಾಕಾವ್ಯಗಳು ರೂಪುಗೊಂಡವೆಂಬುದು ಎಲ್ಲರಿಗೂ ತಿಳಿದ ಸಂಗತಿ. ಜನಪದರು ಭೂಮಿತಾಯಿಯನ್ನು ಭಕ್ತಿ ಗೌರವಗಳಿಂದ ಕಾಣುತ್ತ ಬಂದಿದ್ದಾರೆ. ನಾಗರಿಕರಿಗಾದರೂ ಒಳ್ಳೆಯ ಭೂಮಿ ಕಂಡಾಗ ಪ್ರೀತಿಯುಂಟಾಗುವುದು ಸಹಜ. ಆದರೆ ಭೂಮಿಯ ಮೇಲೆ ಜಾನಪದರಿಗಿರುವಂತಹ ಪೂಜ್ಯ ಭಾವನೆ ಇವರಿಗೆ ಇರಲಾರದು.

'ಹಣವೆಂದರೆ ಹೆಣವೂ ಬಾಯಿಬಿಡುತ್ತದೆ' ಎಂಬುದೊಂದು ಗಾದೆ. ಇದರಂತೆ- 'ಜಮೀನು ಎಂದರೆ ಜವರಾಯ (ಯಮರಾಜ)ನೂ ಎದ್ದು ಕುಳಿತ'- ಎಂಬ ಹೊಸಗಾದೆ ನಿರ್ಮಿಸುವಷ್ಟರ ಮಟ್ಟಿಗೆ ಕೃಷಿಕರಿಗೆ ಭೂವ್ಯಾಮೋಹ. ನಾವು ಭೂಮಿತಾಯಿಯ ಮಕ್ಕಳು, ಮಣ್ಣಿನ ಮಕ್ಕಳು, ಒಕ್ಕಲು ಮಕ್ಕಳು, ಬೇಸಾಯಗಾರರು ಎಂದು ಅಭಿಮಾನದಿಂದ ಕರೆದುಕೊಳ್ಳುವ ಇವರಿಗೆ ಭೂಮಿ ಎಂಬುದು ಕೇವಲ ಮಣ್ಣಲ್ಲ; ಶಾಶ್ವತ-ಮೌಲ್ಯವುಳ್ಳ ಒಬ್ಬ ಜಾನಪದನ ಶಕ್ತಿ, ದಕ್ಷತೆ, ಸ್ವಾಭಿಮಾನ ಹಾಗೂ ತನ್ನ ಪೀಳಿಗೆಯವರ ಮೇಲಿನ ಪ್ರೀತಿ ವಿಶ್ವಾಸ ಇತ್ಯಾದಿ ಅನೇಕ ಜೀವನ ಮೌಲ್ಯಗಳ ಸಂಕೇತವಾಗಿರುವ, ಬದುಕಿಗೆ ಬೆಂಬಲ

ಹಾಗೂ ಉತ್ಸಾಹ ತುಂಬುವ ವಿಶಿಷ್ಟ ಸೂಹ್ರ್ತಿಯ ಸೆಲೆ, ಶಾಶ್ವತ ನೆಲೆ ಆ ಭೂಮಿ. ಅಂತೆಯೇ ಅವರು ಬದುಕಿರುವವರೆಗೂ ಅದರಲ್ಲಿ ದುಡಿದಿದ್ದಾರೆ; ಪ್ರಸಂಗ ಬಂದಾಗ ಹೊಡೆದಾಡಿ ಮಡಿದಿದ್ದಾರೆ; ಅದನ್ನೇ ನಂಬಿ ಮುನ್ನಡೆದಿದ್ದಾರೆ.

ಹೆಣ್ಣು ಆಗೂದಕಿಂತ ಮಣ್ಣು ಆಗೂದು ಲೇಸ ।
ಮಣ್ಣಿನ ಮ್ಯಾಲ ಮರವಾಗಿ । ಬೆಳದರ ॥
ಪುಣ್ಯವಂತರಿಗೆ ನೆರಳಾದೆ ॥

ಹೆಣ್ಣಿನ ಕಾಯವ ಮಣ್ಣು ಮಾಡಲಿಬೇಕ ।
ಸುಣ್ಣದ್ಹರಳಾಗಿ ಸುಡಬೇಕ । ಈ ಜನುಮ ।
ಮಣ್ಣು ಮಾಡಿ ಮರ್ತ್ಯ ಗೆದಿಬೇಕ ॥

ಎಂಬ ಈ ಜನಪದ ಗರತಿಯ ಹಾಡಿನಲ್ಲಿ ಮಣ್ಣಿನ ಮಹತಿಯನ್ನು ಕಾಣುತ್ತೇವೆ. ಬೇಸಾಯಗಾರರು ಮಣ್ಣಿನಿಂದ ಅನ್ನವನ್ನು ಬೆಳೆದು ಜನಕೋಟಿಯನ್ನು ರಕ್ಷಿಸುತ್ತಾರೆ. ಮನೆಯ ಅಂದವನ್ನು ಹೆಚ್ಚಿಸಲು ಅಂಗಳಕ್ಕೆ ಕೆಮ್ಮಣ್ಣು ಹರವಿ ಸಂತಸಪಡುತ್ತಾರೆ. ಗರ್ಭಿಣಿಯರು ಕೆಂಪುಮಣ್ಣು ಬಯಸಿ, ತಿಂದು ಕೆಂಪುಬಣ್ಣದ ಮಕ್ಕಳನ್ನು ಹಡೆಯುವ ಕನಸು ಕಾಣುವುದುಂಟು. ಹೊಲಗದ್ದೆಗಳಲ್ಲಿ ದುಡಿಯುವ ರೈತರು ಮುಖತೊಳೆದ ಮೇಲೆ ಅದೇ ನೆಲದ ಮಣ್ಣನ್ನು ಗಂಧ, ವಿಭೂತಿಯಂತೆ ಹಣೆಗೆ ಧರಿಸುವರು. ಕುಸ್ತಿ ಪಟುಗಳು ಕುಸ್ತಿ ಕಣದಲ್ಲಿ ಕುಸ್ತಿ ಆಡುವಾಗ ಕೈಕೈಹಿಡಿಯುವ ಮೊದಲು ಭೂಮಿಯ ಮಣ್ಣನ್ನು ಪರಸ್ಪರ ಹಂಚಿಕೊಂಡು ಕುಸ್ತಿ ಆಡುವದುಂಟು. ರೈತಾಪಿ ಕುಟುಂಬಗಳಲ್ಲಿ ಸತ್ತವರನ್ನು ಮಣ್ಣು ಮಾಡುವ (ಹೂಳುವ) ಪದ್ಧತಿಯಿದೆ. ಮಣ್ಣಿನ ಮಕ್ಕಳು ಓದು ಬರಹ ಕಲಿಯುವದಾದರೆ ಮಣ್ಣಿನ ಮೇಲೆ ಬರೆಯುತ್ತಲೋ, ಹರಳು ಎಣಿಸುತ್ತಲೋ ಕಲಿಯುವರು ಎಂಬುದು, ಎಲ್ಲರಿಗೂ ತಿಳಿದ ಸಂಗತಿ. ವ್ಯವಸಾಯ ಇಂದಿನ ದಿನಗಳಲ್ಲಿ ಲಾಭದಾಯಕವಲ್ಲವೆಂಬುದು ಅರಿತಿದ್ದರೂ ಅವರಿಗೆ ಭೂಮಿಯ ಮೇಲಿನ ಮಮತೆ-ಕಡಿಮೆಯಾಗಿಲ್ಲ. ಹೀಗಿದ್ದರೂ ಕೆಲವು ರೈತಾಪಿ ಜನರು ಅsಕ ಸೌಕರ್ಯಗಳ ಆಮಿಷದಿಂದಾಗಿ ಪಟ್ಟಣಗಳತ್ತ ವಾಲುತ್ತಿರುವದು ಕಂಡುಬರುತ್ತದೆ. ಹೀಗೆ ತಮ್ಮ ಭೂಮಿ ಮಾರಾಟಮಾಡಿ ಪಟ್ಟಣ ಸೇರುವವರಲ್ಲಿ ಬ್ರಾಹ್ಮಣರೇ ಅsಕವಾಗಿದ್ದಾರೆ. ಇಷ್ಟಾಗಿಯೂ ಭೂಮಿಯ ಬೆಲೆ ಹೆಚ್ಚಾಗುತ್ತಲೇ ನಡೆದುದು ಗಮನಿಸಬೇಕಾದ ಅಂಶ. ಹಣವಿದ್ದರೆ ಬಂಗಾರ ಸಿಗಬಹುದು, ಬೆಳೆಯುಳ್ಳ ಭೂಮಿಸಿಗುವದು ದುರ್ಲಭ ಎಂಬುದು ಜಾನಪದರ ನಂಬಿಗೆ. ಜಾನಪದರ ಕಾಯಕ ನಿಷ್ಠೆ ಅನೇಕರಿಗೆ ಆದರ್ಶಪ್ರಾಯ. ಬಸವಣ್ಣ ಮೊದಲಾಗಿ ಎಲ್ಲಾ ಶರಣರು

ಕಾಯಕ ತತ್ತ್ವವನ್ನು ಕೃಷಿಕರಿಂದಲೇ ಕಲಿತರೆಂದು ಕಾಣುತ್ತದೆ. ಮೈಯಲ್ಲಿ ಶಕ್ತಿ ಇರುವವರೆಗೂ ದುಡಿದು, ಕೈ ನಡೆಯುವವರೆಗೆ ಇದ್ದುದರಲ್ಲಿಯೇ ದಾನ ಧರ್ಮ ಮಾಡಿ, ಒಳ್ಳೆಯವರೆನಿಸಿಕೊಂಡು ಬದುಕಿ ಕೊನೆಗೊಂದು ದಿನ ಸಾಯುವದು ಜಾನಪದರ ಜೀವನದ ಪರಮ ಆದರ್ಶ. ಇತರ ಜನತೆಯಂತೆ, ಹೇಗಾದರೂ ಹಣ ಸಂಪಾದಿಸಿ ಚೆನ್ನಾಗಿ ತಿಂದು, ಕುಡಿದು ಮಜಾ ಮಾಡಿದ್ದೇ ಬಂತು ಎನ್ನುವ ಜಾಯಮಾನ ಕೃಷಿಕರದಲ್ಲ. ಅದರಲ್ಲಿಯೂ ಜಾನಪದ ಗರತಿ 'ಮಾರಾಯ್ರ ಮುಂದೆ ಮರಣವನ್ನು ದಯಪಾಲಿಸೆಂದು' ಕೇಳಿಕೊಳ್ಳುತ್ತಾಳೆ. ಒಟ್ಟಿನಲ್ಲಿ ಅವರ ಬದುಕು ತೆರೆದ ಪುಸ್ತಕದಂತೆ. ಓದುಬಲ್ಲವರು ಅವರ ಸಂಸ್ಕೃತಿಯನ್ನು ಅಚ್ಚಳಿಯದಂತೆ ಅರಿತುಕೊಳ್ಳವುದು ಸುಲಭ ಸಾಧ್ಯ. ಅದಕ್ಕೆ ಅಗತ್ಯವಾದುದು ಸಹಾನುಭೂತಿ ಮತ್ತು ತಾಳ್ಮೆ ಎನ್ನಲಡ್ಡಿಯಿಲ್ಲ.

ಜಾನಪದರು ಶ್ರಮಜೀವಿಗಳು. ಅವರಿಗೂ ಇತರರಂತೆ ಸುಖಪಡುವ ಹಂಬಲ ವಿರುವುದು ಸಹಜ. ಆದರೆ ಮಳೆಯಾಶ್ರಿತ ಭೂಮಿಯ ರೈತರ ಸಂಖ್ಯೆಯೇ ಅಽಕವಾಗಿದ್ದು ಸಕಾಲಕ್ಕೆ ಮಳೆಯಾಗಿ ರೋಗವಿಲ್ಲದೆ ಬೆಳೆಬಂದರೆ ಅವರ ಆನಂದಕ್ಕೆ ಪಾರವಿಲ್ಲ. ಮಳೆ ಕೈಕೊಟ್ಟು ಬರಪೀಡಿತರಾದರೆ ಅವರ ಗೋಳು ಹೇಳತೀರದು. ಮೇಲಿಂದ ಮೇಲೆ ಇಂತಹ ಪ್ರಸಂಗಗಳು ಉಂಟಾಗುತ್ತಿದರೆ ಇವರು ಬೇರೆಕಡೆಗೆ ವಲಸೆ ಹೋದ ಉದಾಹರಣೆಗಳೂ ಉಂಟು. ಸ್ವಾತಂತ್ರ್ಯಾನಂತರದ ಇತ್ತೀಚಿನ ಕಾಲದಲ್ಲಿ ಉನ್ನತ ಶಿಕ್ಷಣದ ಅನುಕೂಲತೆಗಳು ಗ್ರಾಮೀಣ ಪ್ರದೇಶಗಳಿಗೂ ಉಂಟಾಗಿ ಅನೇಕ ಯುವಕರು ವಿದ್ಯಾವಂತರಾದರು. ಇಂತಹ ಸುಶಿಕ್ಷಿತರು ನೌಕರಿ ಬಯಸಿ ತಮ್ಮ ಮೂಲ ಉದ್ಯೋಗ ತ್ಯಜಿಸಿ ಪಟ್ಟಣ ಸೇರಿ ಗುಮಾಸ್ತರಾಗಿ ಇಲ್ಲವೆ ಶಿಕ್ಷಕರಾಗಿ ಬದುಕತೊಡಗಿದರು. ಇವರನ್ನು ಆಶ್ರಯಿಸಿದ ವೃದ್ಧ ತಂದೆ ತಾಯಿಗಳೂ ಮಕ್ಕಳ ಬೆನ್ನು ಹತ್ತಿ ಪಟ್ಟಣ ಸೇರಿದರು. ಹೀಗಾಗಿ ಇವರು ಬೇಸಾಯದಿಂದ ದೂರವಾದ ಉದಾಹರಣೆಗಳೂ ಉಂಟು. ಒಂದು ದೃಷ್ಟಿಯಿಂದ ಇದು ನಾಗರಿಕತೆಯ ಸಂಕೇತ. ಆದರೆ ಪರಂಪರಾಗತ ಜಾನಪದ ಸಂಸ್ಕೃತಿಯ ಅವಸಾನವೂ ಇಲ್ಲಿಯೇ ಕಾಣಸಿಗುತ್ತದೆ. ಎಷ್ಟಾದರೂ ಮಾನವ ಪರಿಸ್ಥಿತಿಯ ಕೈಗೊಂಬೆ. ಜಾನಪದರಲ್ಲಿ ತಾಳ್ಮೆ ಹೆಚ್ಚು. ಜೀವನ ಮೌಲ್ಯಗಳನ್ನು ಕಾಪಾಡಿಕೊಂಡು ಬಂದವರು. ಸಮಾಜದ ಹಿತಕ್ಕಾಗಿ ಸ್ವಂತ ಮಕ್ಕಳು, ಸೊಸೆಯನ್ನು ಬಲಿದಾನ ಮಾಡಿದ ನಿದರ್ಶನಗಳು ಜಾನಪದ ಕಥನ ಗೀತೆಗಳಲ್ಲಿ ಕಾಣಸಿಗುತ್ತವೆ.

ಜಾನಪದರು ಸಂಪ್ರದಾಯಗಳನ್ನು ಅಂಧಶ್ರದ್ಧೆಯಿಂದ ನಂಬಿಕೊಂಡು ಬಂದಿದ್ದಾರೆ. ಅವುಗಳನ್ನು ತಿಳಿದೋ ತಿಳಿಯದೆಯೋ ಆಚರಿಸುತ್ತ ಮುಂದಿನ ಪೀಳಿಗೆಗೆ ಸಾಗಿಸುತ್ತ ಬರಲಾಗಿದೆ. ಅಂತೆಯೇ ಈ ಸಂಪ್ರದಾಯಗಳು ಅರ್ಥ ಕಳೆದುಕೊಂಡರೂ

ಉಳಿದುಬಂದಿವೆ. ಇವು ಋತುಮಾನಕ್ಕನುಸಾರವಾಗಿ ಬಂದಿರುವುದನ್ನು ಕಾಣುತ್ತೇವೆ. ಮಳೆಗಾಲದಲ್ಲಿ ಮಣ್ಣಪೂಜೆಗೆ ಸಂಬಂಧಿಸಿದ ಸಂಪ್ರದಾಯಗಳು ಆಚರಣೆಯಲ್ಲಿವೆ. ಚಳಿಗಾಲದಲ್ಲಿ ಸುಗ್ಗಿಯೊಂದನ್ನುಳಿದರೆ ವಿಶೇಷ ಸಂಪ್ರದಾಯಗಳಿಲ್ಲ. ಬೇಸಿಗೆ ರೈತನಿಗೆ ವಿರಾಮಕಾಲ. ಈ ಕಾಲದಲ್ಲಿ ಜಾತ್ರೆ, ರಥೋತ್ಸವಗಳು, ಮದುವೆ-ಮಂಗಲಕಾರ್ಯಗಳು ವಿಶೇಷವಾಗಿ ಕಂಡುಬರುತ್ತವೆ.

ಅರಳೆಲೆ ಬಸವ: (ಮಣ್ಣಿನ ಪ್ರಥಮ ಪೂಜೆ)

ಮಣ್ಣಪೂಜೆಯೆಂದರೆ ಭೂಮಿತಾಯಿಯ ಪೂಜೆ. ಇಂತಹ ಪೂಜೆಗಳು ಮಳೆಗಾಲದಲ್ಲಿ ಅನೇಕ ರೂಪಗಳಲ್ಲಿ ಕಾಣಸಿಗುತ್ತವೆ. ಮಳೆಗಾಲದ ಆರಂಭದಲ್ಲಿ ಚೆನ್ನಾಗಿ ಮಳೆಯಾಗಲು ರೈತನು ಭೂಮಿತಾಯಿಯ ಉಡಿ ತುಂಬುತ್ತಾನೆ. ಈ ಕ್ರಿಯೆಗೆ ಬಿತ್ತನೆ ಎಂದು ಕರೆಯುವರು. ಸಸಿಯು ಮೊಳಕೆಯೊಡೆದು ಎಡೆಗೆ ಬಂದಾಗ ಭೂದೇವಿ ಹಸಿರಿನಿಂದ ಕಂಗೊಳಿಸುವಳು. ಆಗ ಎಲ್ಲೆಡೆ ಸಂತಸದ ವಾತಾವರಣ. ಹೆಣ್ಣುಮಕ್ಕಳಿಗೆ ಈ ಕಾಲದಲ್ಲಿ ಹೆಚ್ಚು ಬಿಡುವು. ಆಗ ಇವರು ವಿಶೇಷ ಪೂಜೆಗೆ ತೊಡಗುವರು. ಜಗದಾಧಾರ ಭೂಮಿ ತಾಯಿಗೂ, ರೈತನ ಜೀವ ಜೀವಾಳವಾದ ಎತ್ತುಗಳಿಗೂ ಕೃತಜ್ಞತೆ ಸಮರ್ಪಿಸಲು ಪೂಜೆ ಕೈಕೊಳ್ಳುವುದುಂಟು. ಹಳ್ಳಿಯ ಕೃಷಿಕರು ವರುಷದಲ್ಲಿ ಹೀಗೆ ಒಟ್ಟು ಐದು ಮಣ್ಣು ಪೂಜೆ ಆಚರಿಸುವರೆಂದು ತಿಳಿದುಬರುತ್ತದೆ. ಉತ್ತರ ಕರ್ನಾಟಕದಲ್ಲಿ ಜೇಷ್ಠ ಬಹುಳ ಅಮಾವಾಸ್ಯೆಗೆ, ಮಣ್ಣಿನ ಅಮಾವಾಸ್ಯೆ ಎಂದು ಕರೆಯುತ್ತಾರೆ. ಈ ದಿವಸ ಮಣ್ಣಿನ ಬಸವಣ್ಣನ ಪೂಜೆ ಅಂದರೆ ನಂದಿಯ ಪೂಜೆ ನಡೆಯುತ್ತದೆ. ಅಂದು ಹೆಣ್ಣುಮಕ್ಕಳು ಅರಳೆಲೆ ಬಸವನನ್ನು ಎಲೆಯ ಮಂಟಪದಲ್ಲಿ ಸಿಂಗರಿಸಿ ಬದಿಯ ಜಲಾಶಯದಿಂದ ತಂದಿಟ್ಟು ಆರತಿ ಬೆಳಗಿ ಹಾಡುವರು.

ಒಂದು ಸುತ್ತಿನ ಕ್ವಾಟಿ
ಅದರೊಳು ಹೊಂದಿ ನಿಂತನು ಬಸವ
ಬಸವನ ಪಾದಕ ಹೊಸ ಮುತ್ತು ಹೊಸಗೆಜ್ಜಿ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ||

ಎರಡು ಸುತ್ತಿನ ಕ್ವಾಟಿ
ಅದರೊಳು ಸೊಡರು ತೂಗುವ ಬಸವ
ಬಸವನ ಪಾದಕ ಹೊಸ ಮುತ್ತ ಹೊಸಗೆಜ್ಜಿ
ಬಸವಕ ಬಸವನ್ನಿರೆ
ಬಸವನ ಪಾದಕ ಶರಣನ್ನಿರೆ ||

ಈ ಹಾಡು ಹತ್ತು ಕೋಟೆಯವರೆಗೆ ಮುಂದುವರಿಯುವುದು. ಮೂರು ಸುತ್ತಿನ ಕೋಟೆಯಲ್ಲಿ ಬಸವನು ಮೂರ್ತಗೊಳ್ಳುವನು. ನಾಲ್ಕು ಸುತ್ತಿನ ಕೋಟೆಯಲ್ಲಿ ಬಸವನು ನ್ಯಾಯಮೂರ್ತಿಯಾಗುವನು. ಐದು ಸುತ್ತಿನ ಕೋಟೆಯಲ್ಲಿ ಐಕ್ಯಮೂರ್ತಿಯಾಗಿ, ಆರು ಸುತ್ತಿನ ಕೋಟೆಯಲ್ಲಿ ಬಸವನು ಅರಳಿ ನಿಲ್ಲುವನು. ಏಳು ಸುತ್ತಿನ ಕೋಟೆಯಲ್ಲಿ ಜಗವನಾಳುವ ಆತ, ಎಂಟು ಸುತ್ತಿನ ಕೋಟೆಯಲ್ಲಿ ಶಿವನಿಗೆ ಕಂಟಲೆತ್ತಾಗಿ, ಒಂಬತ್ತು ಸುತ್ತಿನ ಕೋಟೆಯಲ್ಲಿ ತುಂಬಿ ಬಂದು, ಹತ್ತು ಸುತ್ತಿನ ಕೋಟೆಯಲ್ಲಿ ಎತ್ತಲೂ ಬಸವನೇ ಆಗಿ ನಿಲ್ಲುವನು. ಹಿಮ್ಮೇಳ-ಮುಮ್ಮೇಳವಾಗಿ ಹಾಡುವ ಅತಿ ರಮ್ಯವಾದ ಧಾಟಿಯ ಹಾಡು ಇದಾಗಿದ್ದು ಇದರಲ್ಲಿ ಅನೇಕ ಪಾಠಾಂತರಗಳು ಕಂಡುಬರುವವು.

ಗುಳ್ಳವ್ವ: (ಮಣ್ಣಿನ ದ್ವಿತೀಯ ಪೂಜೆ)

ಹಳ್ಳಿಯ ಬಾಲಿಕೆಯರು ಆಷಾಢಮಾಸದಲ್ಲಿ ಬರುವ ಪ್ರತಿಯೊಂದು ಮಂಗಳವಾರ, ಸಮೀಪದ ಹುತ್ತದಿಂದಾಗಲೀ ಕೆರೆಯಿಂದಾಗಲೀ ಮಣ್ಣು ತಂದು, ಅರಲು ಮಾಡಿ ಅಂದವಾಗಿ ಲಿಂಗ-ಬಸವಣ್ಣ-ಗುಳ್ಳವ್ವಗಳನ್ನು ಮಾಡುವರು. ಅದನ್ನು ಬಣ್ಣದಲ್ಲಿ ಎದ್ದಿದ ಕುಸುಬೆಯ ಕಾಳುಗಳಿಂದಲೂ, ಜವೆ, ಗುಲಗಂಜಿಗಳಿಂದಲೂ ಕಲಾತ್ಮಕವಾಗಿ ಸಿಂಗರಿಸುವರು. ಅವರೆ ಮೊದಲಾದ ಕಾಡುಹೂವುಗಳಿಂದ ಪೂಜಿಸಿ, ಗುಂಪುಗೂಡಿ ಮನೆಯಿಂದ ಮನೆಗೆ ಆರತಿ ಬೆಳಗುತ್ತ ತಿರುಗಾಡುವರು. ಸಾಮಾನ್ಯವಾಗಿ 1ನೆಯ ಮಂಗಳವಾರ ಲಿಂಗಾಕಾರದ ಗುಳ್ಳವ್ವ, 2ನೇ ಮಂಗಳವಾರ ಗುಡಿಯಾಕಾರದ ಗುಳ್ಳವ್ವ, 3ನೇ ಮಂಗಳವಾರ ಸೋಪಾನ ಕಟ್ಟೆ ಆಕಾರದ ಗುಳ್ಳವ್ವ, 4ನೇ ಮಂಗಳವಾರ ನವಿಲಿನ ಆಕಾರದ ಗುಳ್ಳವ್ವ, ಕೊನೆಯ ಮಂಗಳವಾರ ಸ್ತ್ರೀ ದೇವತೆಯಾಕಾರದ ಗುಳ್ಳವ್ವ -ಹೀಗೆ ವಿವಿಧಾಕಾರದ ಗುಳ್ಳವ್ವಗಳನ್ನು ನಿರ್ಮಿಸುವರು. ಗುಳ್ಳವ್ವ (ಗೋಲವ್ವ) ಎಂಬುದು ಭೂಮಿಯ ಪ್ರತೀಕವಾದಂತಿದೆ. ಮಂಗಳವಾರ ಸಂಜೆ ಗುಳ್ಳವ್ವನಿಗೆ ಆರತಿ ಬೆಳಗುತ್ತ ಹಾಡು ಹೇಳುವರು. ಮರುದಿವಸ ಸಾಮೂಹಿಕ ವನಭೋಜನ. ಇದನ್ನು ಅಲ್ಲಿಕೇರಿ ಎಂದು ಕರೆಯುವರು. ಆಗ ಹೊತ್ತೊಯ್ದ ಗುಳ್ಳವ್ವನ ವಿಸರ್ಜನೆಯು ಸಮೀಪದ ಜಲಾಶಯದಲ್ಲಿ ನಡೆಯುವುದು.

ಮಣ್ಣು ತರುವಾಗ ಹೇಳುವ ಹಾಡು

ಗುಳ್ಳನ್ನ ಮಣ್ಣು ತರಲೇ ಇಲ್ಲ
ಗುಲಗಂಜಿ ಹಚ್ಚಿ ಆಡಲಿಲ್ಲ
ಸುಳ್ಳೆ ಬಂತಲ್ಲವ್ವ ನಾಗರಪಂಚಮಿ । ಸುವ್ವನಾರಿ ।। ಪ ।।

ಮಾವಿನ ಗಿಡ ಮರೆಯಾಯ್ತು
ತವರಮನಿ ದೂರಾಯ್ತು
ಯಾವಾಗ ನೋಡಲೆವ್ವ ತಾಯಿ ಮಾರಿ । ಸುವ್ವನಾರಿ ॥

ವನಭೋಜನಕ್ಕೆ ನಡೆದಾಗ ಹಾಡುವ ಹಾಡು:

ರೊಟ್ಟಿ ಬುತ್ತಿ ಮಾಡಿಕೊಂಡು
ಎತ್ತಿನ ಮ್ಯಾಲ ಹೇರಿಕೊಂಡು
ಯಾವಾಗ ಕಂಡೆನವ್ವ ತಾಯಿ ಮಾರಿ । ಸುವ್ವ ನಾರಿ ॥

ಆಷಾಢ ಮಾಸ ಬಂದಿತವ್ವ
ಖಾಸಾ ಅಣ್ಣ ಬರಲಿಲ್ಲ
ಎಷ್ಟು ನೋಡಲೆ ಅಣ್ಣನ ದಾರಿ । ಸುವ್ವ ನಾರಿ ॥
ಹಿಂದಿನೆತ್ತಹಿಂದ ಇರಲಿ
ಮುಂದಿನೆತ್ತ ಮುಂದ ಇರಲಿ
ಎಂದ ಕಂಡೆನವ್ವ ತಾಯಿ ಮಾರಿ । ಸುವ್ವ ನಾರಿ ॥

ಹೀಗೆ ತಾಯಿಗಾಗಿ ಪರಿತಪಿಸುವ ಹಾಡಿನ ಕೊನೆಗೆ, ತಾಯಿಯನ್ನು ಕಂಡಾಗ ಆಗುವ ಸಂತೃಪ್ತಿ ಭಾವ ಈ ಮುಂದಿನ ಹಾಡಿನಲ್ಲಿದೆ.

ಹೊತ್ತು ಮುಳುಗು ವ್ಯಾಳ್ಯಾದೊಳಗ
ದೀಪ ಹಚ್ಚಾ ವ್ಯಾಳ್ಯಾದೊಳಗ
ಅಣ್ಣ ಕರಿಯಾಕ ಬಂದಾನ ನಾರಿ । ಸುವ್ವನಾರಿ ॥

ತಾಯಿ ಬಂದು ನೀರು ಕೊಟ್ಲು
ತಾಯಿ ಮಾರಿ ಕಂಡೇನವ್ವ
ಹಸಿದ ಹೊಟ್ಟೆ ಉಂಡಂಗಾತ ನಾರಿ । ಸುವ್ವನಾರಿ ॥

ಹೀಗೆ ಹಾಡುತ್ತ ಹೋಗಿ ಬನದೂಟ ಮಾಡಿ ಗುಳ್ಳವ್ವನ ವಿಸರ್ಜನೆ ಮಾಡುವರು. ಆಗ ಗುಳ್ಳವ್ವ ಸತ್ತಳೆಂದು ಭಾವಿಸಿ ಹಾಡುವ ಹಾಡು ನಗೆಯ ಬುಗ್ಗೆಯನ್ನು ಎಬ್ಬಿಸುವದು.

ನಿನ್ನೆ ಇಷ್ಟೊತ್ತಿನಾಗ ಸಿಂಗಾರಾಗಿದ್ದೆಲ್ಲ । ನನ್ನ ಕುಂಯಾ ।
ಹಾಲ ಕಾಸಲಿಕ್ಕೆ ಹೋಗಿ ಕಾಲ ಸುಟಗೊಂಡೆಲ್ಲ । ನನ್ನ ಕುಂಯಾ॥
ತುಪ್ಪಾ ಕಾಸಲಿಕ್ಕೆ ಹೋಗಿ ತುರುಬ ಸುಟಗೊಂಡೆಲ್ಲ । ನನ್ನ ಕುಂಯಾ॥

ಹೀಗೆ ಹಾಡು ಹಾಡಿಕೊಂಡು ಅತ್ತು, ಸಂತಸದಿಂದ ಮನೆಗೆ ಬರುವರು. ಕೊನೆಯ ಅಲ್ಲಿಕೇರಿ ವಿಶಿಷ್ಟವಾಗಿರುತ್ತದೆ. 'ಗುಳ್ಳವ್ವದೇವರಲ್ಲ, ಉಡಿಕೆ ಗಂಡನಲ್ಲ' ಎಂಬ ಗಾದೆ

ಪ್ರಚಲಿತವಿದ್ದರೂ, ಗುಳ್ಳವ್ವನ ಪೂಜೆ ನಿರಂತರವಾಗಿ ನಡೆದು ಬಂದುದು ಗಮನಾರ್ಹ ಸಂಗತಿ.

ನಾಗಪೂಜೆ (ಮಣ್ಣಿನ ಮೂರನೇ ಪೂಜೆ)

ಶ್ರಾವಣ ಮಾಸದಲ್ಲಿ ಬರುವ ನಾಗರ ಪಂಚಮಿ ಹಬ್ಬವು ನಾಡಿನ ಹಬ್ಬಗಳಲ್ಲಿ ದೊಡ್ಡದಾಗಿದೆ. ಈ ಕಾಲಕ್ಕೆ ಹುತ್ತದಿಂದ ತಂದ ಮಣ್ಣಿನ ನಾಗಪ್ಪನ ಪೂಜೆ ವೈಭವದಿಂದ ನಡೆಯುವುದು. ನಾಗಪೂಜೆಯು ದ್ರಾವಿಡ ಸಂಪ್ರದಾಯದಿಂದ ಬಂದಂತೆ ತೋರುತ್ತದೆ. ನಾಗರಹಾವು ಶಿವನ ಆಭರಣ, ವಿಷ್ಣುವಿನ ಹಾಸಿಗೆ, ಗಜಾನನನ ಹೊಟ್ಟೆಗೆ ಕಟ್ಟು, ಒಕ್ಕಲಿಗನ ಮಿತ್ರನಾಗಿ ಪ್ರಸಿದ್ಧಿ ಪಡೆದಿದೆ. ಆದರೂ ಅದರ ಭಯಂಕರ ವಿಷಕ್ಕೆ ಅಂಜಿ ಅದರಿಂದ ರಕ್ಷಿಸಿಕೊಳ್ಳಲು ಅದರ ಪೂಜೆ ರೂಢಿಯಲ್ಲಿ ಬಂದಿರಬೇಕು. ಈ ಮಣ್ಣಿನ ನಾಗಪ್ಪನಿಗೆ ಅರಿಷಿಣ, ಕುಂಕುಮ, ಹಂಗನೂಲು ತರತರದ ಹೂಗಳಿಂದ ಪೂಜಿಸುವರು. ಅರಳು ಹಿಟ್ಟು, ತಂಬಿಟ್ಟು ಮತ್ತು ಪಕ್ವಾನ್ನಗಳ ನೈವೇದ್ಯ ಸಲ್ಲಿಸುವರು. ಹೆಂಗಳೆಯರು ಬಣ್ಣ ಬಣ್ಣದ ಹೊಸ ಬಟ್ಟೆಗಳನ್ನು ಧರಿಸಿ ಜೋಕಾಲಿಯಾಡಿ ಸಂತಸ ಪಡುವರು. ಗಂಡಸರು ಜಿದ್ದು ಕಟ್ಟಿ ಸೋಲು ಗೆಲುವುಗಳ ಮಧ್ಯೆ ಹೋರಾಡುವ ದೃಶ್ಯವು ಮರೆಯದಂತದು.

ನಾಗಪ್ಪಗ್ಹಾಲ ಹೊಯ್ಯೋಣ
ನಾಗರ ಹೆಡಿಯಾಂಗ ಆಡೋಣ ॥ಪ ॥
ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ
ನಾಗಪ್ಪಗ್ಹಾಲ ಎರಿಯೋಣ । ನನಗೆಳತಿ
ನಾಗರ ಹೆಡಿಯಾಂಗ ಆಡೋಣ ॥

ಗುರುದೇವ ನಿಮಪಾಲ ಹರಹರನೆ ನಿಮಪಾಲ
ಶರಣರಿಗೆ ಹಾಲು ಹಿರಿಯರಿಗೆ । ಎರಿಯೋಣ
ಕಿರಿಯರಿಗಿ ಹಾಡಿ ಹರಸೋಣ ॥

ಅಳ್ಳಿಟ್ಟು ತಂಬಿಟ್ಟು ಮಾಡಿಟ್ಟ ಎಳ್ಳುಂಡಿ
ದಳ್ಳುರಿ ಕಣ್ಣ ಹಣೆಯವನ । ಕೊರಳಾನ
ನಾಗ ನಿನಗೆಡಿಯೊ ಕೈ ಮುಗಿದೊ ॥

ಗಂಡನ ಮನಿಯಾನ ಕಂಡ ಬಾಳುವೆ ಹಾಡಿ
ಉಂಡು ಓಡ್ಯಾಡಿ ಆಡೋಣ । ಮನೆ ಮಾತ
ಹಿಂಡಿನಾ ಗಾಡಿ ಮರೆಯೋಣ ॥

ಪಂಚಮಿ ಬರಲೆವ್ವ ಮಂಚ ಕಟ್ಟಲಿ ಮನೆಗೆ
ಕೆಂಚಿ ಗೆಳತೇರು ಕೂಡsಲಿ । ನಮ ಜೀಕ
ಮಿಂಚಿ ಮುಗಿಲಿsಗಿ ಏರsಲಿ ॥

ಪಂಚಮಿ ಹಬ್ಬ ಮುಂದಿರುವಾಗಲೇ ಗಂಡನ ಮನೆಯಲ್ಲಿಯ ಗರತಿ ಆ ಹಬ್ಬಕ್ಕೆ ತವರಿಗೆ ಹೋಗುವ ಹಗಲುಗನಸು ಕಾಣುತ್ತಾಳೆ. ಅವಳ ಹತ್ತಾರು ಭಾವನೆಗಳ ಚಿತ್ರವು ಇಲ್ಲಿ ಸೊಗಸಾಗಿ ಮೂಡಿದೆ.

ಪಂಚಮಿ ಮುಂದ ಇರಟ್ಟಿಗಾಗಿ
ಹಂಚಿಕೆ ಹಾಕತಾಳ
ಸಂಜೀಕ ನಮ್ಮವರು ಬರತಾರೊ
ಏನು ಮಾಡತಾರೊ ।

ಗೊಂಡ್ಯಾದ ಹಣಿಪಟ್ಟಿನ
ಹಂಡ ಹೋರಿ ನನಗಾಗಿ
ಕೊಂಡಾರ ನಮ್ಮವರು ತರತಾರೊ
ಇಂದ ಬರತಾರೊ ।

ಎಂದಿದ್ದರ ನಮ್ಮವರು
ಮುಂದಾಗಿ ಬರುವದಿಲ್ಲ
ಸಂಜೀಗಿ ನನ್ನ ಎರೆಯುವದು
ಅಳ್ಳು ಹುರಿಯುವದು ।

ಇಳಿ ಹೊತ್ತಿನ ಕಣದಿಂದ
ಗೆಳತ್ಯಾರ ಕೂಡ ಹೋಗಿ
ಜೋಕಾಲಿ ಆಡಿಬಂದು ದಣಿಯುವದು
ಭಾಳ ಉಣ್ಣುವದು ।

ಜೋಡಿಯವರು ಗೆಳತ್ಯಾರು
ನೋಡುವರು ನನ್ನ ದಾರಿ
ನಾನಾ ತರದ ಸೀರಿ ಉಡುೂವರ
ನನ್ನ ಕರೆಯುವರು ।

ಹೀಗೆ ಪರಿತಪಿಸುತ್ತಿರುವ ಗರತಿಗೆ ತಾನು ಆಡುವ ಜೋಕಾಲಿ, ಓಣಿಯ ಗೆಳತಿಯರ ನೆನಪು ಬರುವುದು. ಅವರೆಲ್ಲ ಆಗಲೇ ಪತಿಯ ಮನೆಯಿಂದ ತನ್ನ ತವರಿಗೆ ಬಂದಿರ ಬೇಕೆನಿಸುವದು.

ಚೆಂದರಗೊಂಬಿ ನಿನ್ನ
ಎಂದಾರ ಕಂಡೇನೇನ
ಬಂದ ಬಂದ ಹೋಗಿರಬೇಕು ಬಸಲಿಂಗಿ
ಜಾಡರ ಶಿವಲಿಂಗಿ ।

ಬೆಳದಿಂಗಳ ಆಡಲಾಕ
ಬ್ಯಾಸರಕಿ–ಇಲ್ಲದಾಕಿ
ಬಂದ ಬಂದ ಕರಿಯಾಕಿ – ನಮ್ಮ ರಂಗಿ
ಆರ‍್ಯಾರ ಗಂಗಿ ।

ಗುಳ್ಳವ್ವನ ಇಡುವಾಗ
ಅರ್ತಿಲೆ ಗೆಳತ್ಯಾರು
ಬರತಿದ್ರು ಬಟ್ಟ ಗುಲಗಂಜಿಗಿ
ಕೊಡತಿದ್ದೇನ ಹೋಗಿ ।

ಆಡಲಿಲ್ಲ ಗೆಳತ್ಯಾರ ಒಳಗ
ನೋಡಲಿಲ್ಲ ಒಂದಿನ
ಮಾಡಲಿಲ್ಲ ದಾದ ನನಗ ನಮ್ಮ ತವರವರು
ಯಾಕ ಮರತಿದಾರು ।

ಹೀಗೆ ಮರೆತುದಕ್ಕೆ ತನ್ನ ಅದೃಷ್ಟವನ್ನೇ ನಿಂದಿಸುತ್ತಿರಲು ಅವಳ ಅಣ್ಣನು ಬಂದು ಎದರಿಗೆ ನಿಲ್ಲಲು ಅವಳ ಆನಂದಕ್ಕೆ ಮಿತಿಯಿಲ್ಲದಾಗುವದು.

ಹೀಂಗ ಅಂದು ನಿಂದ್ರೂದ್ರೊಳಗ
ಆಕಿ ಅಣ್ಣ ಬಂದಿದಾನ
ಹಂಡ ಹೋರಿಗಿ ಹಾಕಿದಾನ ಮಗ್ಗಿ ಮುಟ್ಟಾ
ಹಿಗ್ಗಿದಾಳ ಎಷ್ಟಾ

ಗುರ್ಚಿ (ಮಣ್ಣಿನ ನಾಲ್ಕನೇ ಪೂಜೆ)

ಭಾದ್ರಪದ ಆಶ್ವಿನ ಮಾಸಗಳಲ್ಲಿ ಉತ್ತರ ಕರ್ನಾಟಕದ ಬೆಳವಲ ನಾಡಿನಲ್ಲಿ ಮಳೆ ಸಕಾಲದಲ್ಲಿ ಬಾರದಿದ್ದಾಗ 'ಗುರ್ಚಿ'ಯ ಆಚರಣೆ ಕಂಡುಬರುವುದು. ಮಳೆ ಹೋಗಿ, ನೆಲವೆಲ್ಲ ಸುಟ್ಟು ಬೆಳೆ ಒಣಗುತ್ತಲೇ ಒಕ್ಕಲಿಗ ಚಿಂತಾಕ್ರಾಂತನಾಗುತ್ತಾನೆ. ಜನರೆಲ್ಲ ಮಳೆಗಾಗಿ ಹಂಬಲಿಸುತ್ತಾರೆ. ವರುಣದೇವನಿಗೆ ಅಲ್ಲಲ್ಲಿ ಪೂಜೆ ಪ್ರಾರ್ಥನೆಗಳು ನಡೆಯತೊಡಗುತ್ತವೆ. ಹಳ್ಳಿಯ ಕೃಷಿಕರು ಈ ಪ್ರಸಂಗದಲ್ಲಿ ಗುರ್ಚಿ ಆಚರಣೆಗೆ ತೊಡಗುತ್ತಾರೆ. ಇದನ್ನು ಆಚರಿಸುವವರು ಕೊಂಚಿ–ಕೊರವರ ಬಾಲಿಕೆಯರು. ಇವರೆಲ್ಲ 7–8 ವರುಷದ ಒಳಗಿನವರು. ಇವರನ್ನು ಬೆತ್ತಲೆಯಾಗಿಸಿ ಮೈತೊಳೆದು ಒಬ್ಬ ಹುಡುಗಿಯ ತಲೆಯ ಮೇಲೆ ಗುರ್ಚಿ ಹೊರಿಸಿ ಉಳಿದವರೆಲ್ಲ ಹಾಡುತ್ತ ಮನೆಮನೆಗೆ ತಿರುಗುವರು. ರೊಟ್ಟಿ ಹಂಚಿನ ಬೆನ್ನ ಮೇಲೆ ಪ್ರತಿಷ್ಠಾಪಿಸಿದ ಕೆಸರಿನ ಮುದ್ದೆಯ ನಡುವೆ ಕಪ್ಪೆ ಸೇರಿಸಿ ಮಾಡಿದ್ದೇ ಗುರ್ಚಿ,

ಅದಕ್ಕೆ ಕರಿಕೆ,ಪತ್ರಿ, ಕಾಡುಹೂಗಳಿಂದ ಸಿಂಗರಿಸಿರುತ್ತಾರೆ. ಗುರ್ಜಿ ಮನೆಗೆ ಬಂದಾಗ ಮನೆಯೊಡತಿ ಅದರ ಮೇಲೆ ನೀರು ಹಾಕುತ್ತಿರಲು ಅದನ್ನು ಹೊತ್ತ ಬಾಲಕಿ ತನ್ನ ಮೈಸುತ್ತ ತಿರುಗುವಳು. ಬಂದ ಆ ಮಕ್ಕಳಿಗೆ ದಕ್ಷಿಣೆಯನ್ನೋ ದವಸ ಧಾನ್ಯವನ್ನೋ ಮನೆಯೊಡತಿ ಕೊಟ್ಟು ಕಳಿಸುವಳು. ಈ ಮಕ್ಕಳ ಕಾರ್ಯಕ್ರಮ ಐದು ದಿನಗಳವರೆಗೆ ನಡೆಯುವುದು. ಅಷ್ಟರಲ್ಲಿ ಮಳೆ ಬರುವದೆಂಬ ನಂಬಿಕೆಯಿದೆ. ಈ ಕಾಲಕ್ಕೆ ಮಕ್ಕಳು ಹಾಡುವ ಹಾಡು–

ಗುರ್ಜೀ ಗುರ್ಜೀ ಎಲ್ಯಾಡಿ ಬಂದಿ
ಹಳ್ಳಾ ಕೊಳ್ಳಾ ಹರದಾಡಿ ಬಂದೆ
ಕಾರಮಳಿಯೇ ಕಪ್ಪತ ಮಳಿಯೇ
ಸುರಿಮಳಿಯೇ ಸುರಿಮಳಿಯೇ
ಬಣ್ಣಾ ಕೊಡತಿನಿ ಬಾಮಳಿಯೇ ಬಾಮಳಿಯೇ
ಸುಣ್ಣಾ ಕೊಡತಿನಿ ಸುರಿಮಳಿಯೇ ಸುರಿಮಳಿಯೇ
ಸುರಿಮಳಿಯಾದರೆ ಒಕ್ಕಲಿಗ ಒಕ್ಕಲಿಗ
ಒಕ್ಕಲಿಗಣ್ಣ ಬಿತ್ತೋ ಹೊನ್ನ
ಸುತ್ತ ಸುರಿಯಿತು ಸುರಿಮಳಿಯೋ ಸುರಿಮಳಿಯೋ.

ಸೀಗೆ (ಮಣ್ಣಿನ ಐದನೆಯ ಹಾಗೂ ಕೊನೆಯ ಪೂಜೆ)

ಮುಂಗಾರು ಮಳೆ ಮುಗಿದು, ಹಿಂಗಾರು ಮಳೆ ಪ್ರಾರಂಭವಾಗುವ ಸಂಕಾಲದಲ್ಲಿ ಈ ಹುಣ್ಣಿವೆ ಬರುತ್ತದೆ. ಈಗ ತುಂಬಿಬಂದಿರುವ ಮುಂಗಾರು ಬೆಳಸನ್ನು ಪೂಜಿಸಿ ನೈವೇದ್ಯ ಅರ್ಪಿಸಲು ಚರಗ ಚೆಲ್ಲುವ ಸಂಪ್ರದಾಯ ರೂಢಿಯಲ್ಲಿದೆ. ಹೀಗೆಯೇ ತುಂಬಿ ಬಂದ ಹಿಂಗಾರು ಬೆಳೆಗೆ ಎಳ್ಳು ಅಮಾವಾಸ್ಯೆ ದಿನ ಪೂಜಿಸುವದಕ್ಕೆ 'ಎಳ್ಳ ಅಮಾವಾಸೆ ಚರಗ' ಎಂದು ಕರೆಯುವರು. ಆ ದಿವಸ ಮನೆಯಲ್ಲಿ ತಯಾರಿಸಿದ ಪಂಚಪಕ್ವಾನ್ನಗಳನ್ನು ಬುಟ್ಟಿಯಲ್ಲಿ ತುಂಬಿ ಚಕ್ಕಡಿಯಲ್ಲಿಟ್ಟುಕೊಂಡು ತಮ್ಮ ಬಳಗದೊಡನೆ ಹೊಲಗಳಿಗೆ ಹೋಗುವರು. ಅಲ್ಲಿ ಭೂದೇವಿಯ ಪೂಜೆ ಮಾಡಿ ಸೀಗೆ ಹುಣ್ಣಿವೆ ಚರಗ ಚೆಲ್ಲುವರು. ಆಗ ''ಚಾಂಗುಭಲಾಽ ಚಾಂಗುಭಲಾಽಽ ಎಂದು ಎಲ್ಲರೂ ಕೂಗಿ ಹೇಳುವರು. ನಂತರ ಎಲ್ಲರೂ ಕೂಡಿ ಸಹಭೋಜನ ಮಾಡುವರು.

ಈ ಹುಣ್ಣಿವೆಗೂ ಐದು ದಿನ ಮೊದಲು ಅಂದರೆ ಆಶ್ವೀನ ದಶಮಿಯಂದು ಒಂಬತ್ತು ಮತ್ತು ಹನ್ನೊಂದು ಹಲ್ಲೆಗಳಿಂದ ಮಾಡಿದ ಜೋಡು ಸೀಗೆಯನ್ನು ಕುಂಬಾರರ ಮನೆಯಿಂದ ತಂದು ಪ್ರತಿಷ್ಠಾಪನೆ ಮಾಡಿ ದಿನಾಲು ಕಾಡು ಹೂಗಳಿಂದ ಸಿಂಗರಿಸಿ ಪೂಜೆ

ಮಾಡಿ ಆರತಿ ಬೆಳಗುವರು. ಈ ಸಂದರ್ಭದಲ್ಲಿ ಹೆಣ್ಣುಮಕ್ಕಳು ಆರತಿ ಪದಗಳನ್ನೂ ಕೋಲುಪದಗಳನ್ನೂ ಹೇಳುವರು. ಹೀಗೆ ಐದು ದಿನಗಳವರೆಗೆ ಪ್ರತಿದಿನ ಈ ಹಾಡುಗಳನ್ನು ಹಾಡಲಾಗುವುದು. ಇಲ್ಲಿ ಬಳಸುವ ಹಾಡುಗಳು ಗೌರಿಯ ಕೋಲು ಪದ, ಪಾಂಡವರ ಹಾಡು ಇತ್ಯಾದಿ ಇರುವದುಂಟು, ಸೀಗೆ ಹುಣ್ಣಿಮೆಯ ದಿನ ಸೀಗೆಯ ವಿಸರ್ಜನೆಯ ಕಾರ್ಯ ನಡೆಯುತ್ತದೆ. ಊರ ಸಮೀಪದ ಜಲಾಶಯಕ್ಕೆ ಹೆಂಗಳೆಯರೆಲ್ಲ ಕೂಡಿ ಸೀಗೆಯೊಂದಿಗೆ ಹಾಡುತ್ತ ಹೋಗಿ ಹಾಡುತ್ತಲೇ ಮರಳಿ ಬರುವರು, ಈ ಕಾಲಕ್ಕೆ ಹೆಣ್ಣು ಮಕ್ಕಳ ಕೋಲಾಟದ ಹಾಡುಗಳ ಸುಗ್ಗಿಯನ್ನೇ ಕಾಣುತ್ತೇವೆ. ಈ ಪ್ರಸಂಗದಲ್ಲಿ ಹಾಡುವ ಕೋಲುಪದದ ಒಂದು ಮಾದರಿ:

ಸೀಗಿಯ ಹುಣ್ಣಿವಿ । ಸಿರಿಯವ್ವ ಮರೆತೇಕ
ಸಿರಿಯವ್ವ ದರಮರ ಮನಿಯಾಗ ।। ಕೋಲು ಕೋಲೆನ್ನ ಕೋಲ ।।

ಪಟ್ಟನೀ ಸಾಲ್ಯಾಗ ಕೊಂತೆವ್ವ ಕುಂತಗೊಂಡು
ದರಮಣ್ಣನಂತ ಕರದಾಳ ।। ಕೋಲು ಕೋಲೆನ್ನ ಕೋಲ ।।

ಹೀಂಗ ಬಾ ದರಮಣ್ಣ ನಾವೊಂದ ಹೇಳೇನ ।
ಸರವ ಮಾನ್ಯದ ಹೊಲಕ್ಹೋಗೊ ।। ಕೋಲು ಕೋಲೆನ್ನ ಕೋಲ ।।

ಸರವ ಮಾನ್ಯದ ಹೊಲಕ ಹೋಗ ದರಮಣ್ಣ
ಪುಂಡಿಪಲ್ಲೇವ ತರಬೇಕ ।। ಕೋಲು ಕೋಲೆನ್ನ ಕೋಲ ।।

ಸರವ ಮಾನ್ಯದ ಹೊಲಕ ಹೋಗಿ ದರಮಣ್ಣ
ಪುಂಡಿಪಲ್ಲೇವ ತರುವರ ।। ಕೋಲು ಕೋಲೆನ್ನ ಕೋಲ ।।

ಸೀಗೆಯನ್ನು ಕುಂಬಾರರ ಮನೆಯಿಂದ ತರುವಾಗ ಹಾಡುವ ಮೇಳಗೀತೆ:

ಮನಿಗೆ ಬಾರಮ್ಮ ಸೀಗಿ । ಮನಿಗೆ ಬಾರಮ್ಮ ।। ಪಲ್ಲ ।।

ದಟ್ಟಿ ಪಟ್ಟಾಳ ಸೀರಿ ಎಚ್ಚದಡಿಯ ನ್ಯಾಮದಡಿಯ
ಜರತಾರ ಸೀರಿ ಚಾಯಾ ಕುಟ್ಟು
ಜಾಣೆ ನಿನ್ನ ಕರಿಯ ಬಂದೆ ।।ಮನಿಗೆ......।।

ವಸ್ತ ಒಡಿವೆ ಆಭರಣೆಟ್ಟು ಸಿಕ್ಕೆದ ಡಾಬ ನಡಿನಾಗಿಟ್ಟು
ರಾಗುಟಿ ಚೌರಿ ತಲೆಯಾಗಿಟ್ಟು
ರಾಗದಿಂದ ಕರಿಯ ಬಂದೆ ।। ಮನಿಗೆ.......।।

ಕಂಚು ಕಾಸು ಸೀರಿ ಕೊಂಡು ಕೆಂಚೇರ್ಶೈವರು ಕೂಡಿಕೊಂಡು
ಅರಸರ ಮಡದಿ ದುರಪತಿ ಕೂಡ
ಸರಸದಿಂದ ಕರಿಯ ಬಂದೆ ‖ ಮನಿಗೆ.....‖

ಕುತನಿ ಕುಪ್ಪಸ ತೊಟ್ಟು ಹಣೆಯಮ್ಯಾಗ ಕುಂಕುಮವಿಟ್ಟು
ವಾಲಿಕೊಪ್ಪ ಕಿವಿಯಾಗಿಟ್ಟು
ರಾಗದಿಂದ ಕರಿಯ ಬಂದೆ !! ಮನಿಗೆ......!!

ಕುಂಬಾರ ಮನಿಯಾಗ ಹುಟ್ಟಿದಿ ಸೀಗಿ ಚರಗ ಬುಟ್ಟಿ ಜ್ಯಾಜ ತಂದೆ
ಸುಳಿಸುಳಿಗಾಳಿ ಚಳಿಯ ಕೂಡಿ
ಗೆಳೆತೆಯರೊಡನೆ ಕರೆಯ ಬಂದೆ ‖ ಮನಿಗೆ........‖

2. ಮಳೆ-ಗಾಳಿ

ಮಳೆಯೇ ಲೋಕಕ್ಕೆ ಆಧಾರ, ಜೀವನಕ್ಕೆ ದಾರಿ. ಮಳೆಯಿಲ್ಲದೆ ಬೆಳೆಯಿಲ್ಲ. ಬೆಳೆಯಿಲ್ಲದೆ ಬಾಳಿಲ್ಲ. ಮಳೆರಾಯ ಕೃಪೆಮಾಡಿ ಕಾಲಕಾಲಕ್ಕೆ ಭೂಮಿಗಿಳಿದರೆ ರೈತನ ಬಾಳು ಬಂಗಾರ. ಮಳೆರಾಯ ಮುನಿದರೆ ಬರಗಾಲ; ಹುಚ್ಚೆದ್ದು ಸುರಿಯತೊಡಗಿದರೆ ಜಲಪ್ರಳಯ. ಹೀಗಾಗಿ ಮಳೆರಾಯ ಸರ್ವತಂತ್ರ - ಸ್ವತಂತ್ರ. ಅವನು ಯಾರ ಮಾತನ್ನೂ ಕೇಳಲಾರನು. ಬಾ ಎಂದ ಕೂಡಲೆ ಬಂದು ಹೋಗೆಂದಾಗ ಹೋಗನು. ಅಂತೆಯೇ 'ಯಾರಿಚ್ಛೆ ಹೇಳು ಮಳೆರಾಯ, ಶಿವನೇ ತನ್ನಿಚ್ಛೆ ಬಂದಲ್ಲಿ ಸುರಿಯುವನು' ಎಂದಿದೆ ಜನವಾಣಿ. ಆದರೂ ಅವನನ್ನು ನಂಬಿಯೇ ಬಾಳು ಸಾಗಿಸಬೇಕಾದ ಕೃಷಿಕ- ಅವನ ಕರುಣೆಗಾಗಿ ಕಾಡುತ್ತಾನೆ, ಬೇಡುತ್ತಾನೆ, ಪ್ರಾರ್ಥಿಸುತ್ತಾನೆ. ಜಾನಪದರು ಭೂಮಿಯನ್ನು ಹೆಣ್ಣು ಎಂದೂ ಮಳೆರಾಯನನ್ನು ಗಂಡು ಎಂದೂ ಭಾವಿಸಿಕೊಂಡು ಬಂದಿದ್ದಾರೆ. ರಾಜರಾಜರಲ್ಲಿ ಶ್ರೇಷ್ಠ ರಾಜ ಮಳೆರಾಜ ಎಂಬುದು ಅವರ ನಿಶ್ಚಲ ನಂಬಿಗೆ. ಅಂತೆಯೇ ಮಳೆರಾಯ ಕೃಷಿಕರಿಗೆ ತಂದೆ, ತಾಯಿ, ಬಂಧು-ಬಳಗ ಮತ್ತು ದೇವರು. ಅವನನ್ನು ಕುರಿತ ಪ್ರಾರ್ಥನೆ.

ಸ್ವಾಮಿ ಮಳೆರಾಯ ಓ ತಂದೆ
ಯಾವ ದೇವರಿಲ್ಲ ನಿನ್ನ ಮುಂದೆ
ಮದುವೆ ಮುಂಜಿ ಹಬ್ಬ ಹುಣ್ಣಿವೆಯೆಲ್ಲ
ಭೂಮಿಗೆ ನೀನು ಬಂದಂದೇ

ಎಂದು ಹೇಳಿದ್ದಾನೆ. ಲೋಕದ ಎಲ್ಲಾ ವ್ಯವಹಾರಗಳೂ ಸುಸೂತ್ರವಾಗಿ ಸಾಗಲು ಮಳೆರಾಯನ ಕರುಣೆ ಬೇಕು. 'ಮಳೆ ಇದ್ದರೆ ಬೆಳೆ, ಬೆಳೆ ಬಂದರೆ ಮಾತ್ರ ಇಳೆ' ಎಂಬ ಗಾದೆಯಿದೆ.

ಮಳೆ ಬಂದು ಬೆಳೆ ಬೆಳೆದು ಇಳೆ ತಣಿಯಲೆಂದು
ತಿಳಿಗೊಳಗಳುಕ್ಕಿ ಗೋವುಗಳು ಕರೆಯಲೆಂದು
ನಳಿನ ಮುಖಿಯರು ಸುಪುತ್ರರ ಪಡೆಯಲೆಂದು
ಗೆಲುವಿನಿಂ ಹರಸಿದೆವು ಬಾಲಕರು ಬಂದು

ಇದು ಮಕ್ಕಳ ಬೇಡಿಕೆ. ಒಟ್ಟಿನಲ್ಲಿ ಮಳೆರಾಯನೇ ಸಕಲ ಸಮೃದ್ಧಿಗೆ ಕಾರಣ ಕರ್ತನೆಂಬುದು ಸತ್ಯ ಸಂಗತಿ.

ಒಮ್ಮೆ ಮಳೆಬಾರದೆ ಭೀಕರ ಬರಗಾಲ ಸಂಭವಿಸಿದೆ. ಜನ ಅನ್ನವಿಲ್ಲದೆ ಸಾಯತೊಡಗಿದ್ದಾರೆ. ಶಿವನೇ ಯಾಕೆ ಈ ಪರಿಯ ಸಂಕಟ ನಮಗೆ ಕೊಡುತ್ತಿರುವಿ? ನಿನಗೆ

ನಾವು ಬೇಡವಾಗಿದ್ದರೆ ಬೆಂಕಿಯ ಮಳೆ ಸುರಿದು ಕೊಲ್ಲಬಾರದೇ? ಎಂದು ಗೋಳಿಡುತ್ತಿದ್ದಾರೆ.

ಯಾತಕೆ ಮಳೆ ಹೋದವೋ – ಶಿವಶಿವ
ಲೋಕ ತಲ್ಲಣಿಸುತಾವೋ
ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು
ಉರಿಸಿ ಕೊಲ್ಲಲು ಬಾರದೇ
ಹೊಟ್ಟೆಗೆ ಅನ್ನ ಇಲ್ಲದಲೇ
ನಡೆದರೆ ಜೋಲಿ ಹೊಡೆಯುತಲೇ
ಪಟ್ಟದಾನೆಯಂಥ ಸ್ತ್ರೀಯರು ಸೊರಗಿ
ಸೀರೆ ನಿಲ್ಲದಾಗಿದೆ ಸೊಂಟದಲೆ.
ಹಸುಗೂಸು ಹಸಿವಿಗಿ ತಾಳದಲೆ
ಅಳುತಲಿವೆ ರೊಟ್ಟಿ ಕೇಳಿ ಕೇಳಿ
ಹಡೆದ ಬಾಣಂತಿಗೆ ಅನ್ನವಿಲ್ಲದಲೆ
ಏರುತಲಿವೆ ಮುಂಗೈಗೆ ಬಳಿ
ಯಾವ ಕಡೆ ಹೋದರೂ ವನವಾಸ
ತಾಣ ನದಿ ಇಲ್ಲಿ ಯಾವ ದೇಶ
ಎಲ್ಲಿ ನೋಡಿದರೂ ಒಂದೇ ಶಬ್ದ
ದಯಮಾಡೋ ನೀ ಜಗದೀಶಾ
ಒಕ್ಕಲು ಮಕ್ಕಳಂತೇ – ಅವರಿನ್ನು
ಮಕ್ಕಳ ಮಾರಿ ಉಂಡಾರೋ
ಮಕ್ಕಳನು ಮಾರ‍್ಯುಂಡು ದುಃಖ ಮಾಡ್ತಾರ
ಮುಕ್ಕಣ್ಣ ಮಳೆ ಕರುಣಿಸೋ ||

ಅನಾವೃಷ್ಟಿ, ಅತಿವೃಷ್ಟಿ ಎರಡನ್ನೂ ಒಳಗೊಂಡ ಉತ್ತರ ಕರ್ನಾಟಕದ ಇನ್ನೊಂದು ಪ್ರಸಿದ್ಧ ಹಾಡನ್ನು ಇಲ್ಲಿ ಕೊಡಲಾಗಿದ್ದು ಅದು ಇಂತಿದೆ:

ಬಣ್ಣದ ಗುಜ್ಜ್ಯಾರು ಮಳಿರಾಜ | ಅವರು |
ಮಣ್ಣಾಗಿ ಹೋದರು ಮಳಿರಾಜಾ ||
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು |
ಅನ್ಯದ ದಿನ ಬಂದು ಮಳಿರಾಜಾ ||1||

ಒಕ್ಕಲಗೇರ‍್ಯಾಗ ಮಳಿರಾಜ | ಅವರು |
ಮಕ್ಕಳ ಮಾರ‍್ಯಾರ ಮಳಿರಾಜ ||

ಮಕ್ಕಳ ಮಾರಿs ರೊಕ್ಕಾ ಹಿಡಕೊಂಡು
ಭತ್ತಂತ ತಿರಗ್ಯಾರ ಮಳಿರಾಜ ||2||

ಸೊಲಗಿ ಹಿಟ್ಟಿನಾಗ ಮಳಿರಾಜಾ | ಅವರು |
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ ||
ಹಸ್ತು ಬಂದಕೇರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜ ||3||

ಗಿದ್ದನ ಅಕ್ಕ್ಯಾಗ ಮಳಿರಾಜಾ | ಅವರು |
ಅಪುವನ್ನು ಕೂಡಿಸ್ಯಾರ ಮಳಿರಾಜಾ ||
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನು ಮುಚ್ಚ್ಯಾವ ಮಳಿರಾಜಾ ||4||

ಗಂಡುಳ್ಳ ಬಾಲ್ಯಾರು ಮಳಿರಾಜಾ | ಅವರು |
ಭಿಕ್ಷಾಕ ಹೊಂಟಾರ ಮಳಿರಾಜಾ ||
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ಯದ ದಿನ ಬಂದು ಮಳಿರಾಜಾ ||5||

ಸ್ವಾತಿಯ ಮಳಿಬಂದು ಮಳಿರಾಜಾ |ಸುತ್ತ |
ದೇಶಾಕ ಆಗ್ಯಾದ ಮಳಿರಾಜಾ ||
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪ ಮಳಿರಾಜಾ ||6||

ಶ್ರೀಕಾಪಸೆ ರೇವಪ್ಪನವರು ಸಂಗ್ರಹಿಸಿದ 'ಮಲ್ಲಿಗೆ ದಂಡೆ' ಕೃತಿಯಲ್ಲಿ 'ಬರದ ಹಾಡು' ಎಂಬುದು ಪ್ರಮುಖವಾದುದು. ಈ ಕಥೆಯ ಹಾಡಿನ ವಿವರಣೆ ಇಂತಿದೆ:

ಇಬ್ಬರು ಅಣ್ಣತಮ್ಮಂದಿರಿರುತ್ತಾರೆ. ಅಣ್ಣ ಶ್ರೀಮಂತ, ತಮ್ಮ ಬಡವ. ಅಣ್ಣನಿಗೆ ಮಕ್ಕಳಿಲ್ಲ, ತಮ್ಮನಿಗೆ ಬಹಳ ಮಕ್ಕಳು. ತಮ್ಮನು ಅಣ್ಣನಿಗೆ ''ಒಂದು ಪಡಿ ಜೋಳವನ್ನು ಕಡವಾಗಿ ಕೊಡು, ನಿನ್ನ ಹೊಲದಲ್ಲಿ ಕೆಲಸವನ್ನು ಮಾಡುವೆನು'' ಎಂದನು. ಆ ಮಾತಿಗೆ ಅಣ್ಣನು ಒಪ್ಪಿ ಅದರಂತೆ ಮಾಡಿದನು. ತಮ್ಮನ ಹೆಂಡತಿಯು ಆ ಜೋಳವನ್ನು ತನ್ನ ಮನೆಯಲ್ಲಿ ಒಡೆಯುತ್ತಿದ್ದಾಗ, ಭಾವನ ಹೆಂಡತಿಯು ಬಂದು ಅವು ತಮ್ಮ ಜೋಳವೆಂದು ಗುರುತಿಸಿ ನುಚ್ಚಿನ ಗಡಿಗೆಯನ್ನು ಒಡೆದು ಇದ್ದ ಜೋಳವನ್ನು ತೆಗೆದುಕೊಂಡು ಹೋಗುತ್ತಾಳೆ. ಆಮೇಲೆ ಬಡವನ ಹೆಂಡತಿಯು ತನ್ನ ಎಂಟೂ ಮಕ್ಕಳನ್ನು ಕರೆದುಕೊಂಡು ತವರುಮನೆಗೆ ಹೋಗುತ್ತಾಳೆ. ಅಲ್ಲಿ ತನ್ನ ಅಣ್ಣನ ಹೆಂಡತಿಗೆ ಒಂದು ಸೇರು ಜೋಳವನ್ನು ಕಡ ಬೇಡುತ್ತಾಳೆ. ಕೊಡದಿದ್ದಾಗ ಹುಡುಗರಿಗೆ ತುತ್ತು ರೊಟ್ಟಿಯಾದರೂ ಕೊಡು ಎಂದು

ಕೇಳಿದಾಗ ''ತುತ್ತು ರೊಟ್ಟೀ ಬೇಡಲಿಕ್ಕೆ ಬಿಕ್ಕೆಗೆ ಬಂದಿದ್ದೀಯಾ?'' ಎಂದು ಅತ್ತಿಗೆ ಚುಚ್ಚಿ ಮಾತಾಡುವಳು. ನಂತರ ಆ ಬಡವಿಯು ಅಂಗಡಿಗೆ ಹೋಗಿ ತನ್ನ ಕೊರಳಲ್ಲಿಯ ತಾಳಿಯನ್ನು ಕೊಟ್ಟು ಅಕ್ಕಿಯನ್ನೂ ವಿಷವನ್ನೂ ಕೊಂಡು ತರುವಳು. ವಿಷ ಹಾಕಿ ಮಾಡಿದ ಅನ್ನವನ್ನು ಮಕ್ಕಳೊಡನೆ ಆ ಗಂಡ ಹೆಂಡರು ಉಣ್ಣುವರು. ಊಟ ಮಾಡಿ ಬರವನ್ನು ಶಪಿಸುತ್ತ ಬಾಗಲಿಕ್ಕಿಕೊಂಡು ಮಲಗುವರು. ಮಲ್ಲಾಡಕ್ಕೆ ಹೋದ ಆಕೆಯ ಅಣ್ಣನು ತಿರುಗಿ ಬಂದು ತಂಗಿಯ ಸುದ್ದಿಯನ್ನು ಕೇಳಿದಾಗ ಅವನ ತಾಯಿಯು ಎಲ್ಲವನ್ನೂ ಹೇಳುವಳು. ಅದನ್ನು ಕೇಳಿ ಕೆಡಕೆನಿಸಿ ತಂಗಿಯ ಮನೆಗೆ ಬರುವನು. ಆಗ ಅವರೆಲ್ಲರೂ ಸಾವಿಗೆ ಶರಣಾದ ಸಂಗತಿ ನೋಡಿ ಕೆಡಕೆನಿಸಿ ತಾನೂ ಅವರೊಡನೆ ಸಾಯುವನು. ಇಂತಹ ಪ್ರಸಂಗಗಳು ಜಾನಪದರಲ್ಲಿ ಹೇರಳವಾಗಿ ಕಂಡುಬರುತ್ತವೆ.

ಇಂತಹ ದುರ್ಧರ ಪ್ರಸಂಗಗಳಲ್ಲಿಯೂ ಕೃಷಿಕರಲ್ಲಿ ಅನೇಕರು ತಾಳ್ಮೆ ಕಳೆದುಕೊಳ್ಳದೆ ಬದುಕುವ ಛಲ ತಂದುಕೊಳ್ಳುತ್ತಾರೆ, ಮಳೆ ಬಾರದಿರುವದಕ್ಕೆ ಅವರಲ್ಲಿ ಹಲವಾರು ಆಲೋಚನೆಗಳು ಬರುತ್ತವೆ. ಲೋಕವನ್ನು ಸಲಹುವ ಸಾಮರ್ಥ್ಯವಿಲ್ಲದೆ ಮಳೆರಾಜ ತಲೆತಪ್ಪಿಸಿಕೊಂಡಿರಬೇಕು, ಅಥವಾ ಲೋಕದ ಜನರ ಅನಾಚಾರವನ್ನು ಕಂಡು ಅವರಿಗೆ ಬುದ್ಧಿ ಕಲಿಸಲು ಹೀಗೆ ಮಾಡಿರಬೇಕು, ಇದು ಜನಸಾಮಾನ್ಯರ ಊಹೆ. ಹಾಗೆಯೇ ಮಳೆರಾಯನ ಶಕ್ತಿ, ಸಾಮರ್ಥ್ಯವನ್ನು ಅವರು ಪ್ರಶ್ನಿಸದೆ ಬಿಡಲಾರರು. ಮಳೆರಾಯ ಕೂಡ ಸಾಲ ಮಾಡುತ್ತಾನೆ; ಸಾಲಕ್ಕೆ ತಿರುಗುವ ಕಾರ್ಯದಲ್ಲಿ ತಮ್ಮನ್ನು ಮರೆತಿದ್ದಾನೆ ಎಂಬ ಕಲ್ಪನೆ ವಿಶಿಷ್ಟವಾದುದು. ಮಳೆರಾಯನ ಪ್ರಾರ್ಥನೆಯಲ್ಲಿ ಅವನನ್ನು ಅಪ್ಪ, ರಾಜ ಎಂದು ಸಂಬೋಽಸಿ ಅವನು ತಮ್ಮನ್ನು ಕಾಯುವ ಹಾಗೂ ಕಾಪಾಡುವ ಜವಾಬ್ದಾರಿ ಹೊತ್ತವನು ಎಂಬ ಆಶಯವಿದೆ.

ಕೃಷಿಯ ಉದ್ದೇಶ ಒಂದೇ ಆದರೂ ಭೌಗೋಳಿಕ ಭಿನ್ನತೆಯಿಂದಾಗಿ ಬಯಲು ನಾಡು ಮತ್ತು ಮಲೆನಾಡುಗಳಲ್ಲಿ ಅದರ ಕ್ರಮಗಳು ವಿಭಿನ್ನವಾಗಿರುತ್ತವೆ. ಬಯಲು ನಾಡಿನಲ್ಲಿ ಸಾಕಷ್ಟು ಕೃಷಿ ಉಪಯೋಗಿ ಭೂಮಿಯಿದ್ದರೂ ಮಳೆ ಸಕಾಲಕ್ಕೆ ಬಾರದೆ ಮತ್ತು ಸಾಕಷ್ಟು ಮಳೆಯಾಗದೆ ರೈತಾಪಿ ಜನ ಕಂಗಾಲಾಗುವರು. ಆದರೆ ಮಲೆನಾಡಿನಲ್ಲಿ ಮಳೆ ಸಾಕಷ್ಟಾದರೂ ಅಲ್ಲಿ ಉಳುಮೆಯ ಭೂಮಿ ಕಡಿಮೆ. ಬಯಲು ನಾಡಿನಲ್ಲಿ ಮಳೆಯ ಮೇಲೆಯೇ ರೈತರ ವ್ಯವಸಾಯ ಅವಲಂಬಿತವಾಗಿರುವದು. ಮಳೆ ಸಕಾಲಕ್ಕೆ ಬಾರದಾದಾಗ ಅವರ ಜಾನಪದ ನಂಬಿಗೆಗಳು ಗರಿಗೆದರುತ್ತವೆ. ಮಳೆರಾಯ ಮುನಿದಾಗ, ಹಳ್ಳಿಯ ರೈತ ಮಹಿಳೆಯರು ತಿಂಗಳುಮಾವನ ಪೂಜೆಯನ್ನು ಕೈಗೊಳ್ಳುವರು. ತಿಂಗಳುಮಾವನ ಪದದಲ್ಲಿ

ಬರುವ ಮಳೆರಾಯನ ಹಾಡುಗಳು ಅತ್ಯಂತ ಮೋಹಕವಾಗಿವೆ. ಇದು ರಾತ್ರಿ ಹೊತ್ತು ತಿಂಗಳುಮಾವನ ಹಾಡುಗಳೊಂದಿಗೆ ಜರುಗುವ ಸಂಪ್ರದಾಯ. ಈ ಹಾಡುಗಳು ಸಾಮಾನ್ಯವಾಗಿ ತ್ರಿಪದಿಯಲ್ಲಿವೆ. ಇಲ್ಲಿ ಮಳೆರಾಯನನ್ನು ಅವರು ಹಲವು ರೀತಿಯಲ್ಲಿ ಕಂಡಿದ್ದಾರೆ. ಈ ಹಾಡುಗಳಲ್ಲಿ ಜಗದ ಚಿತ್ರಣವನ್ನು ಮಳೆರಾಯನಿಗೆ ಹೇಳಿ ಅವನ ಮನಕರಗಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮಳೆ ಬಾರದಿದ್ದಾಗ ಮಳೆರಾಯನನ್ನು ಒಲಿಸಿಕೊಳ್ಳುವ ಆರಾಧನೆಗಳು ಹತ್ತು ಹಲವು. ಇವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ಈ ಮುಂದೆ ವಿವರಿಸಲಾಗಿದೆ.

ವಾರಮಾಡುವದು: ಮಳೆಗಾಲದಲ್ಲಿ ಮಳೆರಾಯ ಮುನಿದಾಗ ಮೊದಲ ಕ್ರಮವಾಗಿ ರೈತರು ವಾರ ಪ್ರಾರಂಭಿಸುತ್ತಾರೆ. ವಾರದ ಮಂಗಳವಾರ ಇಲ್ಲವೆ ಶುಕ್ರವಾರ ಅಥವಾ ಎರಡೂ ವಾರ ಈ ವ್ರತ ಕೈಕೊಳ್ಳುತ್ತಾರೆ. ಇದಕ್ಕೂ ಮುಂಚೆ ಊರಲ್ಲಿ ಡಂಗುರ ಸಾರಿ ಎಲ್ಲ ರೈತರೂ ವಾರ ಮಾಡುವಂತೆ ತಿಳುವಳಿಕೆ ಕೊಡುವರು. ಈ ದಿನಗಳಲ್ಲಿ ರೈತರು ಕೃಷಿಕಾರ್ಯ ಮಾಡುವುದಿಲ್ಲ. ಎತ್ತುಗಳಿಗೂ ಕೆಲಸವಿಲ್ಲ. ಮನೆಯಲ್ಲಿ ಬೀಸುವದು. ಕುಟ್ಟುವದು, ಅಡಿಗೆ ಮಾಡುವುದು – ಯಾವುದನ್ನೂ ಮಾಡುವುದಿಲ್ಲ. ಊರ ದೇವಾಲಯದಲ್ಲಿ ಹಾಗೂ ಮನೆಯಲ್ಲಿ ವಿಶೇಷ ಪೂಜೆ ನಡೆಯುವುದು, ಪ್ರತಿಯೊಂದು ಓಣಿಯವರು ತಮ್ಮ ಓಣಿಯನ್ನು ಸ್ವಚ್ಛಗೊಳಿಸಿ ಚಳಿಹೊಡೆಯುತ್ತಾರೆ. ವಾರದ ಹಿಂದಿನ ರಾತ್ರಿ ಐದು, ಏಳು, ಒಂಭತ್ತು, ಹನ್ನೊಂದು ಹಾಗೆಯೇ ಇಪ್ಪತ್ತೈದು ಜನರು ಸಮೀಪದ ಜಲಾಶಯದಿಂದ ಕೊಡ ಹೊತ್ತು ನೀರು ತಂದು ದೇವರಿಗೆ ನೀರು ನೀಡುವರು. ಈ ಕಾರ್ಯ ನಾಲ್ಕಾರು ತಾಸು ನಡೆಯುವುದು. ವಾರದ ಬೆಳಗಿನ ಜಾವ ಮಕ್ಕಳಿಂದ ನೀರು ನೀಡುವ ಕಾರ್ಯಕ್ರಮ ಜರುಗುವುದು. ಮಕ್ಕಳು ಹೊತ್ತೇರುವವರೆಗೆ ನೀರು ನೀಡಿ ಮನೆಗೆ ಬರಲು ಮನೆಯ ದೇವರಿಗೆ ಹಿಡಿದ ನೈವೇದ್ಯವನ್ನು ಈ ಮಕ್ಕಳಿಗೆ ಕೊಡುವರು. ಸಂಜೆ ದೇವಾಲಯದ ಮುಂದೆ ಭಜನೆ, ಕೀರ್ತನ ಜರುಗುವುದು. ಈ ವಾರ ಮಾಡುವ ವ್ರತ ಮಳೆಯಾಗುವವರೆಗೆ ಅವ್ಯಾಹತವಾಗಿ ಸಾಗುವದು.

ಊರ ತುಂಬೆಲ್ಲ ನೀರಿನಿಂದ ತಂಪು ಮಾಡುವದರಿಂದ ಮೋಡಗಳು ಆಕರ್ಷಿತವಾಗಿ ಮಳೆ ಬರುವುದೆಂಬುದರಲ್ಲಿ ವೈಜ್ಞಾನಿಕ ಹಿನ್ನೆಲೆಯಿದೆ.

ಕುಮಾರವ್ಯಾಸ ಭಾರತ ಪಠಣ: ಮಳೆ ಬಾರದಿದ್ದಾಗ ಹಳ್ಳಿಯ ಕೃಷಿಕರು ದಿನಾಲು ಸಂಜೆ ಊರಿನ ದೇವಾಲಯದ ಆವಾರದಲ್ಲಿ ಸೇರುತ್ತಾರೆ. ಇಲ್ಲಿ ತಾಸೆರಡು ತಾಸು ಗದಗಿನ

ಕುಮಾರವ್ಯಾಸ ಭಾರತದ ವಾಚನ ಹಾಗು ಅರ್ಥವಿವರಣೆ ನಡೆಯುವುದು. ಇದು ಅನೇಕ ದಿನಗಳವರೆಗೆ ನಡೆಯುವುದು. ಇದು ಮುಗಿಯುವ ಹೊತ್ತಿಗೆ ಮಳೆ ಬರುವದೆಂಬುದು ಜಾನಪದರ ನಂಬಿಗೆ. ಒಂದು ವೇಳೆ ಇಷ್ಟಾದರೂ ಮಳೆ ಬಾರದಿದ್ದರೆ ದೇವರಿಗೆ ರುದ್ರಾಭಿಷೇಕ, ಶತ ಇಲ್ಲವೆ ಸಹಸ್ರ ಕುಂಭಾಭಿಷೇಕ ಮಾಡುವರು.

ಸಪ್ತಾಹ: ಇದು ಏಳು ದಿನಗಳ ಪರ್ಯಂತರ ನಡೆಯುವ ಶಿವಭಜನೆ. ಊರ ದೇವಾಲಯದಲ್ಲಿ ಎದುರು ಬದಿರಾಗಿ ಹತ್ತೋ ಹದಿನೈದೋ ಮಣೆಗಳನ್ನು ಇಡುವರು. ಊರಿನ ಹಿರಿಯ ಗಂಡುಮಕ್ಕಳು ಹಾಗೂ ಯುವಕರು ಸ್ನಾನ ಮಾಡಿ ಒದ್ದೆಯಿಂದ ಒಬ್ಬೊಬ್ಬರು ಒಂದೊಂದು ಮಣೆಗಳ ಮೇಲೆ ನಿಂತು ತಾಳ, ಝಾಗಟೆ, ಗಂಟೆ ಹಿಡಿದು ಹಗಲು-ರಾತ್ರಿ ಶಿವಭಜನೆ ನಡೆಸುವರು. ಪ್ರತಿ ಎರಡು ತಾಸಿಗೊಮ್ಮೆ ಈ ಮೇಳ ಬದಲಿಯಾಗುತ್ತ ಸಾಗುವುದು. ಕೊನೆಯ ದಿನ ಅನ್ನ ಸಂತರ್ಪಣೆ (ಪ್ರಸಾದ) ಜರುಗುವುದು.

ಡೊಳ್ಳಿನ ವಾಲಗ: ಡೊಳ್ಳು ಬೀರದೇವರ ಭಕ್ತರ ಚರ್ಮವಾದ್ಯ. ಪ್ರತಿ ಊರಿನಲ್ಲಿ ಡೊಳ್ಳಿನ ಮೇಳ ಇರುವುದುಂಟು. ಮಳೆ ಬಾರದಿದ್ದಾಗ ಸುತ್ತಲಿನ ಊರುಗಳ ಮೇಳ ದವರು ಒಂದು ಕಡೆ ಕೂಡಿ ಡೊಳ್ಳಿನ ವಾಲಗ ನಡೆಸುವರು. ಇದರೊಂದಿಗೆ ಕೊಂಬು, ಕಹಳೆ, ಝಾಗಟೆ, ಗಂಟೆಗಳ ನಾದಗಳೂ ಸೇರಿ ರುದ್ರಸನ್ನಿವೇಶ ನಿರ್ಮಾಣವಾಗುವುದು. ಇದರಿಂದ ಧ್ವನಿತರಂಗಗಳ ಮೂಲಕ ವಾತಾವರಣದಲ್ಲಿ ನಿರ್ವಾತ ಉಂಟಾಗಿ ಮಳೆ ಬರುವುದೆಂಬುದು ವೈಜ್ಞಾನಿಕರ ಹೇಳಿಕೆಯಾಗಿದೆ.

ಹೂಳಿದ್ದ ತೊನ್ನು ಹೆಣ ಹೊರತೆಗೆಯುವುದು: ತೊನ್ನು ರೋಗಿ ಸತ್ತಾಗ ಅವನನ್ನು ಹೂಳಿದ್ದಾದರೆ ಮಳೆ ಬರುವದಿಲ್ಲವಂತೆ. ಮಳೆ ಎಳಸಿದಾಗ ಊರ ಹಿರಿಯರೆಲ್ಲ ಸೇರಿ, ತೊನ್ನು ರೋಗಿಯ ಶವಸಂಸ್ಕಾರ ಹೂಳಿ ಮಾಡಿದ್ದಾದರೆ ಆ ಶವವನ್ನು ಮತ್ತೆ ಮೇಲೆ ತೆಗೆದು ಅದನ್ನು ಸುಡುತ್ತಾರೆ, ಆಗ ಮಳೆ ಬರುವುದೆಂಬುದು ಕೃಷಿಕರ ನಂಬಿಗೆಯಾಗಿದೆ.

ಪ್ರಸ್ತ ಹಾಕಿಸುವುದು: ಮಳೆಬಾರದಾದಾಗ ಊರ ಇಲ್ಲವೆ ಸೀಮೆದೇವರ ಮುಂದೆ ಪ್ರಸ್ತ ಹಾಕಿಸುವರು. ದೇವರ ಹೆಸರಿನಲ್ಲಿ ಪ್ರಸಾದ ತಯಾರಿಸಿ ಮೇಲು-ಕೀಳು, ಹಿರಿ-ಕಿರಿಯರೆನ್ನದೆ ಎಲ್ಲರೂ ಸೇರಿ ದೇವರ ಮುಂದೆ ಊಟ ಮಾಡುವುದು. ಇದರಿಂದ ಮಳೆರಾಯ ಸಂತಸಗೊಂಡು ಮಳೆ ಸುರಿಸುವನೆಂಬುದು ಕೃಷಿಕರ ನಂಬಿಗೆಯಾಗಿದೆ.

ಬಾಯಿ ಮೇಲಾಗಿ ಹುಟ್ಟಿದವರ ಸೇವೆ: ಬಾಯಿ ಮೇಲಾಗಿ ಹುಟ್ಟಿದವನನ್ನು ದೇವಮಂದಿರದಲ್ಲಿ ಕರೆಸುವರು. ಅವನನ್ನು ನೀರು ತುಂಬಿದ ಕಬ್ಬಿಣದ ಬುಟ್ಟಿಯಲ್ಲಿ ಕೂಡಿಸುತ್ತಾರೆ. ಅವನು ತದೇಕಚಿತ್ತದಿಂದ ನೀರಿನ ತಳವನ್ನು ನೋಡುತ್ತ ಇರಲು ಅವನಿಗೆ ಎಲ್ಲಾ ಮಳೆಗಳೂ ಕಣ್ಮುಂದೆ ಹಾದು ಹೋಗುತ್ತವಂತೆ. ಅವನಿಗೆ ಗುಡುಗು, ಸಿಡಿಲು, ಮಿಂಚು ಕಾಣಿಸುವದೆಂದು ಹೇಳುತ್ತಾರೆ. ಆದರೆ ಉಳಿದವರಿಗೆ ಅದಾವುದೂ ಕಾಣದು.

ಕುರುಬ ಕಂಬಳಿ ಬೀಸಿದರೆ ಮಳೆ: ಮಳೆರಾಯ ಮುನಿದಾಗ ಡೊಳ್ಳಿನ ವಾಲಗದೊಂದಿಗೆ ಊರ ಹೊರಗಿನ ದಿನ್ನೆಯ ಮೇಲೆ ನಿಂತ ಪೂಜಾರಿ ಕಂಬಳಿ ಬೀಸಿದರೆ ಮಳೆ ಬರುವುದು.

ಮಳೆಗಾಗಿ ತಪಸ್ಸು: ಮಳೆ ಬಾರದೆ ಒಕ್ಕಲಿಗರು ಗೋಳಾಡುತ್ತಿದ್ದಾಗ, ಸತ್ಪುರುಷರು ವರುಣದೇವನ ಕೃಪೆಗಾಗಿ ಉಪವಾಸದಿಂದ ತಪಸ್ಸು ಮಾಡಿ ಮಳೆ ತರಿಸಿದ ಉದಾಹರಣೆಗಳು ಕೇಳಸಿಗುತ್ತವೆ. ಹೀಗೆ ಮಳೆ ತರಿಸಿದ ತಪಸ್ವಿಗಳ ದೇವಾಲಯಗಳು ಅಲ್ಲಲ್ಲಿ ಕಂಡುಬರುತ್ತವೆ. ಗದ್ದನಕೇರಿ ಮಳಿಯಪ್ಪ ಸ್ವಾಮಿ, ಮಳೆ ಮಲ್ಲೇಶ್ವರ ಮೊದಲಾದವರು ಇಂತಹ ಲೀಲಾಪುರುಷರು.

ಕಾಯಿ ಕಟ್ಟುವುದು: ಅನಾವೃಷ್ಟಿಯ ಕಾಲದಲ್ಲಿ ಊರ ಜನರೆಲ್ಲ ಸೇರಿ ದೇವಿಯ ಗುಡಿಯಲ್ಲಿ ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ಆಗ ನೀರಿಲ್ಲದ ಒಂದು ತೆಂಗಿನ ಕಾಯಿಯನ್ನು ತಂದು ಅದನ್ನು ಅರಿಷಿಣ, ಕುಂಕುಮ, ಪತ್ರಿ, ಪುಷ್ಪ, ದೀಪ, ಧೂಪಗಳಿಂದ ಪೂಜಿಸಿ ಗುಡಿಯಲ್ಲಿ ಒಂದು ಕಂಬಕ್ಕೆ ಕಟ್ಟುತ್ತಾರೆ. ಅದಕ್ಕೆ ದಿನಾಲು ಪೂಜೆ ಸಲ್ಲಿಸುವರು. ಐದು ದಿವಸಗಳಾದ ಮೇಲೆ ಅದರಲ್ಲಿ ನೀರು ಬಂದರೆ ಮಳೆಯಾಗುವುದೆಂದು ರೈತರು ನಂಬುವುದುಂಟು.

ನೀರುಕಟ್ಟುವುದು: ಮಳೆ ತಡೆದಾಗ ಊರ ದೇವಾಲಯದ ಬಾಗಿಲಿಗೆ ಒಂದು, ಒಂದೂವರೆ ಫೂಟು ಇಟಂಗಿಯ ತಾತ್ಪೂರ್ತಿಕ ಗೋಡೆ ಕಟ್ಟುವರು. ಒಳಗಡೆ ನೀರು ತುಂಬಿ ಶಿವಲಿಂಗದ ಸುತ್ತಲೂ ನೀರು ನಿಲ್ಲುವಂತೆ ಮಾಡುವರು. ದಿನಾಲು ದೇವರ ಪೂಜೆ ಭಕ್ತಿಯಿಂದ ನಡೆದಿರುವುದು. ಮಂತ್ರಗಳ ಉದ್ಘೋಷ ಸತತ ನಡೆಸುವರು. ಇದರಿಂದ ದೇವರು ಸಂತುಷ್ಟನಾಗಿ ವರುಣದೇವನಿಗೆ ಮಳೆ ಕೊಡುವಂತೆ ಆಜ್ಞೆ ಮಾಡುವನಂತೆ. ಮಳೆ ಬಂದನಂತರವೇ ಈ ನೀರನ್ನು ಬರಿದು ಮಾಡುವರು ಮತ್ತು ಆ ಬಾಗಿಲಿನ ಗೋಡೆ ತೆಗೆದು ಹಾಕುವರು. ಮಳೆ ಬಾರದಿದ್ದಾಗ ರೈತರಿಗೆ ವಿಪರೀತ ಸಂಕಟ, ಮಳೆ ಬಂದಾಗ ಅವರ ಮುಖದಲ್ಲಿ ಹಿಗ್ಗು. ಇಂತಹ ಸನ್ನಿವೇಶಗಳು ಜನಪದ ತ್ರಿಪದಿಗಳಲ್ಲಿ ಕಾಣುತ್ತೇವೆ.

ಮಳೆಯಪ್ಪ ಮಳಿರಾಜಾ ಬೆಳಿ ಒಣಗಿ ಹೋದಾವ್ಹೊ ।
ಬಡವರು ಬಾಯಿ ಬಿಡತಾರೊ । ಅಡಿವ್ಯಾನ ।
ಗಿಡಬಳ್ಳಿ ಕೊರಗಿ ಕಮರ್‍ಯಾವೊ ।।

ಪಾತಾಳಕ ಮಳಿ ಆಗಿ ಭೂತಳವು ಹಸಿ ಆಗಿ ।
ಭೂತಳದ ಗಂಗಿ ತಾ ತುಳುಕಿ । ಹೇಳ್ಯಾಳ ।
ಬಿತ್ತಪ್ಪ ಮಗನ ಬಿಳಿಜೋಳ ।।

ಇಲ್ಲಿಯ ಮುಂದಿನ ತ್ರಿಪದಿಯಲ್ಲಿ ಅಕ್ಕ-ತಂಗಿಯರ ಸಂವಾದ ಬಹುಸೊಗಸಾಗಿ ಬಂದಿದೆ. ಕೃಷಿಕ ಹೆಣ್ಣುಮಕ್ಕಳು ಪರಸ್ಪರ ಭೆಟ್ಟಿಯಾದಾಗ ಕೇಳುವ ಮೊದಲ ಪ್ರಶ್ನೆ ಮಳೆಯನ್ನೇ ಕುರಿತಾದುದು.

ಹೊಳಿಯ ಆಚಿನ ತಂಗಿ ಮಳೆಯ ಸುದ್ದಿ ಹೇಳ ।
ಹೊಳಿ ಭಾಳ ಅಕ್ಕ ಮಳಿ ಭಾಳ । ಈ ವರುಷ ।
ಬಿಳಿ ಮುತ್ತಿನಂಥ ಬಿಳಿ ಜೋಳ ।।

ಬಿತ್ತುವ ಹಂಗಾಮು ಬರುತ್ತಲೇ ರೈತರು ಮಳೆರಾಯನ ಬರವಿಗಾಗಿ ಹಾತೊರೆಯುತ್ತಾರೆ.

ಮಳೆಯಪ್ಪ ಮಳಿರಾಯ ಕರೆಯತಾರೋ ನಿನ್ನ ।
ಮೊದಲ ಕೂರಿಗೆಯ ರೈತರೋ । ಹೊಲದಾಗ ।
ನಾವೆದ್ದು ಕೈಯ ಮುಗಿದೇವ್ಹೊ ।।

ಮುಂಗಾರು ಮಳೆ ಬರುತ್ತಲೇ ರೈತನು ತನ್ನ ಕೂರಿಗೆಯನ್ನು ಸಜ್ಜುಗೊಳಿಸಲು ಬಡಿಗನ ಹತ್ತಿರ ಬರುತ್ತಾನೆ. ಆ ಚಿತ್ರಣ ಇಲ್ಲಿದೆ.

ರೋಣಿ ಮಿರಗದ ಮಳೆಯು ಬಿದ್ದಿತೋ ಭೂಮಿ ಮ್ಯಾಲ ।
ಎದ್ದಾನ ಒಕ್ಕಲಿಗ ಬೆಳತನ । ಕೂರಿಗಿ ತಾಳ ।
ಬಿದ್ದಾವ ಬಡಿಗ್ಯಾನ ಅರಮನಿಗಿ ।।

ಬಿತ್ತುವ ದಿನ ಬಂತೊ ಎತ್ತು ತಯ್ಯಾರ ಮಾಡೊ ।
ಮುತ್ತಿನ ಕೂರಿಗಿ ಹದ ಮಾಡೊ । ಎಲೆ ರೈತಾ ।
ಮುತ್ತೈದಿ ಅಕ್ಕಡಿಥಿಗಿ ಬರತಾಳೊ ।।

ಮಳೆಯ ಬಗ್ಗೆ ಸರ್ವಜ್ಞನಲ್ಲಿಯೂ ಸಾಕಷ್ಟು ವಿಚಾರಗಳನ್ನು ಕಾಣುತ್ತೇವೆ. ಅವುಗಳಲ್ಲಿ ಮಾದರಿಗಾಗಿ ಒಂದು ತ್ರಿಪದಿಯನ್ನು ಇಲ್ಲಿ ಕೊಡಲಾಗಿದೆ.

ಅಶ್ವಿನಿ ಮಳೆಗಾಗಿ ಆರಿದ್ರ ಮಳೆ ಹೋಗಿ।
ಆಷಾಢಕ್ಕೆ ಹೊಳೆ ಬಾರದಿರೆ। ದೇಶಕ್ಕೆ।
ಘಾಸಿಯಾಯಿತ್ತು ಸರ್ವಜ್ಞ॥

ಒಕ್ಕಲಿಗನು ತಲೆ ತಲಾಂತರಗಳಿಂದ ಬೇಸಾಯವನ್ನೇ ಉದ್ಯೋಗವಾಗಿಸಿಕೊಂಡು ಬಂದಿರುವುದರಿಂದ, ಅವನ ಅನುಭವಗಳಲ್ಲಿ ಹಲವಾರು ನಂಬಿಕೆಗಳು ರೂಢಿಯಲ್ಲಿ ಬಂದಿವೆ. ಇವುಗಳಲ್ಲಿ ಕೆಲವು ಶುಷ್ಕವಾಗಿರಬಹುದಾದರೂ ಅನೇಕ ನಂಬಿಗೆಗಳು ವೈಜ್ಞಾನಿಕ ಹಿನ್ನೆಲೆಯವಾಗಿವೆ. ಅವುಗಳ ಅಧ್ಯಯನ ಇಂದು ಅವಶ್ಯವಾಗಿದೆ.

ಈ ನಂಬಿಗೆಗಳನ್ನು ಮತ್ತೊಮ್ಮೆ ಪರಾಮರ್ಶಿಸಿ ಸತ್ಯಾಂಶವನ್ನು ಹೊರತರಬೇಕಾದ ಅಗತ್ಯವಿದೆ. ಇಲ್ಲಿ ಕೃಷಿಕನ ಮಳೆ ಕುರಿತ ಕೆಲವು ನಂಬಿಗೆಗಳನ್ನು ಕೊಡಲಾಗಿದೆ.

1. ಅಸಲಿಲ್ಲದೆ ಬಡ್ಡಿಯಿಲ್ಲ ಮಳೆಯಿಲ್ಲದೆ ಬೆಳೆಯಿಲ್ಲ.
2. ಅರಗಳಿಗೆ ಬಂದರೂ ಸುರಿಮಳೆ ಬರಬೇಕು
3. ಅಬ್ಬರಿಸಿ ಹೊಡೆದದ್ದು ಮಳೆ ಅಲ್ಲ; ಗಬ್ಬ ಆಗದ್ದು ದನಾ ಅಲ್ಲ
4. ಆಕಾಶದ ಮಳೆ, ಭೂಮಿಯ ಬೆಳೆ.
5. ಅಶ್ವಿನಿ ಸಸ್ಯ ನಾಶಿನಿ
6. ಅಶ್ವಿನಿ ಮಳೆ ಬಿದ್ದರೆ ಅರಿಷಿಣಕ್ಕೆ ಒಳಿತು, ಅಡಿಕೆಗೆ ಕೇಡು
7. ಭರಣಿ ಬೆರಣಿ, ಭರಣಿ ಬಂಗಾರದ ಕರಣಿ
8. ಭರಣಿ ಮಳೆ ಧರಣಿಗೆ ಗಂಡ
9. ಭರಣಿ ಸುರಿದು ಧರಣಿ ಬದುಕಿಸಿತು
10. ರೋಣಿ ಮಳೆಯಾದರೆ ಓಣೆಲ್ಲ ಜೋಳ
11. ಆರಿದ್ರ ಬರದಿರೆ ದರಿದ್ರ ಖಂಡಿತ
12. ಆರಿದ್ರ ಮಳೆ ಅದ್ದೂರಿ ಬೆಳೆ
13. ಆರಿದ್ರ ಗುಡುಗಿದರೆ ಆರು ಮಳೆ ಬಾರವು
14. ಆಶ್ಲೇಷ ಮಳೆ ಕೈತುಂಬ ಬೆಳೆ
15. ಮಗಿ ಮಳೆಯಾದರೆ ಮಗಿ ಗಾತ್ರದ ತೆನೆ
16. ಹುಬ್ಬಿ ಮಳೆ ಬಂದರೆ ಗುಬ್ಬಿ ಪುಚ್ಚ ತೊಯ್ಯೋದಿಲ್ಲ

17. ಆದರ ಉತ್ತರಿ, ಆಗದಿದ್ದರ ಸತ್ತರಿ
18. ಆದರ ಹಸ್ತ, ಆಗದಿದ್ದರ ರೈತ ಹಲ್ಲ ಕಿಸ್ತ
19. ಕುರುಡು ಚಿತ್ತಿಧಿ ಮಳಿ, ಬಿದ್ದಲ್ಲಿ ಬೆಳಿ
20. ಸ್ವಾತಿ ಮಳಿ ಮುತ್ತಿನ ಬೆಳಿ
21. ಸ್ವಾತಿ ಮಳಿ ಆದ ಮ್ಯಾಲ ಐತೇನು?
22. ವಿಶಾಖಾ ಮಳೆಗೆ ವಿಷ ತೊಳೆಯುತ್ತದೆ.
23. ಅನುರಾಧೆ ಬಂದರೆ ಬಿತ್ತಿದಷ್ಟೇ ಬೆಳೆ
24. ಮಳೆ ಬಂದರೆ ಕೇಡಲ್ಲ, ಮಗ ಉಂಡರೆ ಕೇಡಲ್ಲ
25. ಮಳೆ ಬಿದ್ದರೆ ಸೊಬಗು, ಇಲ್ಲ ದಿದ್ದರೆ ಕೊರಗು
26. ಮಳೆಯಿಲ್ಲದ ಪೈರೂ ಒಂದೇ, ಮತಿಯಿಲ್ಲದ ಕೂಸೂ ಒಂದೇ
27. ಆಶ್ವೀಜದಲ್ಲಿ ಹೊನ್ನ ಕರಗೋ ಬಿಸಿಲು, ಮಣ್ಣ ಕರಗೋ ಮಳಿ
28. ಉತ್ತರಕ್ಕೆ ಮಿಂಚಿದರೆ ಮಳೆ ಬರುವುದಿಲ್ಲ
29. ಮಳೆಹುಳಗಳು ಹಾರಾಡುತ್ತಿದ್ದರೆ ಮಳೆ ಬರುವುದು
30. ಕೃತಿಕಾದಿಂದ ಆಶ್ಲೇಷಾವರೆಗೆ ಏಳು ಮುಂಗಾರು ಮಳೆಗಳು, ಮಗಿಯಿಂದ ವಿಶಾಖಾವರೆಗೆ ಏಳು ಹಿಂಗಾರು ಮಳೆಗಳು.
31. ಮೃಗ ಮಿಂಚಬಾರದು, ಆರಿದ್ರ ಗದ್ದರಸಬಾರದು
32. ಹಸ್ತದಲ್ಲಿ ಬಿತ್ತಿದ ಬೆಳೆ ಉತ್ತಮ ಬರುವುದು
33. ಆರಿದ್ರಾ ಮಳೆಗೆ ಸೇಂಗಾ, ಪುಷ್ಯ ಮಳೆಗೆ ಸಜ್ಜಿ, ಆಶ್ಲೇಷಾ ಮಳೆಗೆ ಹತ್ತಿ ಬಿತ್ತಬೇಕು
34. ಸ್ವಾತಿಯ ಮಳೆಗೆ ತಪ್ಪಲು ಉದುರಿ ಹತ್ತಿಯ ಬೆಳೆ ಹಾಳಾಗುವುದು
35. ಚಿತ್ತಿ ಮಳೆಗೆ ಗೋದಿ, ಕಡಲೆ ಬಿತ್ತಬೇಕು.
36. ಚಂದ್ರ ಕಣಕಟ್ಟಿದರೆ ಮಳೆ ಬರುವುದಿಲ್ಲ, ಇಂಗ್ಲಿಷ ಸಿ(c)ಆಕಾರದಲ್ಲಿ ಕಣಕಟ್ಟಿದರೆ ಮಳೆ ಬರುವದು.

37. ಇರುವೆ ಸಾಲುಗಟ್ಟಿದರೆ ಮಳೆ ಬರುವುದು.

38. ಕಲಬುರ್ಗಿದಿಕ್ಕಿಗಿ ಮಿಂಚಿದರ ಕರಾಕಟ್ಟುದರಾಗ ಮಳಿ ಬರ್ತದ

39. ಉತ್ತರಿ ಮಳೆಗೆ ಮೂರು ದಿನ ಹೊಲೆ ಪಾಲಿಸುವರು. (ಆಗ ಉತ್ತರಿ ರಸಜ್ವಲೆಯಾಗಿರುವಳಂತೆ)
ಹೀಗೆ ಪಾಲಿಸಲು ಆಗದಾದಾಗ ಬ್ಯಾಲದ ತೊಗಟಿ ಕಟ್ಟಿ ನೀರು ಹಾಕಿ ಬಿತ್ತ ತೊಡಗಿದರೆ ದೋಷವಿಲ್ಲ.

ಗಾಳಿ : ಕೃಷಿಕನ ಜೀವನದಲ್ಲಿ ಭೂಮಿತಾಯಿ, ಮಳೆರಾಯನ ಜೊತೆಗೆ ಗಾಳಿಯೂ ಮಹತ್ವದ ಪಾತ್ರ ಪಡೆದಿದೆ, ಮಳೆ ಬರಲು ಮತ್ತು ಮಳೆ ಚದುರಿ ಹೋಗಲು ಗಾಳಿಯೇ ಕಾರಣ. ಕೆಲವು ದಿಕ್ಕಿನ ಗಾಳಿ ಬೀಸಿದರೆ ರೈತನ ಬೆಳೆಗೆ ಅನುಕೂಲ, ಮತ್ತೆ ಕೆಲವು ದಿಕ್ಕಿನ ಗಾಳಿಯಿಂದ ರೈತನ ಬೆಳೆಗೆ ಪ್ರತಿಕೂಲ. ಕೆಲಕಾಲ ಬೀಸುವ ಗಾಳಿಯಿಂದ ದನ-ಕರುಗಳಿಗೆ ಹಾಗೂ ಮನುಷ್ಯರಿಗೆ ರೋಗಾದಿಗಳು ಬರುವದುಂಟು. ಗಾಳಿಯ ಕುರಿತ ರೈತನ ಕೆಲ ನಂಬಿಗೆಗಳು ಇಂತಿವೆ:

1. ಮೂಡಲ ಗಾಳಿ ಬೀಸಿದರೆ ಮಳೆ ಬರುವುದಿಲ್ಲ; ಭೂಮಿ ಬಿರುಸಾಗುವದು; ನೀರು ಬತ್ತುವದು.
2. ಪಡುಗಾಳಿ (ಆಷಾಢದಲ್ಲಿ ಬೀಸುವ ಶುಷ್ಕ ಗಾಳಿ) ಬೀಸಿದರೆ ದನಗಳಿಗೆ ರೋಗ, ಕಾಲು ಬೇನೆ, ಬಾಯಿ ಬೇನೆ ಬರುವದು.
3. ಪಡುಗಾಳಿ ಬೀಸಿದರೆ ಹತ್ತಿ, ಹಣ್ಣಿನ ಗಿಡಗಳ ಕಾಯಿಗಳಿಗೆ ಅನುಕೂಲ ಮತ್ತು ಭೂಮಿ ಈ ಗಾಳಿಯಿಂದ ಮಿದುವಾಗುವದು.
4. ರಾಸಿಯನ್ನು ತೂರುವಾಗ ಹರಿಶ್ಚಂದ್ರರಾಯನ ಗಾಳಿ ಬೀಸಿದರೆ (ದಕ್ಷಿಣ ಗಾಳಿ) ಧಾನ್ಯ ಹುಲುಸಾಗುವದು.
5. ಹರಿಶ್ಚಂದ್ರರಾಯನ ಗಾಳಿಯಿಂದ ಕಾಳು ತುಂಬಿ ಬರುತ್ತದೆ.
6. ಗಂಗಿಗಾಳಿ (ಉತ್ತರ ಗಾಳಿ) ಬೀಸಿದರೆ ಜೋಳದ ಬೆಳೆಗೆ ತಂಪು ಹೆಚ್ಚು
7. ಕುಂಬಾರಗಾಳಿ (ನೈಋತ್ಯಗಾಳಿ) ಬೀಸಿದರೆ ಹೋದ ಮಳೆ ಮರಳಿ ಬರುವದು. ಇದು ಜೋಳದ ಬೆಳೆಗೆ ಉತ್ತಮ.
8. ಗಂಗಿಗಾಳಿ (ಉತ್ತರಗಾಳಿ) ಗೆ ತಂಪು ಹೆಚ್ಚು. ಈ ಗಾಳಿಯಿಂದ ದನಗಳಿಗೆ ರೋಗ ಬರುವದು.

9. ಸುಂಟರ ಗಾಳಿಗೆ 'ದೆವ್ವದ ಗಾಳಿ' ಎಂದು ಕರೆಯುವರು.

10. ರಾಸಿಗಾಳಿ, ಕೋಳೂರ ಗಾಳಿಗಳು ಬೀಸಿದರೆ ರಾಸಿಗೆ ಹುಲುಸು ತುಂಬುವದು.
ಈ ಕುರಿತ ತ್ರಿಪದಿಗಳು ಇಂತಿವೆ:

ರಾಸಿ ಗಾಳಿಯು ಬೀಸಿ ಸೂಸಿ ಹರಿಯಿತು ಕಣವು ।
ಕೂಸ ಕೋಳೂರ ಕಡೆಗಾಳಿ । ಬೀಸೆಂದು
ಮೀಸಲೀ ರಾಸಿ ಜಂಗಮಕೆ ।।

ಹರಿಚಂದ ಗಾಳಿಗಳು ಭರದಿ ಬೈಲಿಗೆ ಬೀಸಿ
ಸುರಿಮಳೆಯು ನಮ್ಮ ಬೆಳವಲಕೆ । ಕೋಳೂರ ।
ಬರಿಗಾಳಿ ಬೀಸಿ ಹಗೆ ತುಂಬಿ ।।

✦ ✦ ✦

3. ಪಶು ಸಂಪತ್ತು

'ದನ ದ್ರವ್ಯ ಅಲ್ಲ' ಎಂಬುದನ್ನು ರೈತರು ಚೆನ್ನಾಗಿ ಅರಿತಿದ್ದರೂ ದನಗಳೊಡನೆ ಅವರ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ಆದಿಮಾನವ ಪ್ರಾಣಿಗಳೊಡನೆ ಪ್ರಾಣಿಗಳಂತೆಯೇ ಬದುಕಿದ್ದನೆಂಬುದು ನಮಗೆ ಗೊತ್ತಿರುವ ಸಂಗತಿ. ವಿಶ್ವದ ಪ್ರಾಣಿ ಜನಪದ ಕಥೆಗಳನ್ನು ಗಮನಿಸಿದರೆ ಬಹುಪಾಲು ಪ್ರಾಣಿಗಳು ಮನುಷ್ಯರ ಜೊತೆ ಮನುಷ್ಯರಂತೆ ಬದುಕಿದ್ದ ನಿದರ್ಶನಗಳು ದೊರೆಯುತ್ತವೆ. ಸ್ನೇಹಿತನಾಗಿ, ಸೇವಕನಾಗಿ, ಸ್ವಾಮಿಭಕ್ತನಾಗಿ, ಭವಿಷ್ಯಸೂಚಕನಾಗಿ, ದುಡಿಮೆಗಾರನಾಗಿ, ಆಹಾರವಾಗಿ ಅನೇಕ ಪ್ರಾಣಿಗಳು ಮಾನವನ ಬದುಕಿನಲ್ಲಿ ಬೆಸೆದುಕೊಂಡಿವೆ. ಇವುಗಳಲ್ಲಿ ಹಿಂಸ್ರಪಶುಗಳಿಂದ ರೈತ ದೂರವಾಗಿದ್ದು ಸಾಕುಪ್ರಾಣಿಗಳ ಜೊತೆ ತನ್ನ ಸಂಬಂಧವನ್ನು ವೃದ್ಧಿಸಿಕೊಂಡಿದ್ದಾನೆ. ಅನುಕರಣವಾದವನ್ನು ಪ್ರತಿಪಾದಿಸುವ ಮತ್ತು ಆ ವಾದವನ್ನು ಒಪ್ಪುವ ಭಾಷಾ ವಿಜ್ಞಾನಿಗಳು ಜಗತ್ತಿನ ಎಲ್ಲ ಭಾಷೆಗಳ ಮೂಲ ಪ್ರಾಣಿಭಾಷೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅತಿ ಪ್ರಾಚೀನ ಕಾಲದಲ್ಲಿ ಪ್ರಾಣಿಗಳೂ ಮಾತಾಡುತ್ತಿದ್ದವಂತೆ. ಈ ಬಗ್ಗೆ ನಮ್ಮ ನಾಡಿನ ಜನಪದರಲ್ಲಿ ಕೆಲವು ಕಥೆಗಳಿವೆ. ಒಮ್ಮೆ ಆಕಳೊಂದು ಮನೆಯ ಸೊಸೆಯ ನಡತೆಯ ಬಗ್ಗೆ ಅತ್ತೆಗೆ ಚಾಡಿ ಹೇಳಿತಂತೆ. ಇದರಿಂದ ಕೊಪಗೊಂಡ ಆಕೆ 'ನಿನ್ನ ಮಾತು ನಿಂತುಹೋಗಲಿ' ಎಂದು ಶಾಪ ಕೊಟ್ಟಳು. ಅಂದಿನಿಂದ ಪ್ರಾಣಿಗಳಿಗೆ ಮಾತು ನಿಂತುಹೋಯಿತಂತೆ. ಇದರ ಸತ್ಯಾಸತ್ಯತೆ ಏನೇ ಇರಲಿ, ಕೆಲವು ಪ್ರಾಣಿಗಳು ಮನುಷ್ಯನ ಮಾತುಗಳಿಗೆ ಪ್ರತಿಕ್ರಿಯಿಸುವುದನ್ನು ಕಾಣುತ್ತೇವೆ. ಮನುಷ್ಯ ಕೂಗಿದಾಗ ಆಕಳು ತಾನಿದ್ದ ಸ್ಥಳದಿಂದ ಧ್ವನಿಮಾಡುತ್ತದೆ. ಕೋತಿ, ಕರಡಿಗಳು, ಆಡಿಸುವವರ ಮಾತಿನಂತೆ ಕುಣಿಯುತ್ತವೆ. ಆನೆ, ಸಿಂಹ, ಹುಲಿ ಮೊದಲಾದ ಬಲಿಷ್ಠ ಹಾಗೂ ಕ್ರೂರಪ್ರಾಣಿಗಳೂ ಮಾನವನ ಅಪ್ಪಣೆಯಂತೆ ವರ್ತಿಸುತ್ತವೆ. ಹೀಗೆ ಮಾನವ ಮತ್ತು ಪ್ರಾಣಿಗಳ ನಿಕಟ ಸಂಬಂಧವನ್ನು ಕಾಣುತ್ತೇವೆ.

ಗೋವಿನ ಪೂಜೆ ನಮ್ಮ ನಾಡಿನಲ್ಲಿ ವಿಶೇಷವಾಗಿ ಕಂಡುಬರುತ್ತದೆ. 'ಆಕಳ ಹೊಟ್ಟೆಯಲ್ಲಿ ಅಚ್ಚೇರು ಬಂಗಾರ'- ಎಂಬುದೊಂದು ಗಾದೆ. ಗೋಮಾತೆಯ ಶರೀರದಲ್ಲಿ ಮೂವತ್ಮೂರು ಕೋಟಿ ದೇವತೆಗಳಿದ್ದಾರೆಂದು ಹೇಳಲಾಗುವುದು. ಕೃಷಿಕ್ಷೇತ್ರದಲ್ಲಿ ಇದರ ಪ್ರಯೋಜನ ಅಪಾರ. ಅಹಿಂಸಾ ನೀತಿಯನ್ನು ಸಾರುವ ಭಾರತದ ಬಹುಭಾಗದಲ್ಲಿ ಇದನ್ನು ಭಕ್ತಿ, ಗೌರವಗಳಿಂದ ಪೂಜಿಸುತ್ತಾರೆ. ಹಿಂದುಗಳಿಗೆ ಇದು ದೇವತೆಯ ಸಮಾನ, ಕಾಮಧೇನು ! ಹಸುವಿನ ಹಾಲು , ಮೊಸರು, ಬೆಣ್ಣೆ , ಗಂಜಲ, ಮತ್ತು ಸಗಣಿಯನ್ನು

'ಪಂಚಗವ್ಯ' ಎಂದು ದೇವತಾ ಕಾರ್ಯಗಳಲ್ಲಿ ಮತ್ತು ರೋಗ ನಿವಾರಣೆಗಾಗಿ ಬಳಸುತ್ತಾರೆ. ಜೀವ ಮನುಷ್ಯರೂಪ ಪಡೆಯುವುದಕ್ಕೆ ಮೊದಲು ಗೋವಿನ ರೂಪದಲ್ಲಿರುತ್ತದೆ ಎಂಬುದು ಹಿಂದುಗಳ ನಂಬಿಕೆ. ಅದು ಸಾಧುಪ್ರಾಣಿ ಮತ್ತು ಸತ್ಯದೇವತೆ. ಗೋವಿನ ಸತ್ಯವಾಕ್ಯಕೆ ಪಶ್ಚಾತ್ತಾಪ ಪಟ್ಟು ಹುಲಿರಾಯ ಪ್ರಾಣತ್ಯಾಗ ಮಾಡಿದ ಕಥೆ 'ಗೋವಿನ ಹಾಡು' ಒಳಗೊಂಡಿದೆ. ಆಕಳ ಹಾಲು ಪರಿಪೂರ್ಣ ಆಹಾರ. ಇದರ ಸಗಣಿಯನ್ನು ಪವಿತ್ರವೆಂದು ಭಾವಿಸಿ ಬೆನಕನ ಪೂಜೆಗೆ ಮತ್ತು ವಿಭೂತಿ ತಯಾರಿಸಲು ಬಳಸುತ್ತಾರೆ. ನೀಲಗಿರಿಯ ತೊದವರಿಗೆ ಎಮ್ಮೆ ಪೂಜ್ಯನೀಯವೆನಿಸಿದೆ. ಎಮ್ಮೆಯಿಂದ ಹೆಚ್ಚು ಹಾಲು ಸಿಗುತ್ತದೆ, ಹೆಚ್ಚು ಗೊಬ್ಬರವೂ ಸಿಗುತ್ತದೆ. ಅವರು ಎಮ್ಮೆಯನ್ನು ಊಳಲಿಕ್ಕೂ ಉಪಯೋಗಿಸುವರು ಆದರೂ ಆಕಳಿಗಿರುವ ಗೌರವ ಅದಕ್ಕೆ ಕಂಡುಬರದು.

ಎತ್ತು, ಎಮ್ಮೆ , ಕೋಣ, ಆಡು, ಕುದುರೆ ಮೊದಲಾದ ಪ್ರಾಣಿಗಳನ್ನು ರೈತ ಸಾಕುತ್ತಾನೆ. ಆಕಳು ಹೋರಿ ಕರುಗಳಿಗೆ ಜನ್ಮ ನೀಡಿದರೆ ಈ ಕರು ಮೂರು ವರ್ಷಗಳಲ್ಲಿ ಉಳುಮೆಗೆ ಬರುತ್ತದೆ. ಅಂದಿನಿಂದ ಸುಮಾರು 15 ವರ್ಷ ಅದು ದುಡಿದು ಮುಪ್ಪಾಗುತ್ತದೆ. ಆಗ ರೈತರು ಅದನ್ನು ದುಡಿಮೆಯಿಂದ ವಿಮುಕ್ತಗೊಳಿಸುವರು. ಇದಕ್ಕೆ 'ಹೆಗಲು ತೊಳೆಯುವುದು' ಎಂದು ಹೇಳುತ್ತಾರೆ. ಅನಂತರ ಆ ಮುದಿ ಎತ್ತು ಒಂದೆರಡು ವರ್ಷ ಬದುಕಬಹುದು. ಅದು ಪ್ರಾಣಬಿಟ್ಟಾಗ ಹೊಲ ಇಲ್ಲವೆ ತೋಟದ ವಸತಿಯ ಸಮೀಪ ಗಿಡದಡಿಯಲ್ಲಿ ಅದನ್ನು ಹೂಳುವನು. ಆ ಸಮಾಧಿಯ ಮೇಲೆ ಒಂದು ಕಲ್ಲನ್ನು ಇಟ್ಟು ಹುಣ್ಣಿಮೆ, ಅಮಾವಾಸೆ , ಬಸವ ಜಯಂತಿ ಮೊದಲಾದ ದಿನಗಳಂದು ಅದಕ್ಕೆ ಪೂಜೆ ಸಲ್ಲಿಸುವನು. ಇದು ಆವನ ಕೃತಜ್ಞತಾಭಾವವನ್ನು ತೋರಿಸುತ್ತದೆ. ಅದು ಸತ್ತಾಗ ಅದನ್ನು ಕಟುಕರಿಗೆ ಕೊಟ್ಟು ಸುಲಿಸುವ ಪಾಪಕಾರ್ಯವನ್ನು ಅವರು ಮಾಡಲಾರರು. ಎತ್ತು ರೈತನ ಕೃಷಿಯಲ್ಲಿ ಬಸವಣ್ಣ. ಅದು ರೈತನ ಜೀವ-ಜೀವಾಳ. ಅಂತೆಯೇ ವಾರದಲ್ಲಿ ಒಂದು ದಿನ ಸೋಮವಾರ ಅವನಿಗೆ ರಜೆ. ಆ ದಿವಸ ಅದನ್ನು ಹೂಡುವುದಿಲ್ಲ. ಪ್ರತಿ ಸೋಮವಾರ ಎತ್ತುಗಳ ಮೈತೊಳೆದು ಪೂಜೆ ಮಾಡುವುದುಂಟು. ಕಾರಹುಣ್ಣಿಮೆ , ಬಸವಜಯಂತಿ , ಜಾತ್ರೆ, ಹಬ್ಬಗಳಲ್ಲಿ ಬಸವಣ್ಣನಿಗೆ ವಿಶೇಷಪೂಜೆ ಸಲ್ಲಿಸುವರು. ಕಾರಹುಣ್ಣಿಮೆಯಂದು ಬಸವಣ್ಣ ಅಧಿಕ ಮಹತ್ವ ಪಡೆದಿದ್ದಾನೆ. ಈ ಕುರಿತು ಒಂದು ಜನಪದ ಕಥೆ ರೂಢಿಯಲ್ಲಿದೆ.

ಮಳೆಗಾಲದ ಆರಂಭದಲ್ಲಿ ಬರುವದರಿಂದ ಈ ಹುಣ್ಣಿಮೆಗೆ ಕಾರಹುಣ್ಣಿಮೆ ಎಂಬ ಹೆಸರು ಬಂದಿದೆ. ಕಾರ್ ಅಂದರೆ ಮಳೆ ಎಂಬ ಅರ್ಥದಿಂದ ಇದನ್ನು ಹೇಳುತ್ತಾರೆ.

ಪ್ರಾಚೀನ ಕಾಲದಲ್ಲಿ ಭೂಮಿಯ ಮೇಲೆ 'ಕಾರಾಸುರ' ಎಂಬ ರಾಕ್ಷಸನಿದ್ದನಂತೆ. ಅವನ ಹೆಸರೇ ಈ ಹುಣ್ಣಿಮೆಗೆ ಬಂದಿದೆ. ಯಾಕೆಂದರೆ ಇವನ ಸಂಹಾರವಾದುದು ಇದೇ ದಿನ ಎಂಬುದು ಇನ್ನೊಂದು ಹೇಳಿಕೆ.

ಕಾರಾಸುರ ಲೋಕಕಂಟಕನಾಗಿದ್ದ. ಅವನುಪಟಳಕ್ಕೆ ಬೇಸತ್ತ ಜನ ದಿಕ್ಕು ಕಾಣದಂತಾಗಿದ್ದರು. ಈ ರಾಕ್ಷಸ ಬಲಾಢ್ಯನಾಗಿದ್ದನಲ್ಲದೆ ಅಜೇಯನಾಗಿದ್ದ. ಇವನ ಸಂಹಾರ ಮಾನವರಿಂದ ಸಾಧ್ಯವಿರಲಿಲ್ಲ. ಆಗ ಭೂಲೋಕದ ಒಂದು ನಿಯೋಗ ಶಿವನ ಹತ್ತಿರ ಹೋಗಿ ಆ ರಾಕ್ಷಸನಿಂದ ತಮಗಾದ ತೊಂದರೆಯನ್ನು ವಿವರಿಸಿ ದೇವತೆಗಳಲ್ಲಿ ಯಾರಾದರೂ ಒಬ್ಬರನ್ನು ಕಳಿಸಿ ಆ ರಾಕ್ಷಸನ ಸಂಹಾರವಾಗಬೇಕೆಂದು ಭಿನ್ನವಿಸಿದರು. ಈ ವಿಚಾರವಾಗಿ ಶಂಕರನು ದೇವತೆಗಳ ಒಂದು ಸಭೆಯನ್ನು ಕರೆದು ಎಲ್ಲರಲ್ಲಿ ವಿಷಯ ತಿಳಿಸಿ 'ಯಾರು ಈ ರಾಕ್ಷಸನ ಸಂಹಾರಕ್ಕಾಗಿ ಹೋಗುತ್ತೀರಿ?' ಎಂದು ಕೇಳಿದನು. ಯಾರಿಂದಲೂ ಸಕಾರಾತ್ಮಕ ಉತ್ತರ ಬರಲಿಲ್ಲ. ಆಗ ಶಂಕರನು ಒಂದು ಉಪಾಯ ಸೂಚಿಸಿದನು. ನಾಳೆ ಇಲ್ಲಿ ಒಂದು ಕಡೆ ಹುಗ್ಗಿಯನ್ನು ಮಾಡಿಸುತ್ತೇವೆ. ಅದರಲ್ಲಿ ಬಂಗಾರದ ಒಂದು ಉಂಗುರವನ್ನು ಹಾಕಲಾಗುವುದು. ನೀವೆಲ್ಲ ನಾಳೆ ಸಂಜೆ ಊಟಕ್ಕೆ ಬರಬೇಕು. ಆ ಉಂಗುರ ಯಾರ ಎಡೆಯಲ್ಲಿ ಬರುವುದೋ ಅವರು ರಾಕ್ಷಸನ ಸಂಹಾರಕ್ಕೆ ಹೋಗುವದು ಕಡ್ಡಾಯ - ಎಂದು ಹೇಳಲಾಗಿ ಅದನ್ನು ಎಲ್ಲಾ ದೇವತೆಗಳೂ ಒಪ್ಪಿಕೊಂಡರು. ಮರುದಿನವೇ ಬಂಗಾರದ ಉಂಗುರ ಹಾಕಿ ತಯಾರಿಸಿದ ಹುಗ್ಗಿ ಸಿದ್ಧವಾಯಿತು. ಈ ಕಾರಣದಿಂದ ಈ ದಿನವನ್ನು ಹೊನ್+ಹುಗ್ಗಿ =ಹೊನ್ನುಗ್ಗಿ ಎಂದು ಕರೆಯಲಾಗುವದು. ಈ ಹುಗ್ಗಿಯನ್ನು ಎಲ್ಲಾ ದೇವತೆಗಳಿಗೆ ಬಡಿಸಲಾಯಿತು. ಅಂದಿನ ದೇವತೆಗಳ ಪಂಕ್ತಿಯಲ್ಲಿ ಕುಳಿತ ಬಸವಣ್ಣ (ನಂದಿ)ನ ಎಡೆಯಲ್ಲಿ ಬಂಗಾರದ ಉಂಗುರ ಬಂತು. ಪೂರ್ವದ ಒಪ್ಪಿಗೆಯಂತೆ ಮರುದಿನ ಕಾರಹುಣ್ಣಿಮೆಯೆಂದು ಬಸವಣ್ಣ ಬೆಳಿಗ್ಗೆ ಸ್ನಾನಮಾಡಿ ಸಿಂಗಾರವಾಗಿ ರಾಕ್ಷಸನ ಸಂಹಾರಕ್ಕೆ ಹೋಗುತ್ತಾನೆ. ಆ ರಾಕ್ಷಸನೊಡನೆ ಕಾದಾಡಿ ಅವನನ್ನು ಕೊಂದುಹಾಕುತ್ತಾನೆ. ತನ್ನ ಕೋಡಿನಿಂದ ರಾಕ್ಷಸನ ಹೊಟ್ಟೆಯನ್ನು ತಿವಿದುದರಿಂದ ಕೋಡಿಗೆಲ್ಲ ರಕ್ತ ಲೇಪಿತವಾಗುವದು. ಅಂತೆಯೇ ಅಂದು ರೈತರು ಎತ್ತಿನ ಕೋಡುಗಳಿಗೆ ಕೆಂಪು ವಾರ್ನೀಸು ಹಚ್ಚುವರು. ಆ ಕಾದಾಟದಲ್ಲಿ ನಂದಿಯ ಮೈಗೆ ಹತ್ತಿದ ರಕ್ತದ ಕಲೆಗಳ ದ್ಯೋತಕವಾಗಿ ಮೈಗೆಲ್ಲಾ ಗುಲ್ಲಾ ಹಾಕುವರು. ಹೀಗೆ ಅ ರಾಕ್ಷಸನನ್ನು ಕೊಂದು ವಿಜಯಶಾಲಿಯಾಗಿ ಊರಲ್ಲಿ ಬರುವದೇ ಕರಿ ಹರಿಯುವ ಕಾರ್ಯಕ್ರಮ. ಇದು ರೈತರ ಹಾಗೂ ಅವರ ಎತ್ತುಗಳ ವಿಜಯದ ಹಬ್ಬ. ಆ ದಿವಸ ಎತ್ತುಗಳನ್ನು ಎಷ್ಟು

ಸಿಂಗರಿಸಿದರೂ ರೈತನಿಗೆ ತೃಪ್ತಿಯಿಲ್ಲ. ಪ್ರತಿಯೊಂದು ಹಬ್ಬಕ್ಕೂ ಒಂದು ಹಿನ್ನೆಲೆ ಇದ್ದೇ ಇರುತ್ತದೆ. ಇದನ್ನು ತಿಳಿದುಕೊಳ್ಳದೆ ನಮ್ಮ ಕೃಷಿಕರು ಶುಷ್ಕ ಆಚರಣೆಯಾಗಿ ಹಬ್ಬಗಳನ್ನು ಆಚರಿಸುತ್ತಿರುವದು ಖೇದಕರ ಸಂಗತಿ.

ಕಾರಹುಣ್ಣಿಮೆಯ ಕರಿಹರಿಯುವಾಗ ಕೆಂಪು ಎತ್ತು, ಬಿಳಿ ಎತ್ತು ಹೂಡುವದು ವಾಡಿಕೆ. ಇದರ ಮುಖಾಂತರ ರೈತರು ಮುಂದಿನ ಭವಿಷ್ಯ ತಿಳಿದುಕೊಳ್ಳುವರು. ಬಿಳಿ ಎತ್ತು ಮುಂದೆ ಬಂದರೆ ಬಿಳಿಜೋಳ, ಎಳ್ಳು, ಕುಸುಬೆ, ಮುಂತಾದ ಬಿಳಿ ಧಾನ್ಯಗಳು ಹುಲುಸಾಗಿ ಬೆಳೆಯುವವೆಂದೂ, ಕೆಂಪು ಎತ್ತು ಮುಂದೆ ಬಂದರೆ ಸೇಂಗಾ, ತೊಗರಿ, ಗೋದಿ ಮುಂತಾದ ಕೆಂಪು ಧಾನ್ಯಗಳು ವಿಪುಲವಾಗಿ ಬೆಳೆಯುವವೆಂದೂ ರೈತರು ಭಾವಿಸುವದುಂಟು.

ಕೃಷಿಕರು ಸಾಮಾನ್ಯವಾಗಿ ಎತ್ತುಗಳನ್ನು ಪ್ರೀತಿ ಗೌರವಗಳಿಂದ ಕಾಣುತ್ತಿದ್ದರೂ, ಕೆಲವರು ಎತ್ತು ಮುಪ್ಪಾದಾಗ ಅದನ್ನು ಕಟುಕರಿಗೆ ಮಾರುವುದುಂಟು. ಉಳುಮೆ ಕಾರ್ಯದಲ್ಲಿ ಎತ್ತಿಗೆ ಸಿಕ್ಕಹಾಗೆ ಬಡಿಯುವರು. ಅದಕ್ಕೆ ಸರಿಯಾದ ಆಹಾರ, ನೀರು ಕೊಡುವುದಿಲ್ಲ. ಹೀಗೆ ರೈತನಿಂದ ಪೆಟ್ಟು ತಿಂದು ತನ್ನ ಗೋಳು ತೋಡಿಕೊಂಡ ಒಂದು ಜನಪದ ಗೀತೆ 'ಎತ್ತಿನ ಹಾಡು' ಎಂಬ ಶೀರ್ಷಿಕೆಯಲ್ಲಿ 'ಮಲ್ಲಿಗೆ ದಂಡೆ' ಕೃತಿಯಲ್ಲಿ ಪ್ರಕಟವಾಗಿದ್ದು ಅದು ಹೀಗಿದೆ :

ಮಾಗಿಯ ಹೊಡಿಯಾಗ
ನನಕೈಲೆ ಮಾಯದಿಂದ ಮಾಡಿಸಿಕೊಂಡ್ಯಾ
ನಾ ಹೋಗಿ ಒಂದ
ತೆನಿ ಧಂಟ ತಿಂದರ
ಕಲ್ಲಕಲ್ಲಲೆ ಹೊಡದ್ಯೋ । ನಮಜೀವ ಹೋದಾವೊ ಕೈಲಾಸಕ ।।1।।

ನಾ ಒಂದ ಬಿತ್ತಿಧಿದ ನಾ ಒಂದ ಬೆಳೆದೀದ
ನಾ ಹೋಗಿ ಒಂದ
ಹೊಡಿಧಂಟ ತಿಂದರ
ಬಡಬಡಗಿಲೆ ಹೊಡದ್ಯೋ । ನಮಜೀವ ಹೋದಾವೊ ಕೈಲಾಸಕ ।।2।।

ಹತ್ತಿ ಕಾಳ ಕುಡು ಅಂದ್ರ
ನಿನ ಮಡದಿ ಅತ್ತ ಮಾರಿ ತಿರುವ್ಯಾಳ
ಹತ್ತಗೊಳಗ ತಿನ್ನಂದ್ರ
ಖಂಡಗ ತಿನ್ನುವ

ತುಂಡಿನಧಿ ತಂದ್ಹೊಡೊ । ನಮಜೀವ ಹೋದಾವೊ ಕೈಲಾಸಕ ।।3।।

ಹಿಂಡಿಯ ಕುಡು ಆಂದ್ರ
ನಿನ ಮಡದಿ ಮೂಗನೆ ತಿರುವ್ಯಾಳ
ಖಂಡಗ ತಿನ್ನಂದ್ರ
ಇಖ್ಖಂಡ್ಗ ತಿನ್ನಂಥ
ತುಂಡಿನಧಿ ತಂದ್ಹೊಡೊ । ನಮಜೀವ ಹೋದಾವೊ ಕೈಲಾಸಕ ।।4।।

ಇಕ್ಕಿದರ ಹೆಂಡಿನಾದಿನಧಿ ಹಚ್ಚಿದರಧಿ ಕುಳ್ಳನಾದಿನಧಿ ।
ದೇವಧಿರ ಮುಂದಿಧಿನ
ಪರಸಾದ ನಾ ಅದೆ.
ಮತ್ಯಾತಕಾದೇನ । ನಮ ಜೀವ ಹೋದಾವೊ ಕೈಲಾಸಕ ।।5।।

ಸತ್ತರ ತೊಗಲಾದೆನಧಿ ಮೆಟ್ಟಿದರೆ ಕೆರವಾದೆನಧಿ ।
ಹೆಗಲ ಮ್ಯಾಲಾಡಂಥ
ಬಾರಕೋಲ ನಾ ಆದೆ
ಮತ್ಯಾತಕಾದೇನ । ನಮ ಜೀವ ಹೋದಾವ ಕೈಲಾಸಕ ।।6।।

ಇಲ್ಲಿ ಎತ್ತು ತಾನಿದ್ದಾಗಲೂ ಸತ್ತ ಮೇಲೆಯೂ ಯಾವ ರೀತಿ ಪ್ರಯೋಜನಕಾರಿ ಎಂಬುದನ್ನು ಹೇಳಿಹೇಳಿ ವ್ಯಥೆ ಪಟ್ಟಿದೆ.

ಹಳ್ಳಿಯ ರೈತರು ಬೇಸಾಯದೊಡನೆ ದನಕರುಗಳನ್ನು ಸಾಕಿ ಲಾಭದಾಸೆಯಿಂದ ಕೊಳ್ಳುವ ಮತ್ತು ಮಾರುವ ಕಾರ್ಯವನ್ನು ಆಗಾಗ ಮಾಡುತ್ತಾರೆ. ಇದನ್ನು 'ಪಶುಪಾಲನೆ' ಎಂದು ಕರೆಯಲಾಗುವದು. ಪಶುಗಳನ್ನು ಕೊಳ್ಳುವಾಗ ಕೃಷಿಕರು ದನಗಳ ಸುಳಿ ಹಾಗೂ ಲಕ್ಷಣಗಳನ್ನು ನೋಡುತ್ತಾರೆ. ಅಂತೆಯೇ 'ತಳಿ ನೋಡಿ ಹೆಣ್ಣು ತರಬೇಕು, ಸುಳಿ ನೋಡಿ ದನಾ ತರಬೇಕು' ಎಂಬ ಗಾದೆ ರೂಢವಾಗಿದೆ. ಸುಳಿ– ಇದು ದನಗಳಿಗೆ ಹುಟ್ಟಿನಿಂದ ಬಂದದು, ಅಲ್ಲದೆ ಸಾಯುವವರೆಗೆ ಉಳಿಯುವಂತಹುದು. ಆದ್ದರಿಂದಲೇ ಹೀನ ಸುಳಿ ಬೋಳಿಸಿದರೆ ಹೋದೀತೇ? ಎಂಬುದು ಇನ್ನೊಂದು ಲೋಕೋಕ್ತಿ. ಸುಳಿ ಎಲ್ಲ ದನಗಳಿಗೆ ಇದ್ದರೂ ಕುರಿ, ಆಡುಗಳನ್ನು ಕೊಳ್ಳುವಾಗ ಸಾಮಾನ್ಯವಾಗಿ ಸುಳಿಗಳನ್ನು ನೋಡುವುದಿಲ್ಲಾ. ದನಗಳಲ್ಲಿ ಕುದುರೆಯ ಸುಳಿಗಳನ್ನು ಅತೀ ಸೂಕ್ಷ್ಮವಾಗಿ ನೋಡುವದುಂಟು. ಆಕಳು ಎತ್ತುಗಳಿಗೆ ಮುಂಭಾಗಕ್ಕೆ ಮಾತ್ರ ಎಂಟು ಹಲ್ಲುಗಳಿರುತ್ತವೆ. ಯಾವ ದನಗಳಿಗೂ ಏಳು ಹಲ್ಲುಗಳಿರಬಾರದು. ಏಳು ಹಲ್ಲಿನ ದನ ಗೋಳು ಮಾಡುವದೆಂದು ರೈತ ನಂಬುತ್ತಾನೆ. ಇಲ್ಲಿ ದನಗಳ ಸುಳಿಯ ಬಗ್ಗೆ ಮೊದಲು ತಿಳಿದುಕೊಂಡು ಅವುಗಳ ಲಕ್ಷಣಗಳನ್ನು ನಂತರ ವಿವರಿಸಲಾಗಿದೆ.

ಬೇಡಿ ಸುಳಿ ದನವಿದ್ದರೆ ಒಕ್ಕಲಿಗನಿಗೆ ಬೇಡಿ ಬರುವದು ನಿಶ್ಚಯ. ಬಾಸಿಂಗ ಸುಳಿ ದನವಿದ್ದರೆ ಆ ದನದ ಒಡೆಯನ ಹೆಂಡತಿ ಸಾಯುವಳು ಇತ್ಯಾದಿ ನಂಬಿಗೆಗಳಿವೆ. ಈ ಸುಳಿಗಳು ವಿಶೇಷವಾಗಿ ಎತ್ತುಗಳಿಗೆ ಅನ್ವಯಿಸುವುದುಂಟು. 'ಎತ್ತಿಲ್ಲದವನಿಗೆ ಎದೆಯಿಲ್ಲ' ಎಂಬ ಗಾದೆಯುಂಟು.

ಸುಳಿಯ ಹೆಸರು	ಇರುವ ಸ್ಥಳ	ಶುಭಾಶುಭ ನಂಬಿಗೆ
1. ಕುಂಕುಮ ಸುಳಿ	ಹಣೆಯ ಮೇಲೆ ನಡುವೆ ಒಂದು ಸುಳಿ	ಶುಭ
2. ನಾಮಸುಳಿ	ಹಣೆಯ ಮೇಲೆ ರೇಖೆಯಂತೆ ಒಂದು ಸುಳಿ	ಅಶುಭ
3. ಅಡಕಲ ಸುಳಿ	ಹಣೆಯ ಮೇಲೆ ಒಂದರ ಮೇಲೊಂದು ಎರಡು ಸುಳಿ	ಅಶುಭ
4. ಬಾಸಿಂಗ ಸುಳಿ	ಹಣೆಯ ಮೇಲೆ ತ್ರಿಕೋನದಂತೆ ಮೂರು ಸುಳಿಗಳು	ಅಶುಭ
5. ಮುಕ್ಕಣ್ಣ ಸುಳಿ	ಎರಡೂ ಕಣ್ಣುಗಳ ಮಧ್ಯೆ ಒಂದು ಸುಳಿ	ಅಶುಭ
6. ಮಸ್ತಕದ ಸುಳಿ	ಎರಡೂ ಕೋಡುಗಳ ಮಧ್ಯೆ ಒಂದು ಸುಳಿ	ಅಶುಭ
7. ಉರುಲು ಸುಳಿ	ಜಂತಿಗೆಯಲ್ಲಿ ಸಿಗುವಂತೆ ಕುತ್ತಿಗೆಯಲ್ಲಿ ಎರಡು ಸುಳಿ	ಅಶುಭ
8. ಎದೆಯ ಸುಳಿ	ಎದೆಯ ಮೇಲೆ ಇಬ್ಬದಿಯಲ್ಲಿ ಒಂದೊಂದರಂತೆ ಎರಡು ಸುಳಿ	ಅಶುಭ
9. ನೊಗಮರುಕ ಸುಳಿ	ಇಣಿಯ ಮುಂಭಾಗದಲ್ಲಿ ಹೆಗಲ ಮೇಲೆ ಒಂದು ಸುಳಿ	ಅಶುಭ
10. ಕಾಗಿ ಸುಳಿ	ಇಣಿಯ ಹಿಂಭಾಗದಲ್ಲಿ ಒಂದು ಸುಳಿ	ಅಶುಭ
11. ಬೆಟ್ಟದ ಸುಳಿ ಅಥವಾ ಗೋಪುರ ಸುಳಿ	ಇಣಿಯ ತುದಿಯಲ್ಲಿರುವ ಸುಳಿ	ಶುಭ
12. ರಾಜಾಸುಳಿ	ಬೆನ್ನಮೇಲೆ ಮುಂಭಾಗದಲ್ಲಿ ಒಂದು ಸುಳಿ	ಶುಭ
13. ದಾವಣಿ ಸುಳಿ	ಬೆನ್ನಮೇಲೆ ಮುಂಭಾಗದಲ್ಲೊಂದು ಹಿಂಭಾಗದಲ್ಲೊಂದು ಸುಳಿ	ಶುಭ
14. ಮೆಟ್ಟು ಸುಳಿ ಅಥವಾ ಮೂತ್ರ ಸುಳಿ	ಬೆನ್ನು ಮಧ್ಯದಲ್ಲಿ ಒಂದು ಸುಳಿಯಿದ್ದು ನೀರು ಕೆಳಗೆ ಮೂತ್ರದ ಧಾರೆಗೆ ಕೂಡುವಂತಿರುವ ಸುಳಿ	ಅಶುಭ
15. ಹೊಕ್ಕಳ ಸುಳಿ	ಹೊಟ್ಟೆಯ ಕೆಳಭಾಗದಲ್ಲಿ ಹೊಕ್ಕಳ ಬಳಿ ಸುಳಿ	ಶುಭ
16. ಗದ್ದಿಗಿ ಸುಳಿ	ಬೆನ್ನ ಮೇಲೆ ಹಿಂಭಾಗದಲ್ಲಿ ಒಂದು ಸುಳಿ	ಶುಭ

17. ಬೇಡಿ ಸುಳಿ ಅಥವಾ ಮೂತ್ರ ಸುಳಿ	ಮುಂಗಾಲು ಮಂಡಿಯ ಹಿಂದಿರುವ ಒಂದು ಸುಳಿ	ಅಶುಭ
18. ವಕ್ರ ಸುಳಿ	ಹಿಂಗಾಲ ಚಪ್ಪೆಯ ಕೆಳಗಿರುವ ಸುಳಿ	ಅಶುಭ
19. ಬಾರಿಗಿ ಸುಳಿ	ಬಾಲದ ಮೇಲಿರುವ ಒಂದು ಸುಳಿ	ಅಶುಭ
20.	ಬಾಲದ ಕೆಳಗೆ ಲಂಗೊಟಿ ಇದ್ದರೆ	ಅಶುಭ
21.	ಬಾಲದ ಕೆಳಗೆ ನಾಗರ ಹೆಡೆಯಂತಿದ್ದರೆ	ಶುಭ

ಯಾವ ದನಕ್ಕೂ ಹೊಟ್ಟೆಗೆ ಒಂದೇ ಮಗ್ಗಲು ಒಂಟೆಲುವು (ಮಂಡೆಲುವು) ಇರಬಾರದು. ದನಗಳು ಹಲ್ಲು ತಿನ್ನಬಾರದು ಮತ್ತು ಗೊರಕೆ ಹೊಡೆಯಬಾರದು. ದನಗಳ ತುಟಿ ಕರ್‍ರಗಿರಬಾರದು. ಬಾಲದ ಕೂದಲು ಬೆಳ್ಳಗಿರಬಾರದು. ದನಗಳ ಖುರ (ಗೊರಸು) ಕರ್‍ರಗಿರಬೇಕು. ತಿರಪಕಾಲಿನ ದನ ಇರಬಾರದು. ಹಿಂದಿನ ಕಾಲುಗಳನ್ನು ದನಗಳು ಎಳೆಯಬಾರದು. ಹೀಗೆ ಎಳೆಯುತ್ತಿದ್ದರೆ ಖುರಗಳು ಹಾಳಾಗುತ್ತವೆ. ಮುಂಗಾಲುಗಳು ಬಡಿದುಕೊಳ್ಳಬಾರದು. ಇದರಿಂದ ಗಾಯವಾಗಿ ದನಗಳು ನಿಶ್ಶಕ್ತವಾಗುತ್ತವೆ. ಕಾಡಿಗೆ ಕಣ್ಣಿನ ಎತ್ತು ಒಳ್ಳೆಯದು. ಆದರೆ ಗಾರೆ ಕಣ್ಣಿನ ಎತ್ತು ಇರಬಾರದು. ಎತ್ತು ಹಾಸುಹೊಯ್ಯ ಬಾರದು. ಒಂದುವೇಳೆ ಆಕಳು ಹಾಸು ಹೊಯ್ಯುತ್ತಿದ್ದರೆ ದೋಷವಿಲ್ಲ. ಎತ್ತಿನ ಕೋಡುಗಳಲ್ಲಿ ಅದರ ಬಲಕೋಡು ಮುಂದಿದ್ದರೆ ಶುಭ. ದನಗಳ ಕೋಡುಗಳಿಗೆ ಗೊರಲಿ ಹತ್ತಬಾರದು. ಕಣ್ಣುಗಳಲ್ಲಿ ಹೂವು ಬೀಳಬಾರದು. ದನಗಳ ಕಿವಿ ಸೋರಬಾರದು. ಎತ್ತಿನ ತೋಬರಿ (ಜನನೇಂದ್ರಿಯ) ಹೆಚ್ಚು ಜೋತು ಬಿದ್ದಿರಬಾರದು, ಒಂಟಿ ಬೀಜದ ದನ ಇರಬಾರದು, ದನಗಳಿಗೆ ಅಡ್ಡ ಹಲ್ಲು ಇರಬಾರದು. ದನಗಳ ಮೈ ಮೆತ್ತಗಿರಬೇಕು. ಮೈ ಮೇಲಿನ ಕೂದಲು ರೇಷ್ಮೆಯಂತೆ ನಯವಾಗಿರಬೇಕು. ಎತ್ತಿನ ಒಂದು ಕಣ್ಣು ಕಾಡಿಗೆಗಣ್ಣು ಇರಬಾರದು ಆದರೆ ಎರಡೂ ಕಣ್ಣು ಕಾಡಿಗೆ ಕಣ್ಣು ಇದ್ದರೆ ದೋಷವಿಲ್ಲ, ಎಮ್ಮೆಗೆ ಎರಡು ಮೊಲೆಗಳಿರಬಾರದು. ಮೂರು ಮೊಲೆಗಳಿದ್ದರಂತೂ ತೀರ ಅಶುಭ. ಎರಡೂ ಎತ್ತುಗಳು ಒಂದೇ ಮಗ್ಗಲಾಗಿ ಮಲಗಿದ್ದರೆ ಶುಭ. ಈ ಕಾಲಕ್ಕೆ ಎತ್ತಿನ ಒಡೆಯನು ತೆಂಗಿನಕಾಯಿ ಒಡೆಯುವನು. ಸೋದರಮಾವ, ಸೋದರಳಿಯ ಎತ್ತುಗಳು ಜೊತೆಯಾಗಿ ಸಿಕ್ಕರೆ ಅತೀಶುಭವೆಂದು ರೈತರು ಭಾವಿಸುತ್ತಾರೆ. ಎತ್ತು ಕಟ್ಟಿದಲ್ಲಿಯೇ ಕಾಲು ಕೆದರಿ ಢರಿ ಹೊಡೆದರೆ ಶುಭ. ಕುದುರೆಯ ಸುಳಿಗಳದೊಂದು ಪ್ರತ್ಯೇಕ ಅಧ್ಯಯನವಿದೆ. ಇಲ್ಲಿಯ ಸುಳಿಗಳು ಕುದುರೆಗಳಿಗೆ ಅನ್ವಯವಾಗುವುದಿಲ್ಲ. ದನಗಳು ಇಲ್ಲದಿದ್ದರೆ ಕೃಷಿಕ- ನಿರುದ್ಯೋಗಿಯಾಗುವನು. 'ಹೆಂಡತಿ ಇಲ್ಲದವನಿಗೆ ಮನೆ ಇಲ್ಲ; ದನಾ ಇಲ್ಲದವನಿಗೆ ದಗದ (ಕೆಲಸ) ಇಲ್ಲ' ಎಂಬ ಗಾದೆಯಿದೆ. ದನಗಳನ್ನು ಕೊಳ್ಳುವಾಗ ಸಗಣಿ ಹಾಕಿದರೆ ಶುಭ.

ಅವನ್ನು ಮನೆಗೆ ತರುವಾಗ ಬಾಗಿಲಲ್ಲಿ ಸಗಣಿ ಹಾಕಿ-ಬಲಗಾಲು ಒಳಗೆ ಇಟ್ಟು ಬಂದರೆ ಶುಭ. ಹೊಸಬಟ್ಟೆ ಉಪಯೋಗಿಸುವ ಮೊದಲು ಅದನ್ನು ಆಕಳು ಇಲ್ಲವೆ ಎತ್ತಿನ ಬೆನ್ನ ಮೇಲೆ ಹಾಕಿ ನಂತರ ಉಪಯೋಗಿಸುವರು.

ಸ್ವಾತಂತ್ರ್ಯಾನಂತರ ಇತ್ತೀಚೆಗೆ ಯಂತ್ರಗಳು ಬೇಸಾಯದಲ್ಲಿ ಪ್ರಮುಖ ಪಾತ್ರ ವಹಿಸತೊಡಗಿವೆ. ಹೀಗಾಗಿ ದನಗಳ ಸಂಖ್ಯೆ ತೀರ ಕಡಿಮೆಯಾಗುತ್ತಲಿದೆ. ಅನಾವೃಷ್ಟಿ, ಅಕಾಲಿಕ ಮಳೆಗಳಿಂದಾಗಿ ಬಯಲು ನಾಡಿನಲ್ಲಿ ಮೇವಿನ ಕೊರತೆ ವಿಪರೀತವಾಗ ತೊಡಗಿದೆ. ಹೀಗಾಗಿ ರೈತನಿಗೆ ದನಗಳನ್ನು ಸಾಕುವದು ತೊಂದರೆದಾಯಕವೆನಿಸಿದೆ. ದನಗಳು ವಿರಳವಾಗಿ ಕೊಟ್ಟಿಗೆ ಗೊಬ್ಬರ ಸಿಗದಂತಾಗಿದೆ. ಟ್ರ್ಯಾಕ್ಟರುಗಳಿಂದಲೇ ಎಲ್ಲ ಕೆಲಸಗಳೂ ನಡೆಯುತ್ತಲಿವೆ. ಇವುಗಳು ಬಿಡುವ ಹೊಗೆಯಿಂದ ಪರಿಸರ ಹಾಳಾಗಹತ್ತಿದೆ. 'ಎತ್ತುಗಳು ಹೊಗೆ ಬಿಡುವದಿಲ್ಲ. ಟ್ಯ್ರಾಕ್ಟರ್ ಸಗಣಿ ಹಾಕುವದಿಲ್ಲ' ಎಂಬ ಹೊಸ ಗಾದೆ ನಿರ್ಮಾಣಗೊಂಡಿದೆ. ತಿಪ್ಪೆಗೊಬ್ಬರ ಸಿಗದ ಕಾರಣ ರೈತರು ರಾಸಾಯನಿಕ ಗೊಬ್ಬರವನ್ನು ಬಳಸತೊಡಗಿದ್ದಾರೆ. ಇದರಿಂದ ಭೂಮಿಯು ತನ್ನ ಮೂಲಸತ್ವವನ್ನು ಕಳೆದುಕೊಳ್ಳುತ್ತಲಿದೆ. ದನಗಳು ಕಡಿಮೆಯಾದುದೇ ಇಷ್ಟೆಲ್ಲ ಅನಾಹುತಗಳಿಗೆ ಕಾರಣ.

ಹಿಂದಿನ ರೈತನ ಮನೆಯಲ್ಲಿ ಕುದುರೆ ಇರುತ್ತಿತ್ತು. ಅದು ಹಗಲು ರಾತ್ರಿಯೆನ್ನದೆ ಯಜಮಾನನನ್ನು ಹೊತ್ತು ಹೊಲ-ಗದ್ದೆಗಳಿಗೆ ತಿರುಗುತ್ತಿತ್ತು. ಅದರ ಕಾಲಿಗೆ ಪಂಕ್ಚರ ಆಗುವದಿಲ್ಲ. ಇಂದಿನ ರೈತ ದ್ವಿಚಕ್ರ ವಾಹನ ಬಳಸಹತ್ತಿದ್ದಾನೆ. ಹೀಗಾಗಿ ಅವನ ಖರ್ಚೂ ಬೆಳೆದಿದೆ. ಕುದುರೆಗಳ ಸಂಖ್ಯೆ ಇಳಿಮುಖವಾಗಿದೆ. ಎಮ್ಮೆ, ಕೋಣ, ಆಕಳು, ಕರುಗಳನ್ನು ಕಾಯುವ ಮಕ್ಕಳು ಶಾಲೆಗೆ ಸೇರತೊಡಗಿದ್ದರಿಂದ ದನ ಕಾಯುವ ಸಮಸ್ಯೆ ಉದ್ಭವವಾಗಿದೆ. ಅರ್ಧಮರ್ಧ ಕಲಿತು ಹೇಗೋ ಪದವಿ ಪಡೆದ ಯುವಕರು ಸಗಣಿ ಮುಟ್ಟಲು ಮೂಗು ಮುರಿಯುತ್ತಲಿದ್ದಾರೆ. ಮನೆಯಲ್ಲಿ ಹೆಂಡಿಕಸ ಮಾಡುವವರಿಲ್ಲದೆ ದನದ ಕೊಟ್ಟಿಗೆ ಹೊಲಸಿನಿಂದ ಗಬ್ಬು ನಾರಹತ್ತಿದೆ.

ಹಳ್ಳಿಯ ದನಗಾಹಿಗಳು ದೀಪಾವಳಿಯಲ್ಲಿ ನರಕ ಚತುರ್ದಶಿಯಿಂದ ಕಡೇ ಪಂಚಮಿಯವರೆಗೆ ತಮ್ಮ ಹಾಗೂ ತಾವು ಕಾಯುವ ಅಕ್ಕಪಕ್ಕದ ದನಗಳಿಗೆ ರೋಗ ರುಜಿನಗಳು ಬರದಿರಲಿ ಎಂದು ದೀಪ ಬೆಳಗಿ ಹಾಡುವ ಹಾಡುಗಳನ್ನು 'ಪೀಡೆಯ ಹಾಡುಗಳು' ಎಂದು ಕರೆಯಲಾಗುವುದು. ದೀಪಾವಳಿ ಸಮಯದಲ್ಲಿ ಹೊಲಗದ್ದೆಗಳಲ್ಲಿ ಹಸಿರು ಪಸರಿಸಿರುವುದರಿಂದ ಆ ಹುಲ್ಲನ್ನು ಮನದಣಿ ಮೇಯ್ದು ಒಡ್ಡಿನಲ್ಲಿ ನಿಂತ ಮಲಿನ ನೀರು ಕುಡಿಯುವ ದನಗಳಿಗೆ ರೋಗ-ರುಜಿನಗಳು ಬರುವ ಸಂಭವವುಂಟು. ಅಂತೆಯೇ

ಈ ದಿನಗಳಲ್ಲಿ 'ದೀಪ ಬೆಳಗಿ ರೋಗಗಳು ಬರದಿರಲಿ' ಎಂದು ಮಕ್ಕಳು ಶುಭವನ್ನು ಹಾರೈಸುತ್ತ ಬಂದಂತಿದೆ. ದನಗಳೇ ಸಂಪತ್ತಾಗಿದ್ದ ಹಿಂದಿನ ಕಾಲದಲ್ಲಿ 'ತಮ್ಮ ಹಾಗೂ ತಾವು ಕಾಯುವ ದನಗಳಿಗೆ ಅಡ್ಡೆ-ಪೀಡೆಗಳು ಬರದಿರಲಿ; ಇಂಥ ರೋಗಗಳು ದೂರ ಹೊಳೆಯಾಚೆಗೆ ಹೋಗಲಿ' ಎಂಬುದು ಮಕ್ಕಳ ಆಶಯವಾಗಿದೆ. ಈ ಹಾಡುಗಳಿಗೆ 'ಆಣಿ-ಪೀಣಿ ಹಾಡುಗಳು' ಎಂದೂ ಹೆಸರಿದೆ. ಈ ಹಾಡುಗಳ ಕೊನೆಗೆ ಬರುವ ಅಡ್ಡೆ-ಪೀಡೆ ಹೊಳಿ ಆಚೇಕೋ ಎಂಬುದು ಮಕ್ಕಳ ಬಾಯಲ್ಲಿ ಅಪಭ್ರಂಶವಾಗಿ 'ಆಣಿ ಪೀಣಿ ಹೊಡಿಚೆಕ್ಕ್ಯೋ' ಎಂದಾಗಿದೆ.

ದನಕಾಯುವ ಹತ್ತೆಂಟು ಹುಡುಗರು ಕೂಡಿ ದನಗಳನ್ನು ಕಾಯುತ್ತ ಹಗಲಿನಲ್ಲಿ ಜೇಕು ಇಲ್ಲವೆ ಆಪಿನಿಂದ (ಹುಲ್ಲಿನ ಒಂದು ಪ್ರಕಾರ) ನಾಗರ ಹೆಡೆಯ ಆಕಾರದಲ್ಲಿ ಹೆಣೆದು ಗೂಡು ತಯಾರಿಸಿ ಅದರಲ್ಲಿ ಮಣ್ಣಿನ ಹಣತೆ ಇಡಲು ಸ್ಥಳ ಮಾಡುತ್ತಾರೆ. ಇದರ ಕೆಳಗೆ ಸುಮಾರು ಒಂದು ಅಡಿ ಉದ್ದದವರೆಗೆ ಬೆಳೆಸಿ ಹಿಡಿಯಲು ಅನುಕೂಲ ಮಾಡಿಕೊಂಡಿರುತ್ತಾರೆ. ಅದಕ್ಕೆ ಹೂವಿನ ಮಾಲೆ ತೊಡಿಸಿ ನೋಡಲು ಸುಂದರವಾಗುವಂತೆ ಮಾಡಿರುವರು. ಸಂಜೆಗೆ ಮನೆಗೆ ಬಂದು ಅದರಲ್ಲಿ ಪಣತಿಯನ್ನಿಟ್ಟು ದೀಪ ಉರಿಸುವರು. ರಾತ್ರಿ 8 ಗಂಟೆಗೆ ಹತ್ತೆಂಟು ಹುಡುಗರು ಕೂಡಿ ಮನೆ ಮನೆಗೆ ತಿರುಗುತ್ತ ದನಗಳಿಗೆ ದೀಪ ಬೆಳಗುವರು. ನಾಗರ ಹೆಡೆ ಆಕಾರದಲ್ಲಿರುವದರಿಂದ ಗಾಳಿಯಿಂದ ದೀಪವು ಆರುವುದಿಲ್ಲ. ಆಗ ಮಕ್ಕಳು ಹಾಡುವ ಹಾಡು ಪಟಪಟನೆ ಮಗ್ಗಿ ಓದಿದಂತೆ ಇರುತ್ತವೆ. ಎತ್ತು, ಎಮ್ಮೆ, ಕೋಣ, ಆಕಳು, ಆಡು ಪ್ರತಿಯೊಂದಕ್ಕೂ ಬೇರೆ ಬೇರೆ ಹಾಡುಗಳನ್ನು ಹೇಳುತ್ತಾರೆ. ಮಾದರಿಗಾಗಿ ಕೆಲವು ನುಡಿಗಟ್ಟುಗಳು.

ಹಳ್ಳದ ದಂಡ್ಯಾಗ ಕಳ್ಳರು ಕುಂತಾರ
ಕಳ್ಳರ ಕೈಯಾಗ ಬೆಳ್ಳಿಯ ಕುಡಗೋಲ
ಬೆಳ್ಳಿಯ ಕುಡಗೋಲಗಿ ಮಾರು ಮಾರು ಹುಲ್ಲ
ಮಾರು ಮಾರು ಹುಲ್ಲಿಗೆ ಭರ್ ಭರ್ ಹಾಲ
ಭರ್ ಭರ್ ಹಾಲಿಗಿ ಕಣ್ಣಿ ಕಣ್ಣಿ ಮೊಸರ
ಕಣ್ಣಿ ಕಣ್ಣಿ ಮೊಸರಿಗಿ ಚಿಲಿಪಿಲಿ ಮಜ್ಜಿಗಿ
ಚಿಲಿ ಪಿಲಿ ಮಜ್ಜಿಗಿಗಿ ಮುದ್ದಿ ಮುದ್ದಿ ಬೆಣ್ಣಿ
ಮುದ್ದಿ ಮುದ್ದಿ ಬೆಣ್ಣಿಗಿ ಖಳ ಖಳ ತುಪ್ಪ
ಖಳ ಖಳ ತುಪ್ಪಿಗಿ, ಭಾಳ ಭಾಳ ರೊಕ್ಕ ಆಣಿ ಪೀಣಿ ಹೊಳಿ-ಆಚೇಕೋ

ಇಲ್ಲಿಯ ದಾಟಿ ಆಕರ್ಷಕವಾದುದು. ಪ್ರತಿಯೊಂದು ಪಾದದ ಕೊನೆಯ ಪದಗಳು ಮುಂದಿನ ಪಾದದ ಆರಂಭದಲ್ಲಿ ಬರುವದರಿಂದ ಕಿವಿಗೆ ಇಂಪು ನೀಡುತ್ತವೆ.

ಆಕಳಿಗೆ ಬೆಳಗುವಾಗ:

ಹಂಡಾಕಳೊ ಬಂಡಾಕಳೊ
ಕಲಬುರ್ಗಿ ದಾನಾಕಳೊ
ಕಳ್ಳರು ಕಡದಾರ
ಬ್ಯಾಡರು ತಿಂದಾರ

ನಿಂಗಯ್ಯನ ಗೂಳಿ ಬಂದು ನಿಗರಿ ನಿಗರಿ ಹಾಯಿತು
ಸಂಗಯ್ಯನ ಗೂಳಿ ಬಂದು ಸರಸರದು ಹಾಯಿತು
ಇದ್ದೂರ ಗೂಳಿ ಬಂದು ಎದುರ ಎದುರ ಹಾಯಿತು
ಆಣಿ ಪೀಣಿ ಹೊಳಿ ಆಚೇಕೋ

ಹೋರಿಗೆ ಬೆಳಗುವಾಗ:

ಥಳ್ಳು ಥಳ್ಳು ಥಳಿಸತಾರೆ
ಬಳುವಿನ ತತ್ತಿ ಉಳ್ಳಿಸಲಾರೆ
ಕರೀಗುಡ್ಡದಾಗ ಕಾಮನಕಂಟಿ
ಬಿಳೀ ಗುಡ್ಡದಾಗ ಭೀಮನ ಕಂಟಿ
ಒತ್ತಿ ಹೊಡದರ ಒಂದೇ ಕಂಟಿ.
ಮುತ್ತಿನಂಥಾ ಹೋರಿ ಕಟ್ಟಿ
ಹೋರಿಕಾಲಾಗ ಗೆಜ್ಜಿ ಕಟ್ಟಿ
ಹಳಿ ಎತ್ತಿನ ಹಣ್ಯಾಗ ಹಣಿಪಟ್ಟಿ ಕಟ್ಟಿ
ಆಣಿ ಪೀಣಿ ಹೊಳಿ ಆಚೇಕೋ

ಕುರಿಗಳಿಗೆ ಅನ್ವಯಿಸಿ:

ಕುರಿಕಾಯುತ ಬಂದೇವಣ್ಣ
ಕುರುಬರ ಕೇರ್‍ಯಾಗ ಇಳಿದೇವಣ್ಣ
ಸಣ್ಣಶ್ಯಾವಿಗಿ ಬಸ್ತಾಳಣ್ಣ
ದಡಿಯದೋತರ ಹೊಚ್ಯಾಳಣ್ಣ
ಮುಂದ ಕುಂತು ಉಣಿಸ್ಯಾಳಣ್ಣ
ಹಿಂದ ಬಂದು ಒದ್ದಾಳಣ್ಣ
ಆಣಿ ಪೀಣಿ ಹೊಳಿ ಆಚೇಕೋ

'ಈ ಹಾಡುಗಳು ವಿಜಾಪುರ, ಬಾಗಲಕೋಟ ಜಿಲ್ಲೆಗಳಲ್ಲಿ ವ್ಯಾಪಕವಾಗಿ, ಬೆಳಗಾವಿ ಜಿಲ್ಲೆಯಲ್ಲಿ ವಿರಳವಾಗಿ ಕಂಡು ಬರುತ್ತವೆ.'

---

* ಈ ವಿಷಯದ ವಿಸ್ತೃತ ಅಧ್ಯಯನಕ್ಕೆ 'ಲೇಖನಸಂಪದ' ಕೃತಿಯಲ್ಲಿ ಪ್ರಕಟವಾದ ನನ್ನ 'ಮಕ್ಕಳ ಪೀಡೆಯ ಹಾಡುಗಳು' - ಲೇಖನ ನೋಡಬಹುದು.

ದನಗಳ ರೋಗಗಳು ಹಾಗೂ ಚಿಕಿತ್ಸೆ

ಜನರಿಗೆ ಆಕಸ್ಮಿಕವಾಗಿ ರೋಗಗಳು ಬರುವಂತೆ-ದನಗಳಿಗೂ ರೋಗಗಳು ಬರುವುದುಂಟು. ಆಗ ಅವುಗಳಿಗೆ ಉಪಚಾರ ಅನಿವಾರ್ಯವಾಗುತ್ತದೆ. ಹಳ್ಳಿಗಳಲ್ಲಿ ದನಗಳನ್ನು ಉಪಚರಿಸಿ ಗುಣಪಡಿಸುವ ದೇಶೀ ವೈದ್ಯರಿರುವರು. ಇವರು ಉಚಿತವಾಗಿ ಚಿಕಿತ್ಸೆ ನೀಡುವರು. ಔಷಧಕ್ಕಾಗಿ ಈ ವೈದ್ಯರು ಗಿಡಮೂಲಿಕೆಗಳನ್ನೇ ಬಳಸುತ್ತಾರೆ. ಅನುಭವದಿಂದ ಬಳಸುತ್ತ ಬಂದ ಈ ಔಷಧಗಳು ಫಲಕಾರಿಯಾಗುವುದಲ್ಲದೆ ರೋಗ ಪೀಡಿತ ದನಗಳು ಬೇಗ ಗುಣಮುಖವಾಗುತ್ತವೆ. ಇಲ್ಲಿ ದನಗಳ ಕೆಲವು ರೋಗಗಳು ಹಾಗೂ ಚಿಕಿತ್ಸೆ ಕುರಿತು ವಿವರಿಸಲಾಗಿದೆ.

1. ಬಾಯಿಬೇನೆಗೆ

ಹೊನ್ನವರಿ ತಪ್ಪಲನ್ನು ಮಜ್ಜಿಗೆಯಲ್ಲಿ ಅರೆದು ಅರ್ಧ ತಂಬಿಗೆಯಷ್ಟು ರಸತೆಗೆದು, ದಿನಾಲು ಎರಡು ವೇಳೆ ಕುಡಿಸಬೇಕು. ದಿನಾಲು ಅರ್ಧಕಿಲೋ ಒಳ್ಳೆಣ್ಣೆ ಎರಡು ಮೂರು ದಿವಸ ಕುಡಿಸಬೇಕು. ಕಳೆತ ಬಾಳೆಹಣ್ಣು 8-10 ರಷ್ಟು ಒಂದೆರಡು ಸಾರೆ ತಿನಿಸಬೇಕು. ಕೊತಂಬರಿ ಸೂಡನ್ನು ಒಳ್ಳೆಣ್ಣೆಯಲ್ಲಿ ಎದ್ದಿ 2-3 ಸೂಡು ಒಮ್ಮೆ ತಿನಿಸಬೇಕು. ಪ್ರತಿದಿನ ಈ ರೋಗಪೀಡಿತ ದನದ ಬಾಯಿಯನ್ನು 2-3 ಸಾರೆ ಸ್ವಚ್ಛವಾಗಿ ತೊಳೆದು ಅರಿಷಿಣ ಪುಡಿ ಮತ್ತು ಒಳ್ಳೆಣ್ಣೆ ಕೂಡಿಸಿ ಕಲಸಿ ನಾಲಿಗೆಗೆ ಸವರಬೇಕು.

2. ಗಂಟಲು ಬೇನೆಗೆ

ಟರ್ಪೆಂಟಾಯಿನ್ ಮತ್ತು ಒಳ್ಳೆಣ್ಣೆ ಕೂಡಿಸಿ ಗಂಟಲಿನ ಹೊರಭಾಗಕ್ಕೆ ಹಚ್ಚಿ ಕಾವು ಕೊಡಬೇಕು.

3. ಕುಕ್ಕಡಿಗೆ

ಕಂಬಳಿ ತುಣುಕು (ಕೋರಿ) ಸುಟ್ಟು, ಬೆಣ್ಣೆಯಲ್ಲಿ ಕಲಿಸಿ ಅರಿಷಿಣ ಪುಡಿ ಕೂಡಿಸಿ ಆ ಮಿಶ್ರಣವನ್ನು ನಾಲಿಗೆಗೆ ಹಚ್ಚಿ ಕೆಂಪು ಹಂಚಿನಿಂದ ನಿಧಾನವಾಗಿ ತಿಕ್ಕಬೇಕು. ಇಲ್ಲವೆ ಉಪ್ಪಿನಕಾಯಿರಸ, ಬೆಲ್ಲ, ಅಜಿವಾನ ಕೂಡಿಸಿ ಅರೆದು ನಾಲಿಗೆಗೆ ಹಚ್ಚಿ ಬೆರಳುಗಳಿಂದ ತಿಕ್ಕಬೇಕು. ಈ ರೋಗಪೀಡಿತ ದನಕ್ಕೆ ಬಿಸಿ ನೀರನ್ನೇ ಕುಡಿಸಬೇಕು.

4. ಗುಂಡಿಗೆ ರೋಗಕ್ಕೆ

ಮೆಟ್ಟುಗಾಲಿನಿಂದ ಬಿರುಸಾಗಿ ಒದೆಯಲು ದನವು ರೋಗಮುಕ್ತವಾಗುವದು.ಈ

ರೋಗಪೀಡಿತ ದನಕ್ಕೆ ಕೋಡಿನ ಮೇಲೆ ಸಾವಕಾಶವಾಗಿ ಗುಣಿಯಿಂದ ಬಡಿಯಬೇಕು. ಅಥವಾ ಹುಣಸೀಹಣ್ಣಿನ ರಾಡಿಯನ್ನು ಮಜ್ಜಿಗೆಯಲ್ಲಿ ತಯಾರಿಸಿ ಎರಡು ತಂಬಿಗೆಯಷ್ಟು ಗೊಟ್ಟ ಹಾಕಬೇಕು.

5. ಕಣ್ಣಲ್ಲಿ ಹೂವು ಆದರೆ

ಕುಂಕುಮವನ್ನು ಬೆಣ್ಣೆ ಇಲ್ಲವೆ ಒಗೆಯುವ ಸಾಬೂನಿನ ನೊರೆಯಲ್ಲಿ ಕೂಡಿಸಿ ಅದನ್ನು ದಿನಾಲು 2-3 ಸಾರೆ ಕಣ್ಣಲ್ಲಿ ಹಾಕಬೇಕು. 2-3 ದಿನಗಳಲ್ಲಿ ರೋಗ ವಾಸಿಯಾಗುವುದು.

6. ಹೊಟ್ಟೆ ಕಡಿತಕ್ಕೆ

250 ಗ್ರಾಂ ಗಾಣದ ಎಣ್ಣೆಯಲ್ಲಿ ಒಂದು ಬಾಟಲಿ (200 ಮಿಲಿ) ಟರ್ಪೆಂಟಾಯಿನ್ ಕೂಡಿಸಿ ಗೊಟ್ಟ ಹಾಕಬೇಕು. ಅಜಿವಾನ, ಬೆಲ್ಲ, ಈರುಳ್ಳಿ ಕೂಡಿಸಿ ತಿನಿಸಬೇಕು.

7. ಹೊಟ್ಟೆ ಉಬ್ಬಿದರೆ

5 ಗ್ರಾಂ ಕರ್ಪೂರವನ್ನು 200 ಗ್ರಾಂ ತಿನ್ನುವ ಸೋಡಾದೊಡನೆ ಬೆರೆಸಿ ನೀರಿನಲ್ಲಿ ದ್ರಾವಣ ತಯಾರಿಸಿ ಗೊಟ್ಟ ಹಾಕಬೇಕು. ಇಲ್ಲವೆ 4-5 ಬುಂದೇದ ಉಂಡಿಗಳನ್ನು ತಿನ್ನಿಸಬೇಕು.

8. ಉಚಗೊಳ್ಳುತ್ತಿದ್ದರೆ

(i.) 4-5 ಖಡು, 5 ಗ್ರಾಂ ಇಂಗು, ಮಜ್ಜಿಗೆಯಲ್ಲಿ ಕೂಡಿಸಿ ಗೊಟ್ಟ ಹಾಕಬೇಕು. ಇಲ್ಲವೆ 1 ಕಿಲೊ ತೊಗರಿಯನ್ನು ಸಣ್ಣಾಗಿ ಒಡೆದು ತೋಯಿಸದೆ ಬೆಳಗ್ಗೆ ತಿನ್ನಿಸಬೇಕು.

(ii.) ಕರೇಕಾಯನ್ನು ನುಣ್ಣಗಾಗಿ ಅರೆದು ಮಜ್ಜಿಗೆಯಲ್ಲಿ ಅಥವಾ ಹಾಲಿನಲ್ಲಿ 2-3 ಸಾರೆ (4 ತಾಸಿಗೊಮ್ಮೆ) ಒಂದು ತಂಬಿಗೆಯಷ್ಟು ಪ್ರತಿಸಲ ಗೊಟ್ಟ ಹಾಕಬೇಕು.

9. ರಕ್ತ ಉಚಗೊಳ್ಳುತ್ತಿದ್ದರೆ

ಜೀರಿಗೆ, ಲಿಂಬೆಹಣ್ಣು, ಪಟಕ ಕೂಡಿಸಿ ಅರೆದು ಮಜ್ಜಿಗೆಯಲ್ಲಿ ದ್ರಾವಣ ತಯಾರಿಸಿ ಗೊಟ್ಟ ಹಾಕಬೇಕು. ಇದರಿಂದ ಮೂತ್ರದಲ್ಲಿ ರಕ್ತ ಬೀಳುತ್ತಿದ್ದರೂ ನಿಲ್ಲುವದು.

10. ಮೂತ್ರದಲ್ಲಿ ರಕ್ತ ಬರುತ್ತಿದ್ದರೆ

ಮೇಲಿನ ಉಪಚಾರದಿಂದ ಗುಣಮುಖವಾಗದಿದ್ದರೆ 200 ಗ್ರಾಂ ಹವೀಜನ್ನು ದಿನಾಲು ಒಮ್ಮೆ ತಿನಿಸಬೇಕು. ಹೀಗೆ 2–3 ದಿವಸ ಉಪಚರಿಸಬೇಕು.

11. ಮೂತ್ರ ಕಟ್ಟಿದರೆ

ಉದ್ದ ಎಲೆಯ ಹೂಸಲಕ್ಕಿ ತಪ್ಪಲಿನ ರಸವನ್ನು ತೆಗೆದು ಒಂದು ಬಟ್ಟಲಿನಷ್ಟು ಹೊಟ್ಟೆಗೆ ಗೊಟ್ಟದಿಂದ ಹಾಕಬೇಕು.

12. ಹೆಗಲು ಬಂದರೆ

ಹೆಗಲಿಗೆ ಗಾಯವಾಗಿ ಗಂಟುಗಟ್ಟಿ ರಕ್ತ ಸೋರುವುದು, ಬಾವು ಬರುವದು, ಇದಕ್ಕೆ 'ಹೆಗಲು ಬರುವುದು' ಎಂದು ಹೆಸರು. ಹೀಗಾದಾಗ ಮೇಣಬತ್ತಿಯನ್ನು ಒಳ್ಳೆಣ್ಣೆಯಲ್ಲಿ ಕೂಡಿಸಿ ಕುದಿಸಿ ಗಾಯಕ್ಕೆ ಲೇಪಿಸಬೇಕು. ಈ ರೋಗದ ದನವನ್ನು ಹೂಡಬಾರದು. ಅದಕ್ಕೆ ವಿಶ್ರಾಂತಿ ಅಗತ್ಯ.

13. ಗಾಯವಾಗಿ ಕ್ರಿಮಿಗಳಾದರೆ

ಆ ಗಾಯವನ್ನು ಚೆನ್ನಾಗಿ ತೊಳೆದು ನಸ್ಯದ ಪುಡಿ ಮತ್ತು ಸುಣ್ಣವನ್ನು ಗಾಯಕ್ಕೆ ಲೇಪಿಸಬೇಕು. ಅಥವಾ ಹೀರೇಬಳ್ಳಿಯ ಎಲೆಯ ರಸವನ್ನು ಗಾಯದ ಮೇಲೆ ದಿನಾಲು ಮೂರು ಸಾರೆಯಂತೆ 2 ದಿವಸ ಹಿಂಡಬೇಕು.

14. ಕುಂದು ಆದರೆ

(i) ತುಂಬಿಕಸವನ್ನು ತಂದು ಅರೆದು ರಸ ತೆಗೆದು ಒಂದು ಗ್ಲಾಸಿನಷ್ಟು ರಸವನ್ನು ಗೊಟ್ಟ ಹಾಕಬೇಕು. ಮತ್ತು ಆ ರಸವನ್ನು ಕಿವಿಯಲ್ಲಿಯೂ ಹಾಕಬೇಕು. ಹಾಗೆಯೇ ರಸಯುಕ್ತ ತಪ್ಪಲನ್ನು ದನದ ಬೆನ್ನಿಗೆ ಹಚ್ಚಿ ತಿಕ್ಕಬೇಕು. ಇದಲ್ಲದೆ ಹೂಸಲಕ್ಕಿ ರಸವನ್ನು ತೆಗೆದು ಒಂದು ಚಮಚೆಯಷ್ಟು ರೋಗ ಪೀಡಿತ ದನದ ಕಿವಿಯಲ್ಲಿ ಹಾಕಬೇಕು.

(ii) ಬೆಲ್ಲದ ಚಹಾ ಮಾಡಿ ಹಾಲು ಬೆರೆಸದೆ ಪ್ರತಿ ಸಾರೆ ಒಂದು ತಂಬಿಗೆಯಷ್ಟು 4–5 ಸಾರೆ ಕೊಡಬೇಕು.

15. ಕಾಲು ಬೇನೆಗೆ

(i) ಟರ್ಪೆಂಟಾಯಿನ್ ನಾಲ್ಕು ಕಾಲುಗಳ ಗೊರಸುಗಳ ಕೆಳಭಾಗದಲ್ಲಿ ಹನಿಹನಿಯಾಗಿ ಬಿಡಬೇಕು.

(ii) ಅರಿಷಿಣ ಪುಡಿ, ದಿಕ್ಕಮಲಿ ಪುಡಿ ಕುಸುಬೆ ಎಣ್ಣೆಯಲ್ಲಿ ಕಲಸಿ ಗಾಯಕ್ಕೆ ಲೇಪಿಸಬೇಕು.

16. ಚಪ್ಪೆ ಬೇನೆಗೆ

ಇದಕ್ಕೆ ಫರಿರೋಗ ಎಂಬ ಇನ್ನೊಂದು ಹೆಸರೂ ಉಂಟು. ಬಾವು ಬಂದ ಭಾಗದಲ್ಲಿ ಕ್ಯಾರ ಎಣ್ಣೆಯಿಂದ x ಈ ಗುರುತು ಮಾಡಿ ಕಾವು ಕೊಡುತ್ತಿರಬೇಕು. ಈ ರೀತಿ 2-3 ದಿವಸ ಕಾವುಕೊಟ್ಟರೆ ಗುಣವಾಗುವುದು.

17. ಬಾಲಸೊಡ್ಡಿಗೆ

ರವಿವಾರ ದಿವಸ ಬಾಲದ ತುದಿಯನ್ನು ಚಾಕುವಿನಿಂದ x ಹೀಗೆ ಕೊರೆದು ಒಂದೆರಡು ಹನಿ ರಕ್ತ ಬರುವಂತೆ ಮಾಡಿ, ಕ್ಯಾರ ಮತ್ತು ಅಜಿವಾನ ಕೂಡಿಸಿ ಕುಟ್ಟಿ, ಕುಸುಬೆ ಎಣ್ಣೆಯಲ್ಲಿ ಕೂಡಿಸಿ ಕುದಿಸಿ ಕುದಿಯುವ ದ್ರಾವಣದಲ್ಲಿ ಆ ಬಾಲದ ತುದಿಯನ್ನು ಅದ್ದಬೇಕು.

18. ಈಯ್ದ ದನದ ಕೆಚ್ಚಲಿಗೆ ಬಾವು ಬಂದರೆ

ಅರಿಷ್ಣಿಣ ಪುಡಿಯನ್ನು ಬೆಣ್ಣೆಯಲ್ಲಿ ಕಲಸಿ ಕೆಚ್ಚಲಿಗೆ ಲೇಪಿಸಬೇಕು. ಇಲ್ಲವೆ ಬರ್ಫದ ತುಂಡನ್ನು ಕೆಚ್ಚಲಿನ ಮೇಲೆ ಆಡಿಸಬೇಕು.

19. ಕಿರುಳು ಹತ್ತಿದರೆ

ಮಾನವನ ಮೂತ್ರವನ್ನು ಈ ರೋಗಪೀಡಿತ ದನದ ಕಿವಿಯಲ್ಲಿ ಹಾಕಿದರೆ ತಕ್ಷಣ ಗುಣವಾಗುವುದು.

20. ಮೊಳೆ, ಸೂಜಿ ನುಂಗಿದರೆ

ಶಿಲಾಜಿತ (ಸೂಜಿಗಲ್ಲು) ಅರೆದು ಹೊಟ್ಟೆಯಲ್ಲಿ ಹಾಕಬೇಕು.

21. ವಿಷಬಾಧೆಗೆ

ವಿಷಬಾಧೆ ಆದದ್ದು ಕಂಡೊಡನೆ ಉಪಚಾರ ಆರಂಭಿಸಬೇಕು. ವಿಷಬಾಧೆಗೆ ಒಳಗಾದ ದನವು ನಡುಗುತ್ತದೆ. ಇದನ್ನು ಮನದಟ್ಟು ಮಾಡಿಕೊಳ್ಳಬೇಕಾದರೆ ದನದ ತುಟಿಗೆ ಅರಿಷಿಣ ಪುಡಿ ಹಚ್ಚಬೇಕು. ಅದು ತಕ್ಷಣ ಕೆಂಪಗಾಗುತ್ತದೆ. ಹೀಗಾದರೆ ಅದು

ವಿಷಬಾಧೆಗೊಳಗಾದುದು ನಿಶ್ಚಿತ. ಆಗ ಅದಕ್ಕೆ ಅರ್ಧಕಿಲೋ ತುಪ್ಪವನ್ನು ಕುಡಿಸಬೇಕು. ಔಡಲ ಬೇರು ಒಂದು ಹಿಡಿ ಗುಂಡ ಹೂಸಲಕ್ಕಿ ತಪ್ಪಲು ಕಾಯಿ ಸಹಿತ ಮತ್ತು ಒಂದು ಹಿಡಿ ಗೋರಖ ಚಿಚ್ಚ ಕೂಡಿಸಿ ಅರೆದು ಅರ್ಧ ಕಿಲೋ ತುಪ್ಪದಲ್ಲಿ ಗೊಟ್ಟ ಹಾಕಬೇಕು.

22. ಕೂದಲು ಉದುರಿದ್ದರೆ

ದನಗಳಿಗೆ ಹೇನು ಹತ್ತಿ ಕೂದಲು ಉದುರಿದ್ದರೆ ಆ ಭಾಗಕ್ಕೆ 4-6 ದಿವಸ ತುಪ್ಪ ಹಚ್ಚಬೇಕು.

✦ ✦ ✦

4. ಕೃಷಿ ಉಪಕರಣಗಳು

ಯಾವುದಾದರೊಂದು ಉದ್ಯೋಗ ಕೈಕೊಂಡಾಗ ಆ ಉದ್ಯೋಗಕ್ಕೆ ಸಂಬಂಧಪಟ್ಟ ಉಪಕರಣಗಳು ಬೇಕಾಗುವುದು ಎಲ್ಲರಿಗೂ ತಿಳಿದ ಸಂಗತಿ. ಕಿರಾಣಿ ವ್ಯಾಪಾರ ಕೈಕೊಂಡವನಿಗೆ ತಕ್ಕಡಿ, ಕಲ್ಲುಗಳು, ಮಾಪುಗಳು- ಇತ್ಯಾದಿ ಪರಿಕರಗಳು ಅವಶ್ಯವಾಗಿ ಬೇಕು. ಕೂಲಿ ಕೆಲಸಗಾರನಿಗೆ ಗುದ್ದಲಿ, ಸಲಿಕೆ ಅವಶ್ಯ. ಕಳೆತೆಗೆಯುವ ಹೆಣ್ಣಾಳಿನ ಕೈಯಲ್ಲಿ ಕುರುಪೆ ಬೇಕು. ಎಲ್ಲ ಉದ್ಯೋಗಗಳಲ್ಲಿ ಪ್ರಮುಖವೆನಿಸಿದ ಕೃಷಿಗೆ ಬೇಕಾಗುವ ಉಪಕರಣಗಳು ಹತ್ತು ಹಲವು.

ಕೃಷಿಗೆ ಸಂಬಂಧಪಟ್ಟ ಉಪಕರಣಗಳ ಮತ್ತು ಸಾಧನ-ಸಲಕರಣೆಗಳ ಅಧ್ಯಯನವೇ ಕುತೂಹಲಕಾರಿಯಾದ ಮತ್ತು ವಿಸ್ತೃತವಾದ ಅಧ್ಯಯನವಾಗುತ್ತದೆ. ಈ ವಿಷಯದಲ್ಲಿ ಇಲ್ಲಿಯವರೆಗೆ ಆದ ಅಧ್ಯಯನ ಅತಿ ವಿರಳವೆಂದೇ ಹೇಳಬೇಕು. ಪ್ರತಿಯೊಂದು ಉಪಕರಣಕ್ಕೂ (ಅದು ಕಟ್ಟಿಗೆಯದಾಗಿದ್ದರೆ) ಆರಿಸುವ ಮರ, ಬಡಿಗನಿಂದ ಕೆತ್ತಿಸುವ ಮತ್ತು ಉಪಕರಣ ತಯಾರಿಸುವ ಬಗೆ, ಅವುಗಳನ್ನು ಜತನವಾಗಿ ಗೊರಲಿಗಳು ಹತ್ತದಂತೆ ಕಾಯ್ದಿಡುವ ರೀತಿ, ಇತ್ಯಾದಿಗಳಲ್ಲೆಲ್ಲ ಸಲಕರಣೆಗಳ ಮೇಲೆ ರೈತನಿಗೆ ಇರುವ ಎಚ್ಚರಿಕೆ ಗಮನಿಸಬೇಕಾಗುತ್ತದೆ. ಇಲ್ಲಿ ಮೊದಲಿಗೆ ಕಟ್ಟಿಗೆಯ ಉಪಕರಣಗಳ ಬಗೆಗೆ ನೋಡೋಣ.

1. ಚಕ್ಕಡಿ: ಇದು ರೈತನ ಬಾಳಿನಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇದರ ಅಂಗಗಳು ಹಲವು. ತೊಟ್ಟಿಲವು ಎರಡು ದಿಂಡು, ಪಟ್ಟಿ, ಕಳಗಗಳು, ಅಡ್ಡ ಹಲಚು ಪಟ್ಟಿಗಳಿಂದ ಕೂಡಿರುವುದು. ಇದನ್ನು 'ಓಟೆ'ದ ಮೇಲೆ ಕೂಡಿಸಿರುವರು.

   ಈಸು: ಇದು ಬಂಡಿ ಎಳೆಯುವ ಸಾಧನ.

   ನೊಗ: ಈಸಿಗೆ ಅಡ್ಡಲಾಗಿರುವ ಉಪಕರಣ. ಇದರ ಎರಡೂ ಬದಿಗೆ ಒಂದೊಂದು ಒತ್ತುಗೀಲು ಬೇಕು.

   ಚಕ್ರಗಳು ಎರಡು: ಇವುಗಳಲ್ಲಿ ಗಡ್ಡಿ, ಚಕ್ರದ ಹಲ್ಲುಗಳು, ಪುಟೆ.

2. ನೇಗಿಲು: ಮೊದಲಿನ ಕಟ್ಟಿಗೆಯ ನೇಗಿಲು.

3. ಕುಂಟಿದಿಂಡು: ಇದರಲ್ಲಿ ಮೂಗೇಣಿನ, ನಾಗೇಣಿನ, ಐಗೇಣಿನ ಮೂರು ವಿಧದ ದಿಂಡುಗಳಿವೆ. ಇವು ಹರಗುವ ಸಾಧನಗಳು. ಇವಕ್ಕೆ ಎರಡೆರಡು ತಾಳಗಳಿರುತ್ತವೆ. ಎರಡು ಈಸು, ನೊಗ.

ಗುದ್ದಲಿ: ನೆಲ ಅಗಿಯುವ ಸಾಧನ.

ಸಲಿಕೆ: ಮಣ್ಣು ಎಳೆಯುವ ಸಾಧನ.

ಕುಡುಗೋಲು: ಬೆಳೆಕೊಯ್ಯುವ ಸಾಧನ.

ಕುರುಪಿ : ಕಳೆ ತೆಗೆಯುವ ಸಾಧನ

ಕೊಡಲಿ: ಮರ ಕಡಿಯುವ ಇಲ್ಲವೆ ಕಟ್ಟಿಗೆ ಒಡೆಯುವ ಸಾಧನ. ಇವುಗಳಲ್ಲಿ ಚಪ್ಪಕೊಡಲಿ, ಮೀಸಿ ಕೊಡಲಿ, ತಲಿಕೊಡಲಿ, ಚಂದ್ರಕೊಡಲಿ– ಮುಂತಾದುವುಗಳು.

ಕಪಲಿ: ಕಬ್ಬಿಣ ಕಪಲಿ:

ಕೊಯ್ತಾ: ಕಣಿಕೆ ಕತ್ತರಿಸುವ ಸಾಧನ.

ನಾರಿನ ಉಪಕರಣಗಳು:

ಜಂತಿಗೆ : ಎತ್ತುಗಳ ಕೊರಳಿಗೆ ಕಟ್ಟುವ ನಾರಿನ ಇಲ್ಲವೆ ನೂಲಿನ ಪಟ್ಟಿ.

ಜಾಳಿಗೆ : ಹೊಟ್ಟು ತುಂಬುವ ಸಾಧನ

ಬಾಯಿಚೆಕ್ಕ : ಬೆಳೆಯಲ್ಲಿ ಕೆಲಸ ಮಾಡುವಾಗ ಎತ್ತುಗಳ ಬಾಯಿಗೆ ಕಟ್ಟುವ ಸಾಧನ.

ಮಿಣಿ : ಕಪಲಿ ಹೂಡಿದಾಗ ಮೇಲಿನ ದಪ್ಪ ಹಗ್ಗ, ಕೊಂಬರ ಗಾಲಿಯ ಮೇಲೆ ತಿರುಗುತ್ತದೆ.

ಸೊಂಡೆಗ್ಗ : ಕಪಲಿ ಹೂಡಿದಾಗ ಕೆಳಗಿನ ಕದರ ಮೇಲೆ ಸರಿಯುವ ಹಗ್ಗ

ಹಂತಿ ಕಣ್ಣೆ : ಹಂತಿಯ ಕಾಲಕ್ಕೆ ಎಲ್ಲ ಎತ್ತುಗಳಿಗೆ ಕಟ್ಟುವ ಒಂದೇ ವಿಶಿಷ್ಟ ಹಗ್ಗ.

ಹಳಗಿನ ಹಗ್ಗ : ಕಣಿಕೆ ಕಟ್ಟುವ ಹಗ್ಗ.

ಹೂಟಿ ಹಗ್ಗ : ಚಕ್ಕಡಿಯ ಈಸು, ನೊಗ ಜೋಡಿಸುವ ಹಗ್ಗ.

ಮೇಲ್ಹಗ್ಗ : ಚಕ್ಕಡಿಯಲ್ಲಿ ಕಣಿಕೆ ಹೇರಿದಾಗ ಕಟ್ಟುವ ಉದ್ದವಾದ ವಿಶಿಷ್ಟ ಹಗ್ಗ.

ಹಣೆಗ್ಗ : ಎತ್ತುಗಳ ಹಣೆಯಿಂದ ಬರುವ ಜೋಡು ಹಗ್ಗಗಳು.

ಕಣ್ಣಿ : ದನಗಳನ್ನು ಕಟ್ಟುವ ಹಗ್ಗ.

ತೊಗಲಿನ ಉಪಕರಣಗಳು

ಕಪಲಿ: ತೊಗಲಿನ ಕಪಲಿ

ಬಾರುಕೋಲ ಬಾರು

4. ಕೂರಿಗೆದಿಂಡು: ಇದು ಬಿತ್ತುವ ಸಾಧನ. ಬೀಜಸಾಗಿಸುವ ಮೂರು ಪೊಳ್ಳಾದ ಕೋಲುಗಳು, ಮೇಲೆ ಮಂಡಿ, ಕೆಳಗೆ ಮೂರು ತಾಳಗಳು, ಎರಡು ಈಸು, ನೊಗ.
5. ಎಡೆಕುಂಟೆ: ಬೆಳೆಯಲ್ಲಿಯ ಕಳೆ ತೆಗೆಯುವ ಸಾಧನ. ಇದರಲ್ಲಿ ಡುಮ್ಮ ದಿಂಡು, ಸಿಂಪು ದಿಂಡು ಎಂದು ಎರಡು ಪ್ರಕಾರಗಳು. ಇವಕ್ಕೆ ಒಂದೇ ಈಸು, ನೊಗ ಸಾಮಾನ್ಯ.
6. ಗುದ್ದಿ: ದನಗಳ ಕೊರಳಲ್ಲಿ ಕಟ್ಟುವ ತೊಡಕಿನ ಉಪಕರಣ.
7. ಅಂಟ: ಬೆಳೆಯ ಮಧ್ಯದಲ್ಲಿ ಕಟ್ಟಿದ ಎತ್ತರದ ಸಾಧನ. ಇದರ ಮೇಲೆ ನಿಂತು ಹಕ್ಕಿ ಹೊಡೆಯುವರು.
8. ಮೇಟಿ: ರಾಸಿಯಕಾಲಕ್ಕೆ ಕಣದ ಮಧ್ಯದಲ್ಲಿ ನಡೆಸುವರು. ಸಾಮಾನ್ಯವಾಗಿ ಇದು ಬನ್ನಿಯದು.
9. ಮೆಟ್ಟು ನಾಲಿಗೆ: ಮೂರು ಕಾಲಿನ ಆಶ್ರಯದಲ್ಲಿರುವ ಮಣೆ. ಇದರ ಮೇಲೆ ನಿಂತು ತೂರುವರು.
10. ಮೇಳಿ (ರುಮ್ಮ): ಕುಂಟೆ ದಿಂಡಿನ, ಎಡೆದಿಂಡಿನ ಮೇಲೆ ಹಿಡಿಯಲು ಅಳವಡಿಸಿದ ಸಾಧನ.
11. ಹಳಗ: ಹಗ್ಗಕ್ಕೆ ಜೋಡಿಸಿದ ರಂಧ್ರವುಳ್ಳ ಸಾಧನ.
12. ಸವಾರಿ: ಚಕ್ಕಡಿಯ ಮೇಲೆ ನೆರಳಿಗಾಗಿ ಕಟ್ಟುವ 5 ಬಾಗಿದ ಕೋಲುಗಳು.
13. ಗ್ವಾರಿ: 'ಮದ' ಎಳೆಯುವ ಸಾಧನ (ಕಣದಲ್ಲಿ).
14. ರಾಗೋಲ: ಕಣದಲ್ಲಿ ತೆನೆ, ಕಂಕಿ ಎಳೆಯುವ ಉಪಕರಣ.
15. ಬ್ಯಾಕಟಿಗಿ: ಮುಂದೆ ಎರಡು ಟಿಸಿಲು ಉಳ್ಳ ಕಟ್ಟಿಗೆ.

ಕೂರಿಗೆ ದಿಂಡು, ಕುಂಟೆದಿಂಡು, ನೊಗ, ಗಾಡಿ, ನೇಗಿಲು – ಇವಕ್ಕೆ ಜಾಲಿ ಕಟ್ಟಿಗೆ ಬಳಸುವರು. ರಾಸಿಯ ಮೇಟಿಕಂಬಕ್ಕೆ ಬನ್ನಿಯ ಕಟ್ಟಿಗೆ ಬೇಕು. ಈಸುಗಳಿಗೆ ಮತ್ತಿ ಕಟ್ಟಿಗೆ ಬಳಸುವರು. ನೊಗ, ದಿಂಡುಗಳಿಗೆ ನೀಲದ ಕಟ್ಟಿಗೆಯಾದರೂ ನಡೆಯುವದು.

ಕಬ್ಬಿಣದ ಉಪಕರಣಗಳು:

ಚಕ್ಕಡಿಯ ಭಾಗಗಳು: ಹಾರಿ, ಗಡ್ಡಿಬಳಿ, ಬಾಯಿಬಳಿ, ಧಾವ ಪಟ್ಟಿ (ಹಳಿ) ಕೀಲುಗಳು.

ಕುಂಟೆ ದಿಂಡಿಗೆ ಬೇಕಾದ: ಕುಡ, (ಕಬ್ಬಿಣದ ಹಲಗೆ), ಕುಂಟೆಬಳಿ

ಕೂರಿಗಿದಿಂಡಿಗೆ ಬೇಕಾದ : ಹೊಂಬಲ.

ಬೆಡಗ: ಅಗಲ ಬಾಯಿಯ ಬೇರು ಅಗಿಯುವ ಸಾಧನ.

5. ಸುಗ್ಗಿಯ ಸೊಬಗು

ನಮ್ಮನ್ನು ಹೊತ್ತು ನಿಂತ ನೆಲವು ತಾನು ಅಸ್ಥಿರವಾದರೂ ನಮ್ಮನ್ನು ಸ್ಥಿರವಾಗಿ ಎತ್ತಿ ಹಿಡಿದಿದೆ. ತನ್ನ ಮಣ್ಣ ಮೈಯಿಂದಲೇ ಭೂದೇವಿ ಚಿನ್ಮಯ ಶರೀರದ ಮಕ್ಕಳನ್ನು ಹಡೆದಿದ್ದಾಳೆ. ಭೂಕಂಪದಂತಹ ವ್ಯಾಕಯನ್ನು ನುಂಗಿಕೊಂಡು ಈ ನೆಲದಾಯಿ ಪ್ರಸನ್ನ ಮುದ್ರೆಯಿಂದ ಮೆರೆಯುತ್ತಿದ್ದಾಳೆ. ಲಾಲಾರಸದ ಕುದಿತವನ್ನು ತನ್ನ ಕುಕ್ಷಿಯಲ್ಲಿಟ್ಟುಕೊಂಡು ಮಕ್ಕಳಿಗೆ ಆರೋಗ್ಯಕರವಾದ ಮೈಗಾವು ನೀಡುತ್ತಿದ್ದಾಳೆ ಈ ತಾಯಿ. ಇವಳು ಬಹುರಸದ ಮೊಲೆಯುಳ್ಳವಳಾಗಿ ಬಹುವಿಧದ ಮೈಗೆ ಹಿತಕರವಾದ ಹಾಲೂಡಿಸಬಲ್ಲವಳಾಗಿದ್ದಾಳೆ. ಬಡವಿಯಂತೆ ಕಂಡರೂ ಇವಳ ಗರ್ಭದಲ್ಲಿ ಮುತ್ತು ರತ್ನಗಳ ಬೊಕ್ಕಸವಿದೆ. ಭೂಮಿ ಒಂದೇ ನೀರು ಒಂದೇ ಆದರೂ, ಈಳೆ, ನಿಂಬೆ, ಮಾವು, ಮಾದಳ-ಗಳಲ್ಲಿ ಹುಳಿಯನ್ನೂ; ಕಬ್ಬು, ಬಾಳೆ, ಹಲಸು, ತೆಂಗು-ಗಳಲ್ಲಿ ಸಿಹಿಯನ್ನೂ; ಕಳವೆ, ಶಾಲಿಗೆ ಓಗರವನ್ನೂ; ಮರುಗ, ಮಲ್ಲಿಗೆ-ಗಳಿಗೆ ಪರಿಮಳವನ್ನೂ ಉಂಟುಮಾಡುವ ಭೂಮಿತಾಯಿಯ ಮಹಿಮೆ ಹೇಳತೀರದಂತಹದು.

ಒಕ್ಕಲಿಗನು ತನ್ನ ಬೇಸಾಯದಲ್ಲಿ ಕಾಲಮಾನಕ್ಕೆ ತಕ್ಕಂತೆ ಹಲವಾರು ಆಚರಣೆಗಳನ್ನು ಪಾಲಿಸುತ್ತ ಬಂದಿದ್ದಾನೆ. ವಿಶೇಷವಾಗಿ ಈ ಆಚರಣೆಗಳು ಕರ್ನಾಟಕದಲ್ಲಿ ಶತಶತಮಾನಗಳಲ್ಲಿ ಬದಲಾಗುತ್ತ ಬಂದು ನಂತರ ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ಕಾಲಕ್ಕೆ ಒಂದು ನಿಶ್ಚಿತ ರೂಪವನ್ನು ತಾಳಿ, ಈಗಲೂ ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಬಳಕೆಯಲ್ಲಿರುವುದು ಕಂಡುಬರುತ್ತದೆ. ಹನ್ನೆರಡನೆಯ ಶತಮಾನವು ಎಲ್ಲಾ ಕ್ಷೇತ್ರಗಳಲ್ಲಿಯೂ ಕ್ರಾಂತಿಯ ಕಾಲ. ಇದು ತನ್ನ ಪ್ರಭಾವವನ್ನು ಕೃಷಿಕ್ಷೇತ್ರದಲ್ಲಿಯೂ ವಿಸ್ತರಿಸಿದೆ. ಈ ಸಮಯದಲ್ಲಿ ಲಿಂಗಾಯತ ಧರ್ಮವು ಪ್ರಬಲವಾಗತೊಡಗಿತು. ಬೇರೆ ಬೇರೆ ರಾಜ್ಯಗಳಿಂದ ಅನೇಕ ಜನರು ಈ ಧರ್ಮಕ್ಕೆ ಶರಣು ಬಂದು ಶರಣ ಧರ್ಮದ ಕಾಯಕತತ್ವವನ್ನು ಪಾಲಿಸಹತ್ತಿದರು. ಹೀಗಾಗಿ ಕೃಷಿಕ್ಷೇತ್ರದಲ್ಲಿ ಸಾಕಷ್ಟು ಜನರು ತೊಡಗಿ ಧಾರ್ಮಿಕ ಹಾಗೂ ಆರ್ಥಿಕ ಭದ್ರಬುನಾದಿಗೆ ಕಾರಣರಾದರು. ಆಗ ಕೃಷಿಗೇ ಅಗ್ರಪಟ್ಟವಿತ್ತು.

ಕೃಷಿಯಲ್ಲಿ ಮುಖ್ಯವಾಗಿ ಮೂರು ಉಪಕ್ರಮಗಳನ್ನು ಗುರುತಿಸಲಾಗುವುದು. ಅವು ಇಂತಿವೆ: 1. ಉಳುಮೆ, 2. ಬಿತ್ತಿಗೆ, 3. ಸುಗ್ಗಿ.

ಬೇಸಿಗೆಯ ಆರಂಭದಲ್ಲಿ ರೈತನು ತನ್ನ ಭೂಮಿಯಲ್ಲಿ ರಂಟೆ ಹೊಡೆದು ತಿಂಗಳೊಪ್ಪತ್ತು ಬಿಡುವನು. ಆಗ ಬಿಸಿಲಿನಿಂದ ಭೂಮಿಕಾಯ್ದು ನೆಲದಲ್ಲಿ ಹೊಸಶಕ್ತಿ ನಿರ್ಮಾಣವಾಗುವುದು. ಗಡ್ಡಿ, ಕರಿಕೆ, ಕಣಿಗ್ಯಾ ಮೊದಲಾದ ಭೂಮಿಯ ಕಸುವನ್ನು ಹಾಳುಮಾಡುವ ಬಹುವಾರ್ಷಿಕ ಕಳೆಗಳನ್ನು ಗುದ್ದಲಿಯಿಂದ ಅಗಿದು ತೆಗೆದು ಸ್ವಚ್ಛಗೊಳಿಸುವನು. ಈ ಬೇರುಗಳು ಕಿತ್ತಿ ಹೊರಬಿದ್ದಾಗ ಬಿಸಿಲಿನಿಂದ ಸುಟ್ಟು ನಾಶವಾಗುವವು. ಅನಂತರ ಎರಡು ಮೂರು ಸಾರೆ ಕುಂಟೆಯಿಂದ ಹರಗಿ, ತಿಪ್ಪೆ ಗೊಬ್ಬರ ಹಾಕಿ ಮಳೆಯ ದಾರಿ ಕಾಯುವನು. ಮೊದಲ ಮಳೆಯಾಗಿ ಚೆನ್ನಾಗಿ ಹಸಿಯಾಗುತ್ತಲೇ ರೈತನು ಮುಂಗಾರಿ ಬಿತ್ತಿಗೆಗೆ ತೊಡಗುವನು. ಮುಂಗಾರಿಯಲ್ಲಿ ಹೆಸರು, ಸಜ್ಜಿ, ನವಣಿ, ಸೇಂಗಾ, ಅಕ್ಕಡಿಕಾಳು ಬೆಳೆಯಲಾಗುವುದು. ನಮ್ಮಲ್ಲಿ ಮುಂಗಾರಿ ಬೆಳೆಯ ಭೂಮಿ ಕಡಿಮೆ. ಅಲ್ಲದೆ ಬರುವ ಫಸಲೂ ಕಡಿಮೆ. ಹೀಗಾಗಿ ಮುಂಗಾರಿ ಸುಗ್ಗಿ ಗೊತ್ತಾಗದೇ ಮುಗಿಯುತ್ತದೆ. ಮುಂಗಾರಿ ಬೆಳೆಯಲ್ಲಿ ಸೀಗಿ ಹುಣ್ಣಿವೆಯ ಭೂಮಿಪೂಜೆಯೊಂದೇ ಗಮನಾರ್ಹವಾದುದು.

ಹಿಂಗಾರಿ ಬಿತ್ತಿಗೆ ಹುಬ್ಬಿ ಮಳೆಯಿಂದ ಆರಂಭಗೊಳ್ಳುವದು. ಈ ಬಿತ್ತಿಗೆಯಲ್ಲಿ ಜೋಳ, ಗೋದಿ, ಕುಸುಬೆ, ಕಡ್ಲಿ- ಇವು ಮುಖ್ಯವೆನಿಸುತ್ತವೆ. ರೈತನು ಬಿತ್ತುವ ಸಮಯದಲ್ಲಿ ಶಕುನ ನೋಡುವುದು ವಾಡಿಕೆ.

> ಕಾಗಿ ಬಲವನ ಕಟ್ಟಿ ಹಂಗ ಎಡವನ ಕಟ್ಟಿ ।
> ಬಿತ್ತವ್ವ ಶಕುನ ಚಲುವಧಿದು । ಶಿವರಾಯ ।
> ಬಿತ್ತಾಕ್ಹೋಗ್ಯಾನ ಮಾಣೀಕ ॥

ಹೀಗೆ ಶುಭ ಶಕುನವಾದರೆ ರೈತನ ಮನೆಯಲ್ಲಿ ಕಾಳು, ಮೇವು, ಹಯನು-ತುಂಬಿ ಸೂಸುವಂತೆ ಬೆಳೆ ಬೆಳೆಯತೊಡಗಿದರೆ ಅದಕ್ಕೆ ಮೇರೆಯೆಂಬುದೇ ಇಲ್ಲ. ಒಂದು ಕುಂಬಳ ಬಳ್ಳಿಯ ಹರವನ್ನು ರೈತ ಈ ರೀತಿಯಾಗಿ ವರ್ಣಿಸಿದ್ದಾನೆ.

> ಹಲಸಂಗಿ ಹಳದಾಗ ಕುಂಬಳ ಬೀಜೂರಿ ।
> ಕೂಡಲ ಮ್ಯಾಲ ಕುಡಿಯೇರಿ । ಹತ್ತೂರ ।
> ಹೂಡ್ಯಾದ ಮ್ಯಾಲ ಹೂಮಗ್ಗಿ ॥

ಮನುಷ್ಯ ಮತ್ತೊಬ್ಬರಿಗೆ ಕೊಟ್ಟಾನೇನು? ಅದರಿಂದ ಆದೀತೇನು? ದೇವರು ಕೊಡತೊಡಗಿದರೆ ಅದಕ್ಕೆ ಮಿತಿಯಿಲ್ಲ. ಅಂತೆಯೇ 'ಮನುಷ್ಯ ಕೊಟ್ಟುದು ಮನೆತನಕ; ದೇವರು ಕೊಟ್ಟದು ಕಡೆತನಕ' ಎಂಬ ಗಾದೆ ರಚನೆಗೊಂಡಿದೆ. ಇದನ್ನೇ ಜನಪದ ಕವಿ:

ಮಂದೇನು ಕೊಟ್ಟೀತ ಮನವೇನು ದಣಿದೀತ ।
ಮಂಜಾನದಾನ ಗಿರಿಮಲ್ಲ । ಕೊಟ್ಟರ ।
ಮನಿತುಂಬಿ ನಮ್ಮ ಮನ ತುಂಬಿ ॥

ಎಂದು ಹಾಡಿದ್ದಾನೆ. ಬಿತ್ತಿ ಬೆಳೆಬಂದ ಜೋಳದ ಹೊಲದಲ್ಲಿ ಎಡೆಯಾಗಿದೆ. ಅನುಕೂಲಕರ ಗಾಳಿಯಿಂದ ತೆನೆ ಕಾಳು ತುಂಬುತ್ತಲಿದೆ. ಆದರೂ ಇದಕ್ಕೆಲ್ಲ ಮಳೆರಾಯನ ಕೃಪೆ ಕಾರಣವೆಂದು ಅವನಿಗೆ ತನ್ನ ಕೃತಜ್ಞತೆ ಅರ್ಪಿಸುತ್ತಾನೆ:

ಆ ರಾಜ ಈ ರಾಜ ಘನರಾಜ ಮಳಿರಾಜ ।
ತೇಜೇರಿ ಸುರಿದ ಮಳೆರಾಜ । ಬೆಳೆದಾನು ।
ಲೋಕದೊಳು ರಾಜ ತೆನಿರಾಜ ॥

ಈಗ ರೈತನ ಹಿಗ್ಗಿಗೆ ಆರಂಭ. ಆ ಬೆವರಿನ ಪ್ರತಿಫಲ ಸಿಗುವ ಸನ್ನಿವೇಶ

ಬಿತ್ತಿದ ಹೊಲದಾಗ ಒತ್ತಿ ಹಾಯಕ್ಕಿ ಯಾರ?।
ಮುತ್ತಿನ ಉಡಿಯಕ್ಕಿ ಬನದಮ್ಮ । ಹಾಯ್ದರ ।
ಬಿಚ್ಚಿಬಿದ್ದಾವ ಬಿಳಿ ಜೋಳ ॥

ಎಂದು ಹಾಡತೊಡಗುವನು. ಜೋಳದ ಬೆಳೆ ಕಾಳುತುಂಬಿ ಬೆಳಸಿಯಾಗಿದೆ. ಇದನ್ನು ಸೀತನಿ (ಸಿಹಿತೆನಿ) ಎಂದು ಕರೆಯುವರು. ಈ ತೆನೆಗಾಳನ್ನು ಸುಟ್ಟು ತಿನ್ನುವದು ನಮ್ಮ ಈ ಭಾಗದ ವಿಶೇಷ. ಇದಕ್ಕೆ ಸೀತನಿಯ ಸಡಗರ ಎಂದರೆ ತಪ್ಪಾಗಲಾರದು. ಎಳ್ಳಾಮಾಸಿಯ ದಿನ ಭೂದೇವಿಯ ಪೂಜೆ ಮಾಡಿ 'ಚರಗ ಚೆಲ್ಲುವ' ಕಾರ್ಯಕ್ರಮವಿರುತ್ತದೆ. ಅಂದೇ ಬೆಳಸಿ ಸುಡುವ ಒಲೆ ತಯಾರಿಸುವರು. ಇದರಲ್ಲಿ ಬನ್ನಿಯ ಮುಳ್ಳು, ಜಾಲಿಯ ಮುಳ್ಳು, ಇಲ್ಲವೆ ಗೋಮಾಳದಲ್ಲಿ ದನಗಳು ಹಾಕಿದ ಸಗಣಿಯ ಕುಳ್ಳು ತಂದಿಟ್ಟು ಅದರಿಂದ ಕಿಚ್ಚು ತಯಾರಿಸುವರು. ಒಲೆಗುಣಿಯ ಎದುರು ಬದುರು ಇಬ್ಬರು ಕುಳಿತು ತೆನೆಗಳನ್ನು ಒಲೆ ಗುಣಿಯಲ್ಲಿ ಹಾಕಿ ಅಂಗೈಯಲ್ಲಿ ಒರೆಸುವ ಕ್ರಿಯೆ ವಿಶಿಷ್ಟವಾದುದು. ಒಲೆಯ ಒಂದು ಮಗ್ಗಲು ಹಾಸಿದ ಕಂಬಳಿಯ ಮೇಲೆ ಹತ್ತೆಂಟು ಜನರು ಕುಳಿತು ಆ ಕಾಳುಗಳಲ್ಲಿಯ ಸುಂಕವನ್ನು ಊದಿಕೊಂಡು ತಿನ್ನುವುದುಂಟು. ಇದರ ಜೊತೆಗೆ ಕೊಬ್ಬರಿಯ ಚೆಟ್ನಿ, ಸೇಂಗಾದ ಹುರಿದ ಕಾಳು, ಹಿಂಗುಪ್ಪು, ಬೆಲ್ಲ, ಬೀಜ ತೆಗೆದ ಖರ್ಜೂರಿ ಇರುವವು. ಕೆಲವು ಕಡೆ ಬದನಿಕಾಯಿ ಎಣ್ಣೆಗಾಯಿ (ಅಡಗಾಯಿ) ಬಳಸುವರು. ಸೀತನಿಯನ್ನು ರೈತರು ದಿನಾಲು ಬಿಡದೆ 2-3 ವಾರ ತಿಂದರೆ ಸಾಕು, ವರುಷವೆಲ್ಲ ಬೇಕಾಗುವಷ್ಟು ಶಕ್ತಿ ಸಂಪಾದಿಸಬಹುದು. ಇದರ ಜೊತೆಗೆ ಸುಲಗಾಯಿ, ಕಬ್ಬು, ಸವತೀಕಾಯಿ, ಪುಟ್ಟೀಕಾಯಿ ಇರುತ್ತವೆ. ಇದಾದನಂತರ ಸಜ್ಜಿರೊಟ್ಟಿ, ಕೆನೆಮೊಸರು, ಸೇಂಗಾ ಚೆಟ್ನಿ, ಸೇಂಗಾ ಹೋಳಿಗೆ-

ಊಟ. ಯಾವುದು ತಿನ್ನಬೇಕೋ ತಿಳಿಯದು. ಇದಕ್ಕಾಗಿ ಪಟ್ಟಣಗಳಿಂದ ಹಳ್ಳಿಗಳಿಗೆ ಕಾರಿನಿಂದ ಬರುವ ರಸಿಕರೂ ಉಂಟು. ಇತ್ತೀಚೆಗೆ ಇದು ತನ್ನ ಮೊದಲಿನ ವೈಭವವನ್ನು ಕಳೆದುಕೊಂಡಿದೆ.

> ಬೆಳೆದ ಬೆಳಸಿಗೆ ಬನ್ನಿ ಭೂಮಿ ತಾಯಿಗೆ ಬನ್ನಿ
> ನಾಡ ಸಂಪತ್ತು ಬೆರಿ ಬನ್ನಿ । ಕೋಲು ಕೋಲ – ಎಂದು ರೈತ ಹಾಡಿದ್ದುಂಟು.

ಇಂದಿನ ರೈತರಿಗೆ ಸೀತನಿಯ ರುಚಿ ಗೊತ್ತಿಲ್ಲ. ಅವರಿಗೆ ಸೀತನಿ ತಿಂದು ಸಂತಸ ಪಡಲು ಸಮಯವೂ ಇಲ್ಲ. ಜೋಳದ ಬೆಳೆ ಹುಲುಸಾಗಿ ಬಂದಿದೆ. ಆದರೂ ಅದು ತನ್ನ ಕೈಗೆ ಬಂದೀತೆಂಬ ವಿಶ್ವಾಸವಿಲ್ಲ. ಅನೇಕ ಸಲ 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಎಂಬ ಅನುಭವ ಅವನಿಗಾಗಿದೆ. ಅದಕ್ಕಾಗಿ ಏಳು ಮಕ್ಕಳ ತಾಯಿಗೆ ಬೇಡಿಕೊಳ್ಳುವದನ್ನು ಕಾಣುತ್ತೇವೆ.

> ಜೋಳದ ಹೊಲವನ್ನು ಏಳು ಮಕ್ಕಳ ತಾಯಿ ।
> ಹಾಳು ಮಾಡಬ್ಯಾಡ ನಂಬೆಳಸು । ಸುಗ್ಗ್ಯಾಗ ।
> ಬಲಿಕೊಟ್ಟು ಕೈಯ ಮುಗಿದೇವ ॥

ಇಂತಹ ಮೂಢನಂಬಿಗೆಗಳು ರೈತನಲ್ಲಿ ತಲೆತಲಾಂತರಗಳಿಂದ ಬಂದಿದೆ. ಇಂದೂ ಅವು ಮುಂದುವರಿದಿರುವದನ್ನು ಗಮನಿಸಬಹುದು.

ಭಾರತ ಹುಣ್ಣಿವೆಗೆ ಚಳಿಯು ಕಡಿಮೆಯಾಗಿ ವಸಂತೋದಯವಾಗುವುದು. ಹಿಂಗಾರಿಯ ಬೆಳೆ ಮಾಗುವುದು. ಆಗ ಈ ಬೆಳೆಯ ಕೊನೆಯ ಪೂಜೆ ನಡೆಯುತ್ತದೆ. ಈ ಹುಣ್ಣಿವೆಗೆ ಗುಡಿಯ ಹುಣ್ಣಿವೆಯೆಂದು ಕರೆಯುತ್ತಾರೆ. ಇದೇ ದಿನ ಕರ್ನಾಟಕದಲ್ಲಿ ದೇವರನ್ನು ಕರೆದುಕೊಳ್ಳುವ ಸಂಪ್ರದಾಯವಿದೆ. ಇದರ ಹಿಂದಿನ ಹುಣ್ಣಿವೆ ಅಂದರೆ ಬನದ ಹುಣ್ಣಿವೆಯಂದು ಮನೆಯ ದೇವರು 'ಉಂಡಗಡಬು' ತಿಂದು ಚೆಂಡಾಡಲು ಹೊರಗೆ ಹೋಗಿರುವನೆಂಬ ಭಾವನೆಯು ನಮ್ಮ ಹಳ್ಳಿಗರಲ್ಲಿ ಉಂಟು. ಹೀಗೆ ಮನೆ ಬಿಟ್ಟು ಹೊರಗೆ ಹೋದ ದೇವರು ಬನಬನಗಳಲ್ಲಿ ಸುತ್ತಾಡಿ ಭಾರತ ಹುಣ್ಣಿವೆಯ ದಿವಸ ಮರಳಿ ಬರುವನಂತೆ. ಆಗ ರೈತರು ಆ ದೇವನನ್ನು ಆದರದಿಂದ ಬರಮಾಡಿಕೊಳ್ಳುವರು. ಆಗ ಬಿಳಿಜೋಳ, ಗೋದಿಯ ಹೊಸತೆನೆಗಳನ್ನೂ, ಕಡ್ಲಿ, ಅಗಸಿ, ಕುಸುಬೆಗಳ ಗೊಂಚಲುಗಳನ್ನೂ ಮಾವಿನ ತಳಿರು ಸಮೇತ – ತೋರಣ ಮಾಡಿ ಬಾಗಿಲಿಗೆ ಕಟ್ಟುವರು. ಗಂಟೆ, ಝಾಗಟಿ, ಊಟದ ತಟ್ಟೆ (ಗಂಗಾಳ) ಗಳನ್ನು ಬಾರಿಸುತ್ತ 'ಒಳಗಿನ ದೇವರು ಹೊರಗೆ ಬರಲಿ, ಹೊರಗಿನ ದೇವರು ಒಳಗೆ ಬರಲಿ' ಎಂದು ದೇವರನ್ನು ಆಹ್ವಾನಿಸುವರು. ಈ ಹುಣ್ಣಿವೆಗೆ

ಹಿಟ್ಟು ಚೆಲ್ಲಿದ ಹಾಗೆ ಬೆಳದಿಂಗಳು ಇರುತ್ತದೆ. ಈ ಬೆಳದಿಂಗಳ ರಾತ್ರಿ ಮನೆಗಳ ಮುಂದೆ ರಂಗೋಲಿಯ ವಿವಿಧ ಚಿತ್ರಗಳು ಮನಸ್ಸಿಗೆ ಮುದವನ್ನು ನೀಡುತ್ತವೆ.

ಈ ಸಮಯಕ್ಕಾಗಲೇ ಜೋಳದ ಬೆಳೆಯು ಪೂರ್ಣ ವಾಗಿ ಕೊಯ್ಲಿಗೆ ಸಿದ್ಧವಾಗಿರುತ್ತದೆ. ಈಗ ರೈತನಿಗೆ ರಾಸಿಯ ಕೆಲಸ ಪ್ರಾರಂಭವಾದಂತೆ. ಜೋಳ ಕೊಯ್ಯಲು ಆರಂಭಿಸುತ್ತಾನೆ. ಹಗಲು ಬೇಸಿಗೆಯ ಸುಡುಬಿಸಿಲು ಇರುವುದರಿಂದ ರಾತ್ರಿಯೇ ಈ ಕೆಲಸಕ್ಕೆ ಸೂಕ್ತ ಸಮಯ. ಹೆಣ್ಣು-ಗಂಡುಗಳೆನ್ನದೆ ಮನೆಯವರೆಲ್ಲ ಬೆಳದಿಂಗಳ ರಾತ್ರಿಯಲ್ಲಿ ಈ ಕೆಲಸಕ್ಕೆ ತೊಡಗುತ್ತಾರೆ. ಕೆಲವರು ಕೊಯ್ಯುವ ಕೆಲಸಕ್ಕೆ ತೊಡಗಿದರೆ ಒಬ್ಬರಿಬ್ಬರು ಸೂಡು ಕಟ್ಟುವ ಕಾರ್ಯ ಮಾಡುತ್ತಾರೆ. ಮನೆಯಲ್ಲಿ ಜನರು ಕಡಿಮೆಯಿದ್ದು ಜೋಳದ ಬೆಳೆಯ ಕ್ಷೇತ್ರ ಹೆಚ್ಚಾಗಿದ್ದರೆ ಕೆಲಭಾಗವನ್ನು ಗುತ್ತಿಗೆಯಿಂದ, ಕೊಯ್ದು ಸೂಡು ಕಟ್ಟಿಕೊಡಲು ಕೊಡುವರು. ನಂತರ ಕಣದ ಸ್ಥಳವನ್ನು ಗೊತ್ತು ಮಾಡಿಕೊಂಡು ಅದರ ಹತ್ತಿರ ಈ ತೆನೆ ಕಣಿಕೆಯನ್ನು ತಂದು ಗೂಡು ನಿಲ್ಲಿಸುವರು.

ಈಗ ಕಣ ಮಾಡುವ ಸರದಿ. ಕಣಕ್ಕೆ ಆರಿಸಿದ ಸ್ಥಳದ ಮಣ್ಣನ್ನು ಬಳಿದು ಚೆನ್ನಾಗಿ ನೀರು ಹೊಡೆದು ತುಸು ಹೊಟ್ಟು ಹರವಿ ತುಳಿದು ಇಲ್ಲವೆ ರೂಳು ಆಡಿಸಿ ಮನೆಯ ಅಂಗಳದಂತೆ ಗಟ್ಟಿ ಮಾಡುವರು. ಕೆಲವೆಡೆ ಸಗಣಿಯಿಂದ ಸಾರಿಸುವದೂ ಉಂಟು. ಕಣವು ರಾಸಿಗೆ ತಕ್ಕಂತೆ ವಿಸ್ತಾರವಾಗಿ ದುಂಡಗೆ ಇರುತ್ತದೆ.ಕಣದ ಮಣ್ಣನ್ನು ಬಳಿಯುವಾಗ ಒಂದು ಬುಟ್ಟಿ ಕರೆಯ ಮಣ್ಣನ್ನು ತಮ್ಮ ಹಾದಿಗೆ ಅಡ್ಡಲಾಗಿ ಹಾಕುತ್ತಾರೆ. ಇದು ದಾನ ಬೇಡುವ ದಾರಿಕಾರರಿಗೆ ರೈತ ಕೊಡುವ ಆಮಂತ್ರಣ ಎಂದು ಹೇಳಿದರೆ ಇಂದಿನವರಿಗೆ ಅಚ್ಚರಿಯೆನಿಸಬಹುದು. ಕಣದ ಸಿದ್ಧತೆಯಲ್ಲಿ ಅದರ ಮಧ್ಯದಲ್ಲಿ ಮೇಟಿ ನಡೆಸುವದೂ ಒಂದು. ಬನ್ನಿಯ ಮರದ ಮೇಟಿಯನ್ನು ನಡುವೆ ಆಳೆತ್ತರವಾಗಿ ನಡೆಸುವರು, ಈಗ ತೆನೆ ಮುರಿಯಲು ಆರಂಭವಾಗುವುದು. ರೈತನು ಈ ಎಲ್ಲಾ ಕೆಲಸಗಳಿಗೂ ಮುಹೂರ್ತ ಕೇಳಿಯೇ ಕಾರ್ಯಕ್ಕೆ ತೊಡಗುವನು. ತೆನೆಗಣಿಕೆಯನ್ನು ಗಂಡಾಳು ಕಣಕ್ಕೆ ತಂದು ಹಾಕತೊಡಗುವನು. ತೆನೆ ಮುರಿಯುವವರು ಸಾಮಾನ್ಯವಾಗಿ ಹೆಣ್ಣುಮಕ್ಕಳು. ಇವರೆಲ್ಲ ಕುಮಾರಿಯರು ಇಲ್ಲವೆ ಮುತ್ತೈದಿಯರಾಗಿರುವುದು ಕಡ್ಡಾಯ. ರಾಸಿಯ ಕಣದಲ್ಲಿ ವಿಧವೆಯರಿಗೆ ಅವಕಾಶವಿಲ್ಲ. ತೆನೆ ಮುರಿಯುವದಕ್ಕೆ ಗೂಡು ಮುರಿಯುವದೆಂದೂ ಹೆಸರು. ತೆನೆ ತೆಗೆದ ಕಣಿಕೆಗೆ ಮಂಡಕಣಿಕೆ ಎನ್ನುವರು. ಇದನ್ನು ಬಣಮಿಯಾಗಿ ಒಟ್ಟುವರು. ತೆನೆ ಮುರಿಯುವ ಹೆಣ್ಣುಮಕ್ಕಳಿಗೆ ದಿನದ ಪಗಾರಕೊಟ್ಟು ಕೊನೆಯ ದಿನ 'ಉಡಿದೆನೆ' ಹಾಕುವರು. ಇಷ್ಟಾದರೆ ಹಂತಿಗೆ ಸಿದ್ಧವಾದಂತಾಯಿತು.

ಗೊತ್ತುಪಡಿಸಿದ ಹಂತಿಯ ದಿನ ನೆರೆಹೊರೆಯ ರೈತರ ಎತ್ತುಗಳನ್ನು ಕೂಡಿಸುವರು. ತಮ್ಮ ಎತ್ತುಗಳೊಡನೆ ಆಯಾ ರೈತರೂ ಹಂತಿ ಕಾರ್ಯದಲ್ಲಿ ನೆರವಾಗುವರು. ಈ ಕಣದ ಅವಶ್ಯಕತೆಯಂತೆ ಎತ್ತುಗಳು ಬರುವವು. 5 ಎತ್ತಿನ ಬಾರಿ ಇದ್ದರೆ ಹತ್ತು ಎತ್ತುಗಳು ಬೇಕು. ಎಂಟು ಎತ್ತಿನ ಬಾರಿ ಇದ್ದರೆ ಹದಿನಾರು ಎತ್ತುಗಳು ಬೇಕು. ಮೇಟಿಯ ಈಚೆಗೆ ಕಟ್ಟಿದಷ್ಟು ಎತ್ತುಗಳನ್ನು ಆಚೆಗೂ ವಿರುದ್ಧ ದಿಕ್ಕಿಗೆ ಮುಖಮಾಡಿ ಕಟ್ಟುವರು. ಈ ಎತ್ತುಗಳ ಕಾಲ ತುಳಿತಕ್ಕೆ ಕಾಳುಗಳು ತೆನೆಯಿಂದ ಬೇರ್ಪಡುವುದು. ಹಂತಿ ಸಾಮಾನ್ಯವಾಗಿ ಸಂಜೆ ಏಳು ಗಂಟೆಗೆ ಆರಂಭವಾಗಿ ಬೆಳತನಕ ನಡೆಯುವುದು. ಆಗ ಹಾಡುವ ಹಾಡುಗಳೇ ಹಂತಿಯ ಹಾಡುಗಳು. ಕಣದ ಒಂದು ಬದಿಯಲ್ಲಿ ನಿಂತು ನಾಲ್ಕಾರು ಜನರು ಹಿಮ್ಮೇಳ ಮುಮ್ಮೇಳವಾಗಿ ಈ ಹಾಡುಗಳನ್ನು ಹಾಡುವರು. ಈ ಹಾಡಿನ ಜೊತೆಗೆ ಕಾಲುಪೇಟಿ, ತಾಳ, ಪಿಟೀಲು, ಕೊಳಲು – ಇವುಗಳನ್ನು ಬಳಸುವ ಪರಿಪಾಠ ಕೆಲವೆಡೆ ಇತ್ತು. ಬೆಳದಿಂಗಳಿದ್ದರಂತೂ ಸರಿ ಇಲ್ಲವಾದರೆ ಗ್ಯಾಸುಗಳನ್ನು ಉರಿಸಲಾಗುತ್ತಿತ್ತು. ನಡುನಡುವೆ ತಿನ್ನಲು ಖರ್ಜೂರಿ, ಚೂಡಾ–ಚಹಾ ಇರುತಿತ್ತು. ಆಗ ಹಾಡುವ ಹಾಡು:

ಗೌರೀ ಪತಿಯ ಮಗ ರಾಜ ಗಣಪಣ್ಣ ಹೌದೊ ।
ಸರಳಾದ ಸೊಂಡಿ ಬಲಮುರಿಗೊ । ಗಣಪಣ್ಣನ ।
ಹಾಡೀಗಿ ಮೊದಲ ನೆನದೆವೋ ।।

ಕರಕಿ ಪತ್ತರಿ ತಂದು ಕಣಗಿಲ ದಾರವ ಮಾಡಿ ।
ಬಂಗಾರದ ಎಳಿಯ ಜನಿವಾರ । ಗಣಪಣ್ಣನ ।
ಸಿಂಗಾರ ಮಾಡಿ ಶಿವ ಪೂಜೊ ।।

ಹಂತಿಯ ಹೊಗಿಸದೇವೊ ಗುಂಪಾಗಿ ನಿಂತೆವೊ ।
ಜಂತರ ರಾಗೋಲ ಹಿಡಿದೇವೊ । ಬಸವಣ್ಣನ ।
ತರತರಬಿ ಕಂಕಿ ತೆಗೆದೆವೊ ।।

ಎದ್ದೊಮ್ಮೆ ನೆನದೇವೊ ಗದ್ದಿಗಿ ರಾಯನ ।
ಇದ್ದೂರ ಅಽಪತಿ ಒಡೆಯನ । ಶಿವಯೋಗಿನ್ನ ।
ಎದ್ದ ಯಾಳೆದಲೇ ಕೈಮುಗಿದೊ ।।

ಮೇಟಿ ಮೂವತ್ತು ಮೊಳ ಸುತ್ತ ಅರವತ್ತು ಮೊಳ ।
ಎತ್ತ ತಿರಗ್ಯಾವ ಐನೂರೊ । ಸಾಲುಟಗಿ ।
ಸತ್ತ್ಯುಳ್ಳ ಶಿವರಾಯ್ನ ಪವಳ್ಯಾಗೊ ।।

ಹಣಿ ಮ್ಯಾಲ ವಿಭೂತಿ ಧರಿಸಿ ಮಾರ್ಯಾಗ ಬಂಗಾರ ಮೀಸಿ ।
ಅವರಾತ್ರಿ ಅಮಾಸಿ ಪರುವ ಬಳಸಿ । ಶಿವರಾಯ್ನ ।
ಹೊಯ್ಕ ನೋಡ್ಯಾರ ಪುರಮಾನಿ ಸ್ಯೊ ।।

ತುಂಬಿದ ಹೊಳಿಯಾಗ ಕೊಂಬ ಕಾಣಸತಾವ ।
ಬಂಗಾರದ ಇಣಿಯ ಬಸವಣ್ಣೊ । ಬರುವಾಗ ।
ರಂಭೇರಾರುತಿ ಬೆಳಗ್ಯಾರೊ ॥

ಹಾಸುಗಲ್ಲಿನ ಮ್ಯಾಲ ಹಾದು ಹೋದವನಾರ ।
ಪಾದ ಮೂಡ್ಯಾವ ಪರಿಪರಿಯೊ । ಬಸವಣ್ಣ ।
ಹಾದು ಹೋಗ್ಯಾನ ಜಳಕಕೊ ॥

ಶರಣರ ನೆನೆದರ ಸರಗಿಯ ಇಟ್ಹಾಂಗ ।
ಅರಳ ಮಲ್ಲಿಗಿ ಮುಡಿದ್ಹಂಗ । ಕಲ್ಯಾಣ ।
ಶರಣರ ನೆನಿಯೊ ಎಲೆ ಮನವೆ ॥

ಮುಗ್ಧ ಶರಣರ ಹಾಡು ಸಿದ್ಧಿ ಮಂತ್ರವು ನೋಡು ॥
ಸಿದ್ಧಾಗೊ ಹಾಡು ಹಾಡುದಕೆ । ಎಲೆ ಜೀವ ।
ಶುದ್ಧಾಗಿ ಹೊಂದು ಶಿವಪಥವ ॥

ಬೂದನಿಗೆ ಬಾಸಿಂಗ ಭೂಮಿ ತಾಯಿಗೆ ದಂಡೆ ।
ಸಾಲ ಶರಣರಿಗೆ ಸರಮಾಲೆ । ಕಟಗೊಂಡು ।
ಮಾದಯ್ಯ ಗೆದ್ದ ಕೈಲಾಸ ॥

ಇಲ್ಲಿ ಬಂದ ಮಾದಯ್ಯನು ಶಿವಶರಣ ಹೂಗಾರ ಮಾದಯ್ಯನಿರಬೇಕೆಂದು ಡಾ!! ಬಿ.ಎಸ್. ಗದ್ದಗಿಮಠ ಅವರು ತಮ್ಮ 'ಕನ್ನಡ ಜಾನಪದ ಗೀತೆಗಳು' ಮಹಾಪ್ರಬಂಧದಲ್ಲಿ ಹೇಳಿರುವರು.

ಹಂತಿಯ ಕಟ್ಟವನ ಹೌಸ ಹುರುವನು ನೋಡೊ ।
ಹಂತಿಯ ಧೂಳೊ ಮೈಧೂಳೊ । ಹದಿನಾರು ।
ಹಂತಿ ಎತ್ತಿನ ಹಣಿ ಧೂಳೊ ॥

ನಿನ್ನ ಭಜನೆಯ ಹಾಡು ಹೊನ್ನ ಮಳೆ ಸುರಿದಂತೆ ।
ಹಣ್ಣಾದ ಎದೆಯ ಒಕ್ಕಲಿಗ । ಮಣ್ಣೊಳಗೆ ।
ಚಿನ್ನ ಬೆಳಕೊಂಡ ಒಣ ಬಿತ್ತಿ ॥

ಹಾಡುತಲಿ ಒಕ್ಕಲಿಗ ಮಾಡುವನು ಸುಗ್ಗಿಯನು ।
ನೀಡು ಚೆನ್ನಯ್ಯ ನೀ ಹುಲುಸು । ಕಾಡೊಳಗೆ ।
ನಾಡು ತುಂಬಿರಲಿ ಶಿವಭಕ್ತಿ ॥

ಸುಗ್ಗಿ ದಾಸೋಹೆಂದು ಹಿಗ್ಗು ಬೆಳವಲ ನೋಡು ।
ಹುಗ್ಗಿ ಹೋಳಿಗೆಯು ನಿನ್ಹಾಡು । ಸುಗ್ಗ್ಯಾಟ ।
ನಗ್ಗೇಡು ಇದಕೆ ಮಲೆನಾಡು ॥

ಕೃಷಿಕರು ತಮ್ಮ ಭಾಗದಲ್ಲಿರುವ ಸುಗ್ಗಿಯ ಸಂಭ್ರಮ ಮಲೆನಾಡಿನಲ್ಲಿ ಇಲ್ಲವೆಂದು ಗೇಲಿ ಮಾಡಿದ್ದಾರೆ. ಇವೆಲ್ಲ ತ್ರಿಪದಿಗಳು. ಇವುಗಳ ಸಂಖ್ಯೆ ಸಾವಿರಾರು. ಅಂತೆಯೇ ಇವುಗಳನ್ನು ಹಾಡತೊಡಗಿದಾಗ ಬೆಳಗಾಗುತ್ತದೆ.

ಹಂತಿ ಸಾಗಿರುವಾಗ ನಡು ನಡುವೆ ಎತ್ತುಗಳನ್ನು ನಿಲ್ಲಿಸಿ ಕಂಕಿಯನ್ನು ತೆಗೆಯಬೇಕಾಗುವದು. ಆಗಲೂ ಹಾಡುಗಳಿಗೆ ವಿರಾಮವಿಲ್ಲ. ಆದರೆ ಆ ಬಂಧ ಮಾತ್ರ ಭಿನ್ನ. ಇದು ಅವಸರದ ಬಂಧ.

ಬಂದಾವ ಬಂದಾವ ಗಿಣಿಯೊ ಗಿಣಿಯೊ ।
ಕಡದಾವ ಯಾಲಕ್ಕಿ ಗೊನಿಯೊ ॥
ಕಡದಾವ ಯಾಲಕ್ಕಿ ಗೊನಿಯೊ ಗೊನಿಯೊ ।
ನಮ್ಮ ಕಣದಾಗ ಮುತ್ತಿನ ತೆನಿಯೊ ॥

ಚಡ ಚಣ ಮುಂದಿನ ಚೌಣಕ್ಕೊ ಚೌಣಕ್ಕೊ ।
ಅದು ಆಯ್ಕೊಂಡು ತಿನ್ನೂದು ಅವಲಕ್ಕೊ ॥
ಆಯ್ಕೊಂಡು ತಿನ್ನೂದು ಅವಲಕ್ಕೊ ಅವಲಕ್ಕೊ ।
ನಮ್ಮ ಬಸವಣ್ಣ ತಿನ್ನೂ ದು ನೆಲ್ಲಕ್ಕೊ ॥

ಈ ಹಾಡು ಹಾಡುವವರಲ್ಲಿ ಆಗಾಗ ಎರಡು ಗುಂಪುಗಳಾಗಿ ಪ್ರಶ್ನೋತ್ತರ ರೀತಿಯ ಹಾಡು ನಡೆಯುವುದುಂಟು.

ಹಂತಿಯ ಹೊಡಿಯವಗ ಏನೇನ ಬ್ಯಾಜೊ ॥
ಕರಿಕಟ್ಟಿದ ಕಂಬಳಿ ಕಾಲಾಗ ರುಳಿಯೋ ॥
    ಕಂಕಿಯ ತೆಗೆಯವಗ ಏನೇನ ಬ್ಯಾಜೋ ॥
    ಹೊನ್ನಿನ ಸಡ್ಡ ಚಿನ್ನದ ರಾಗೋಲೊ ॥
ಹೊನ್ನ ರಾಗೋಲ ಮ್ಯಾಲ ಚೆನ್ನ ಬಸವಣ್ಣೊ ॥
ಯಾವ ಮಾಡ್ಯಾನವ ಚತುರ ಬಡಿಗಣ್ಣೊ ॥
    ಬಾಬಾನ ದಂಡಿನಾಗ ನವ ಬತ್ತ ಬಾಜ್ಯೋ ॥
    ಇಂದ ನಮ್ಮ ಕಣದಾಗ ರಾಗೋಲ ಪೂಜ್ಯೋ ॥
ಮೂಡಲ ಗಿರಿಮ್ಯಾಲ ಮೂಡ್ಯಾನ ರಾಮೊ!!
ಎಳ ಎಳದು ಬಾ ನನ್ನ ಎಳಿ ಚೆಂದರಾಮೊ!!

ಮತ್ತೆ ಬಂಧ ಬದಲಿಯಾಗುವ ಇನ್ನೊಂದು ಹಾಡು:

ಕಂಬಾರ ಮಾಡ್ಯಾನ ಕಳಸೊ ಕಳಸೊಬಡಿಗ್ಯಾ ಮಾಡ್ಯಾನ ಹೊರಸೊ ।
ಹೊರಸಿನ ಮ್ಯಾಲ ಸರಸೊ ಸರಸೊ । ನನ ಜೀವದ ಗೆಳತಿನ ಕರಸೊ ॥
ಸಣ್ಣ ಪಾವಡದಾಗ ಎಣ್ಣಿ ಹೋಳಿಗಿ ಮಾಡಿ ।
ಉಣ್ಣಂತ ಕಳುವ್ಯಾಳೊ । ಚದುರಂಗಿ ಮತ್ತೇನ ಕಳುವ್ಯಾಳೊ ॥
ಬನ್ನಿಯ ಕೊನಿ ನೋಡಿ ಕೊನಿನೋಡಿ । ಬಂಗಾರದ ಮೇಟಿ ನಡೆಸಿ ।
ಬಂಗಾರದ ಮೇಟಿಗಿ ಮೇಟಿಗಿ । ಸಿಂಗಾರ ಸೂಡನು ಬಿಗಿಯೊ ॥
ಹೊಲದಾನ ಲಕ್ಷ್ಮೀ ಏನ್ಮಾಡ ತಾಳೊ ॥
ವಾಲಿಯ ಇಟಗೊಂಡು ಲೋಲ್ಯಾಡತಾಳೊ ॥
ಕಣದ ದಂಡಿಮ್ಯಾಲ ಬೋರ್‍ಯಾಡುವದೇನೋ ॥
ಅದು ನಮ್ಮ ರಾಸ್ಯಾನ ರಾಗೋಲ ಕಾಂವ್ಹೊ ॥
ಎಂಟೆತ್ತಿನೊಳಗ ಯಾವ ಎತ್ತ ಚೆಲುವ್ಹೊ ॥
ಸರಳ ಕೊಂಬಿನ ಸಾರಂಗ ಚೆಲುವ್ಹೊ ।
ಬೇಲೂರ ಹಣುಮಗ ಬೇವಿನ ದಂಡ್ಯೋ ॥
ನಮ್ಮೂರ ಹಣುಮಗ ಮುತ್ತಿನ ದಂಡ್ಯೋ ॥

ಹಂತಿಯ ಹಾಡುಗಳಲ್ಲಿ ಸಮಗ್ರ ರಾಮಾಯಣ, ಮಹಾಭಾರತ ಚರಿತ್ರೆಯ ಹಾಡುಗಳಿರುವದನ್ನು ಕೇಳಿದ್ದೇನೆ. ಅವುಗಳನ್ನು ಹುಡುಕಿ ಪ್ರಕಟಿಸಿ ಉಳಿಸಿಕೊಳ್ಳುವುದು ಈಗ ಮಾಡಬೇಕಾದ ಕೆಲಸ. ಇವುಗಳನ್ನು ನಾವು ಒಮ್ಮೆ ಕಳೆದುಕೊಂಡರೆ ನಮ್ಮ ಅಮೂಲ್ಯ ಸಂಪತ್ತು ನಾಶವಾದಂತೆಯೆ.

ಈ ಹಂತಿಯು ಮುಗಿಯುತ್ತ ಬಂದಿದೆ. ಇಷ್ಟರಲ್ಲಿ ಮೂಡಲು ಹರಿಯತೊಡಗಿದೆ. ಇದನ್ನೇ ಶಿಷ್ಟ ಸಾಹಿತಿಗಳು ಅರುಣೋದಯ ಎಂದು ಕರೆದಿದ್ದಾರೆ. ಹಂತಿ ಮುಗಿಸುವಾಗ ಮಾಡುವ ಕ್ರಿಯೆಗಳು ಈ ಮುಂದಿನ ಹಾಡುಗಳಲ್ಲಿವೆ.

ಕಡಿಯ ಎತ್ತಿನ ಹೆಂಡಿಯ ಹಿಡಿಯೊ । ಮುತ್ತ ಹಚ್ಚಿ ಚೆನ್ನಾಗಿ ಬಡಿಯೊ ।
ಕರಿದು ಬಿಳಿದು ಎತ್ತಿನ ಬಾಲ ಕೈಯಾಗ ಹಿಡಿಯೊ । ಪಾಡೇವಾರ ।
ಗುಂಡಕಮಾಡಿ ಇಂಡಿಗಿ ಮ್ಯಾಲಿಟ್ಟು ಪೂಜಿಯ ಮಾಡೊ ॥

ಮದಾ ಮಲಗಿಸಬೇಕೊ ಕರಿಭಂಟ ಕಟ್ಟಬೇಕೊ ।
ಒಳೆಗೈದು ಸೂಡಾ ಒಗಿ ಬೇಕೊ । ಕಣದಾಗ ।
ಸೂರ್‍ಯಾ ಚಂದ್ರಾಮನ ಬರಿಬೇಕೊ ॥

ಹಂತಿಯ ಹಾಡುಗಳಲ್ಲಿ ಸ್ತುತಿಪದ್ಯಗಳೊಡನೆ, ಅನೇಕ ಮಹಾಪುರುಷರ

ಚರಿತ್ರೆಗಳೂ, ಲೀಲೆಗಳೂ ಸಮಾವೇಶಗೊಂಡಿವೆ. ದಾನಶೂರ ಸಿರಸಂಗಿ ಲಿಂಗರಾಜ, ದಾಸೋಹ ಮೂರ್ತಿ ವಾರದ ಮಲ್ಲಪ್ಪ, ಬೆಳವಡಿ ಮಲ್ಲಮ್ಮ, ಕಿತ್ತೂರ ರಾಣಿ ಚೆನ್ನಮ್ಮ, ನರಗುಂದ ಬಾಬಾಸಾಹೇಬ, ಮುಂಡರಗಿ ಭೀಮರಾಯ, ಹಲವಾರು ಸಾಧು ಸತ್ಪುರುಷರ ಹಾಡುಗಳನ್ನು ಹಂತಿ ಹಾಡುಗಳಲ್ಲಿ ಹಾಡುವರು.

ಹಂತಿಯ ದಿನ ರಾತ್ರಿಯಿಡೀ ನಿದ್ದೆಗೆಟ್ಟು ಶ್ರಮದ ಕೆಲಸ ಮಾಡಿರುವದರಿಂದ ಮರುದಿನ ಅವರು ವಿಶ್ರಾಂತಿ ಪಡೆಯುವರು. ಆ ದಿನ 'ಮದ ಮಲಗಿಸುವುದು' ಎಂದು ಹೇಳುತ್ತಾರೆ. ಮದವನ್ನು ಸಮನಾಗಿ ಮಾಡಿ ಮೇಲೆ ಐದು ಸೂಡು ಒಗೆದು ಕರಿಬಂಟ ಹರವಿ ಸೂರ್ಯ ಚಂದ್ರರನ್ನು ಬರೆದರೆ ತೀರಿತು. ಹಂತಿಯ ಮರುದಿನ ಅದನ್ನು ಯಾರೂ ಮುಟ್ಟುವುದಿಲ್ಲ. ಮದ ಮಲಗಿದ ದಿನದಂದು ಮನೆಯಲ್ಲಿ ಹೆಣ್ಣುಮಕ್ಕಳಿಗೆ ಪೂರ್ಣ ಕೆಲಸ. ಅಂದು ಹುಗ್ಗಿ, ಹೋಳಿಗೆ, ಹಂತಿಯಂಬಲಿ, ಕಿಚಡಿ ಮಾಡಿ ಸಾಯಂಕಾಲ ಚಕ್ಕಡಿ ಹೂಡಿಕೊಂಡು ಹೊಲಕ್ಕೆ ಬರುತ್ತಾರೆ. ಹಂತಿಯಲ್ಲಿ ಭಾಗವಹಿಸಿದವರೆಲ್ಲರಿಗೂ ಅಂದು ಊಟಕ್ಕೆ ಆಮಂತ್ರಣವಿರುತ್ತದೆ. ಇದಕ್ಕೆ 'ರಾಸೀಬಾನ' 'ಹಂತಿಯಂಬಲಿ' ಮೊದಲಾದ ಹೆಸರುಗಳಿವೆ. ಅಂದು ಕಣದಲ್ಲಿರುವ ಮದಕ್ಕೂ, ಹೊಲದ ಲಕ್ಷ್ಮಿಗೂ ಪೂಜೆ ಮಾಡಿ ಎಡೆ ಹಿಡಿಯುತ್ತಾರೆ. ಕಾಯಿ ಒಡೆದು ಆರತಿ ಮಾಡುತ್ತಾರೆ. ಎಲ್ಲರೂ ಕೂಡಿ ಊಟ ಮಾಡಿ ವಿಶ್ರಾಂತಿ ಪಡೆಯುವರು.

ಮಾರನೆಯ ದಿನ ಬೆಳಗ್ಗೆ ಮದ ಒಡೆದು ತೂರುವ ಕೆಲಸ ಆರಂಭವಾಗುವುದು. ತೂರಿ ಸ್ವಚ್ಛವಾದ ಕಾಳುಗಳನ್ನು ಕಂಬಳಿಯ ಚಾಳದಿಂದ ಚೀಲ ತುಂಬುವರು. ಕಣಗಳಲ್ಲಿ ಹಿರಿರಾಸಿ, ಕಂಕಿರಾಸಿ, ಕಡೆಗಣ ಎಂದು ಮೂರು ವಿಧ.

ಕೃಷಿಕನ ಕೂರಿಗೆಗೆ ಮೂರು ತಾಳಗಳು. ಅವನ ಆದಾಯದಲ್ಲಿ ಮೂರು ಭಾಗ ಮಾಡಿದರೆ ಅವನದು ಒಂದು ಭಾಗ ಮಾತ್ರ. ಇದನ್ನೇ ರೈತ ತನ್ನ ಹಾಡಿನಲ್ಲಿ ಹೇಳಿದ್ದಾನೆ.

ಕಡೆಯ ಬಲಕಿನ ತಾಳ ಎಡೆಯಾಯ್ತು ಅರಸನಿಗೆ ।
ಎಡಗಡೆಯ ತಾಳ ಪಶು ಪಕ್ಷಿ । ಜೀವನಕ್ಕೆ ।
ನಡುವಿನಾ ತಾಳ ರೈತನಿಗೆ ।।

ಒಕ್ಕಲಿಗನಿಗೆ ಹೊಲಗೆಲಸವೇ ಕಾಯಕ; ಸುಗ್ಗಿಯೇ ದಾಸೋಹ; ಹರಸೇವೆ. ಹಂಗಿಲ್ಲದ ಉದ್ಯೋಗವೆಂದರೆ ಬೇಸಾಯ. ನಿಸರ್ಗವು ದಯಮಾಡಿದರೆ ಸಾಕು. ಹನ್ನೆರಡು ತಿಂಗಳು ಕಾಯಕ, ದಾಸೋಹ.

ಒಂದು ತಾಳದ ಬೆಳೆಯ ಬಂದವರಿಗಿಲ್ಲೆನ್ನೆ ।
ಮುಂದು ಕೊಡಗೈಯು ಒಕ್ಕಲಿಗ । ನಾಡೊಳಗೆ ।
ಹೊಂದಿ ದಾಸೋಹ ಶಿವಮತಕೆ ॥

ಹೀಗೆ ಒಕ್ಕಲಿಗನ ಗಳಿಕೆಯು ಎಲ್ಲರಿಗೂ ಹಂಚಿಹೋಗುವುದು. ಅವನು ಜಿಪುಣನಾದರೆ ಜೀವಕೋಟಿ ಬದುಕುವದೇ ಶಕ್ಯವಿಲ್ಲ.

ರಾಸಿಯ ಕಣದಲ್ಲಿ ನಾವು ಶರಣ ತತ್ವವನ್ನು ಕಾಣುತ್ತೇವೆ. ಅವನಿಗೆ ಸುಗ್ಗಿಯ ಕಣವೇ ಮಂಟಪವು; ಮೇಟಿಯೇ ಚೆನ್ನಬಸವಣ್ಣ; ಆರಾಧನೆ ಮಾಡಿಸುವವನೇ ಹೊಣೆಗಾರ ರೈತ–ಬಸವೇಶ. ಇದಕ್ಕೆ ಸಮರ್ಥಗುರು ಪ್ರಭುದೇವ. ಕಣದೊಳಗಿನ ಬುದ್ಧಿವಂತ ಲಿಂಗ (ಬೂದುಗ). ಕಣದ ರಾಸಿಯನ್ನು ಕಾಯಲು ಉಗ್ರವೀರ 'ಬಂಟ' ವೀರಘಂಟೆಯ ಮಡಿವಾಳನಿಗೆ ಕೃಷಿಕನು 'ಕರಿಬಂಟ'ನೆಂದೂ ಮತ್ತು ಪಾವನ ಭಕ್ತಿಯುಳ್ಳ ಮಹಾಶರಣ ಹರಳಯ್ಯನಿಗೆ 'ಬಿಳಿಬಂಟ'ನೆಂದೂ ಕರೆದಿರುವನು. ಆದರೆ ಈ ಸತ್ಯ ಇಂದಿನ ರೈತನಿಗೆ ಗೊತ್ತಿಲ್ಲ. ಕಂಕಿಯನ್ನು ಸುಟ್ಟ ಕರಕಿಗೆ ಕರಿಬಂಟನೆಂದೂ, ಕಣದ ದಂಡೆಯ ಮೇಲಿರುವ ಒಲೆಯಲ್ಲಿಯ ಬೂದಿಗೆ 'ಬಿಳಿಬಂಟ'ನೆಂದೂ ತಪ್ಪಾಗಿ ತಿಳಿಯುತ್ತ ಬರಲಾಗಿದೆ.

ಶಿವಶರಣರ ಹಂತಿಯ ಹಾಡುಗಳಲ್ಲಿ ಶಿವ ಶಬ್ದವು ಅನ್ಯಶಬ್ದಗಳೊಡನೆ ಬೆರೆತು ಧಾರಾಳವಾಗಿ ಬಳಕೆಯಾಗಿರುವದನ್ನು ಕಾಣುತ್ತೇವೆ. ಉದಾಹರಣೆಗಾಗಿ ಕೆಲವು ಪದಗಳು.

ಶಿವ ಅಂಗಿ : ಚೆರ್ಚದ ಚರ್ಮ	ಶಿವಪೂಜೆ :ಲಿಂಗಪೂಜೆ
ಶಿವ ಎಡೆ : ರಾಸಿ ಬಾನ	ಶಿವ ಭೇರಿ :ಶಂಖನಾದ
ಶಿವಕುಲ : ವೀರಶೈವ ಕುಲ	ಶಿವದಾನ :ಮಜ್ಜಿಗೆ
ಶಿವಕೋಲು : ಗುಂಡಯ್ಯನ ತಿಗರಿಯ ಕೋಲು	ಶಿವದೀಕ್ಷೆ : ಅಯ್ಯಾಚಾರ
ಶಿವಗತಿ : ಮೋಕ್ಷ	ಶಿವಮಂಗಲ : ಶುಭ
ಶಿವಕುಣಿತ : ತಾಂಡವ	ಶಿವಮಾಸ : ಶ್ರಾವಣ
ಶಿವಗೇರಿ : ಸ್ಮಶಾನ	ಶಿವಮುಕುಟ : ಜಡೆ
ಶಿವಜೀವಿ : ಶಿವಭಕ್ತ	ಶಿವರಸ : ಮಜ್ಜಿಗೆ
ಶಿವತಾಯಿ : ಬಿಜ್ಜ ಮಹಾದೇವಿ	ಶಿವಲೀಲೆ : ಶಿವನ ಚತುರ್ವಿಂಶತಿ ಲೀಲೆಗಳು
ಶಿವತಳಿಗೆ : ಗಂಗಾಳ	ಶಿವವುಂಡಿಗೆ : ಲಿಂಗಮುದ್ರೆ

ಶಿವದಾರ : ಕರಡಿಗೆಯ ದಾರ

ಶಿವಗಾಳಿ : ಶಾಂತ ಗಾಳಿ

ಶಿವನಾಟ : ಪ್ರಪಂಚ

ಶಿವನಾದ : ಅರಿವು

ಶಿವಪುರ : ಸ್ವರ್ಗ

ಶಿವಶಿಖರ : ಶ್ರೀಶೈಲ, ಗೌರಿಶಂಕರ

ಶಿವಸಾಕ್ಷಿ : ಸತ್ಯ

ಶಿವಸದರು : ಕೈಲಾಸ

ಶಿವಸೂತ್ರ :ಪಂಚಕಲಶ ಸೂತ್ರಗಳು

ಶಿವಸಸಿ : ಲಿಂಗವಂತ ಧರ್ಮ

ಒಕ್ಕಲಿಗನು ಮೇಟಿಯ ಕಂಬವಾದರೆ, ಆಯಗಾರರು ಮೇಟಿಯ ಸುತ್ತ ತಿರುಗುವ ಹಂತಿಯ ಎತ್ತುಗಳಿದ್ದಂತೆ. ಮೇಟಿ ಇವೆಲ್ಲಕ್ಕೂ ಆಧಾರ. ಆದರೆ ಎತ್ತುಗಳಿಲ್ಲದೆ ಮೇಟಿ ಕಟ್ಟಲೂ ಆಗದು; ಹಂತಿ ಮಾಡಲೂ ಆಗದು. ಆದುದರಿಂದ ಕೃಷಿಕನಿಗೆ ಆಯಗಾರರ ನೆರವು ಅತ್ಯವಶ್ಯ. ಆಯದ ಕುಲಕಸಬಿಗಳೆಲ್ಲರೂ ಆಯಗಾರರು. ಆಯಗಾರರಿಗೆ ರೈತನಿಂದ ಮುಂಗಾರಿ ಹಾಗೂ ಹಿಂಗಾರಿ ಸುಗ್ಗಿಗಳಲ್ಲಿ ದೊರಕುವ ಆಯ; ಜಾತ್ರೆ, ಉತ್ಸವ ಇತ್ಯಾದಿಗಳಲ್ಲಿ ಸಿಗುವ ಆಯ; ಹಬ್ಬ-ಹುಣ್ಣಿವೆಗಳಲ್ಲಿಯ ಆಯ; ಮದುವೆ-ಮುಂಜಿವೆಗಳಲ್ಲಿ ಸಿಗುವ ಆಯ ಹಾಗೂ ಜನನ-ಮರಣ ಕಾಲದ ವಿವಿಧ ಸಂಸ್ಕಾರಗಳಲ್ಲಿ ಸಿಗುವ ಆಯ-ಇವು ಮುಖ್ಯವಾದವು. ಆಯಗಾರರಲ್ಲಿ 1. ಮಠದ ಸ್ವಾಮಿಗಳು, 2. ಬಡಿಗ, 3. ಕಂಬಾರ, 4. ಕುಂಬಾರ, 5. ಹೂಗಾರ, 6. ಅಗಸ, 7. ಕ್ಷೌರಿಕ, 8. ಮಾದಿಗ-ಹೊಲೆಯ- ಇವರು ಪ್ರಮುಖಪಾತ್ರವಹಿಸುತ್ತಾರೆ. ರೈತ ಮತ್ತು ಆಯಗಾರರ ಪರಸ್ಪರ ಸಂಬಂಧ, ಸಹಕಾರ ತತ್ವಗಳ ಒಂದು ಕಾಲದ ಪರಿಕಲ್ಪನೆ ನಮಗೆ ಅಚ್ಚರಿಯನ್ನುಂಟು ಮಾಡುವಂತಹುದು. ಒಕ್ಕಲಿಗನೂ ಇಂದು ಬದಲಾಗಿದ್ದಾನೆ, ಆಯಗಾರರೂ ಇಂದು ಕಣ್ಮರೆಯಾಗುತ್ತಿದ್ದಾರೆ. ಒಂದು ಕಾಲದಲ್ಲಿ ರೈತನು ಹಳ್ಳಿಯ ಆಯಗಾರರಿಗೆ ಉಸಿರಾದ ಮಹಾದಾನಿಯಾಗಿದ್ದನು. ಇಂದು ಆಯಾ ಕೆಲಸಕ್ಕೆ ಆಗಲೇ ಹಣಕೊಟ್ಟು ಮಾಡಿಸಿಕೊಳ್ಳವುದು ಆರಂಭಗೊಂಡಿದೆ. ರೈತ ಆಯಗಾರರ ಸಂಬಂಧ ಹಿಂದಿನಂತೆ ಉಳಿಯದಿರುವುದು ವಿಷಾದದ ಸಂಗತಿ.

ಒಕ್ಕಲಿಗ-ಆಯಗಾರರ ಸಂಬಂಧ ಕುರಿತು 'ರೈತ ದೊಡ್ಡವ ಎಲ್ಲರೊಳಗ' ಎಂಬ ಗೀಗೀ ಹಾಡು ಹೀಗಿದೆ:

ಮನಗಂಡ ಮಾತ್ಯೆತಿ ಮಹೋಪಕಾರ ಮನಸಿನೊಳಗ ಮಾಡಿರಿ ಗೊತ್ತ
ವಿಚಾರ ಮಾಡಿದರ ಆಚಾರ ತಿಳುತ್ಯೆತಿ ಎಲ್ಲರೊಳಗ ದೊಡ್ಡದ ರೈತ ||ಪಲ್ಲ|| ಗೀಗೀ ||
ಮೇಟಿ ನಡಸಿದ ಮ್ಯಾಲ ಕೋಟಿದಾಗ ಆಗತ್ಯೆತಿ ಅವನಲ್ಲಿ ಅಗಣಿತ
ಶಿವಕೊಟ್ಟಕಾಲಕ ದಾನ ಮಾಡತಾನ ಸರಿಯಲಾರದೆ ವಿಪರೀತ || ಗೀಗೀ ||

ಎಂಥ ಜೀವ ಮಹಾ ನೀಚ ಇದ್ದರೆ ಮ್ಯಾಲ ಇರುವುದು ರೈತನ ಹಸ್ತ
ಕೊಟ್ಟಕೊಂಡರ ಖೊಟ್ಟಿ ಅನಸುದು ಕೆಟ್ಟತಾನ ಆತನ ಸುತ್ತ ॥ಗೀಗಿ ॥
ಆತನ ಕೆಲಸಿಗೆ ಎಲ್ಲರು ಬೇಕು ಒಬ್ಬರ ಸೆಡವು ಒಬ್ಬರಕಿಂತ
ಬಡಿಗ್ಯಾ ಕಂಬಾರ ಕುಂಬಾರ ಬೇಕೊ ನಿರ್ವಾಹವಿಲ್ಲದೆ ಆತನ ಹೊರ್ತ ॥ ಗೀಗೀ॥
ಹಡಪದವ ಹಗಲೆಲ್ಲ ಬೇಕಾಗತಾನ ಅವನಿಂದ ಆಗುದು ಹರಕತ
ಕಂಡ್ಯಾಳ ಪೆಂಡಿವೊಂದು ಕಡ್ಯಾಕ ಬೇಡತಾನ ಕೊಟ್ಟರ ಹೋಗಾಂವ ನಗನಗತ ॥ಗೀಗೀ॥
ಆಯತಾ ವ್ಯಾಳ್ಯಾಕ ಅಡಗಣಸಿ ಹಚ್ಚತಾನ ಮಠಪತಿ ಐನೋರ ಬೇಕಂತ
ಗಂಟ ಹಾಕಲಾಕ ಮತ್ಯಾರ ಬರ್ತಾರ ನಮ್ಮ ಹಕ್ಕ ಎಲ್ಲರಕಿಂತ ಜಾಸ್ತ ॥ಗೀಗಿ ॥

॥ ಚ್ಯಾಲ ॥

ಹಕ್ಕದಾರ ಮಂದಿ ಕಡಿಮಿಲ್ಲ
ಕೇಳೆದ್ಯಾವ ಮಲ್ಲ। ಹಾಕತಾನ ಹಗಲೆಲ್ಲ
ಮುಜಾವರ ಫೇರಿ ಕಡಿಯಿಲ್ಲರೀ ॥ ಗೀಗೀ ॥
ಎಲ್ಲಾರೊಳಗ ದೊಡ್ಡವ ಯಾರ। ಊರ ಕಮ್ಮಾರ
ಬಂದ ಎತ್ತ ಎರೀ ಹಗ್ಗ ಒಗದು ಹೊಡಿಥಿತಾನ ಮುಜರಿ ॥
ಇಕ್ಕಲ ಕಣಕಿ ಹಿರಿಹಿರಿದು ಕಾಲ ಕೊಟ್ಟು ಬಿಗದು
ಕಟ್ಟತಾನ ಹೊರಿ ಈಗ ಮಾಡ ಬ್ಯಾಡ್ರಿ ಬಹಳ ಜಿಕೀರಿ ॥ ಗೀಗೀ ॥

॥ ಏರ ॥

ಬಡಿಗ ಒಂದು ಚೀಲ ಸರ್ಕ ಬೇಡತಾನ ಕಾಡಗಿ ತೆನಿ ಗಟ್ಟಿ ಕಿಸಗೋಡಿಸಿತ್ತ
ವಿಚಾರ ಮಾಡಿದರ ಆಚಾರ ತಿಳೀತೈತಿ ಎಲ್ಲರೊಳಗ ದೊಡ್ಡವ ರೈತ ॥ ಗೀಗೀ ॥ ಚೌಕ 1 ॥
ಮಠದಯ್ಯ ಸ್ವಾಮಿ ಮೆಲ್ಲಕ ಅಂತಾನೊ ಭಕ್ತನ ಪ್ರೇಮೈತಿ ನಮ್ಮ ಮ್ಯಾಲ
ನೋಡಿಕೊಡಪ್ಪ ನಡಸವ ಬ್ಯಾರ್ಯಾನ ನಾಯೇನು ಬರುದಿಲ್ಲ ಹಗಲೆಲ್ಲ।
ಹೂಗಾರ ಅಂತಾನ ಹೊಳ್ಳಿ ಹೋಗುದಿಲ್ಲ ಕಂಠ ಮಾಲಿ ತಂದಾನೊ ಒಳ್ಳೆ ಅಸಲ ॥ ಗೀಗೀ॥
ಮಗಿ ಕೊಡಾಕೊಟ್ಟು ಮೂಗ ಹಿಗ್ಗಸತಾನ ಕುಂಬಾರ ಹುಡುಗ ಅಂವ ಒಳ್ಳೆ ಡೌಲ
ವಾಲಿಕಾರ ನಾಟಿಕಾರ ತಳವಾರ ಅಂತಾರ ಹೋದಲ್ಲಿ ಬಂದಲ್ಲಿ ಕೇಳವರಲ್ಲ॥
ಖಣದಾಗ ಕೊಟ್ರ ಮನ್ಯಾಗ ಕೊಟ್ರ ಎಲ್ಲಿ ಕೊಟ್ರು ತಕರಾರಿಲ್ಲ
ಗೌಡರ ಸಿಪಾಯಿ ಬಂದು ಗುಡಾರ್‍ಹಾಕಿ – ಬೇಡತಾನ ತುಸು ಜರ ಕುಡಲಾಕ ಬರುದಿಲ್ಲ
ಕೊಟ್ಟರ ಠೀಕ ಕೊಡದಿದ್ದರ ಹೋಗಿ ಚವಡ್ಯಾಗ ನಡಸ್ತಾರ ತಮ್ಮ ಅಮಲ
ಮಾದಗ ಅಂತಾನೊ ಒಂದ ನಮ್ಮದು ನಿಮ್ಮದು ನಡಿಯುವದಿಲ್ಲ
ಎಷ್ಟು ದುಡಿದರೂ ಹೊಟ್ಟಿಗಿ ಕೊಡುದಿಲ್ಲ ಕೊಂಡ ಹಾಕ್ತೀವಿ ಮಾರಾಯ್ರ ॥ಗೀಗೀ ॥

|| ಚ್ಯಾಲ ||

ರಾಸಿ ನೋಡೇವಂದ್ರ ನೆದರ ತುಂಬಂಗಿಲ್ಲ
ಹೊಲ್ಯಾಗ ಅಂತಾನಲ್ಲ ಮಣ್ಣ ಕಾಳ ಬಿಟ್ಟೇವಿ
ಮತ್ತಷ್ಟಕ ಖಣಾ ಮಡಕೊಡರಿ

|| ಏರ ||

ಎಲ್ಲರೂ ಕೂಡಿ ಮಾತಾಡಿ ಮನಸಿನಾಗ ಮಾಡ್ಯಾರ ಜತ್ತ
ವಿಚಾರ ಮಾಡಿದರ ಆಚಾರ ತಿಳುತೈತಿ. ಎಲ್ಲರೊಳಗ ದೊಡ್ಡವ ರೈತ ||ಗೀಗೀ|| ಚೌಕ-2||
ಟೆಂಗ ಒಡೆದು ಒಳೆ ಸೋಂಗ ಮಾಡ್ತಾನ ಬಣಜಿಗ್ಯಾರ ಹುಡುಗ ಬಡಿವಾರ
ಅಳದ ತೊಗೋಳುದಿಲ್ಲ ಮಕಾರ ಗುತ್ತಿಗಿಲೆ ಬುಟ್ಟಿಲೆ ಕೊಡಬೇಕೊ ಭರಪೂರ
ತೂರ ಬುಟ್ಟಿ ತಂದು ತುದಿಗಾಲೂರಿ ಕೊರವ ಹೋಗಿ ಕುಂತಾನ ಭರರರ
ಸಾಕಿಸುವ ದೇವರು ಹೊಟ್ಟಿ ತುಂಬುವುದಿಲ್ಲ ಸೂಡ ಕೊಡತೀರೋಂದು ಐದಾರು||
ಬಿತ್ತಾಗ ಕೊಡಬೇಕು ಕೊಯ್ದಾಗ ಕೊಡಬೇಕು ಖಣದಾಗ ಕೊಡಬೇಕಂದರ
ಕಡೆತನ ಕೊಟ್ಟು ದಾನ ಮಾಡತಾನ ಎಂಥ ಧೈರ್ಯಸ್ತ
ತನ್ನ ಹಗಿ ತಾ ತುಡುಗಿಲೆ ತಗಿಬೇಕು ಬರತಾರ ಬೇಡವರ
ಕೊಟ್ಟ ಮ್ಯಾಲ ಕೊಂಡಾಡುದು ಹೆಸರ ಕೊಡದಿದ್ದರ ಅವಡುಗಟ್ಟಿ ಬೈಯುವರ ||

||ಚ್ಯಾಲ ||

ಬಹಳವಲ್ಲ ತುಸು ಬಂದವರಿಗೆ ಕೊಟ್ಟ ಅನಸ್ತಾನ ವಿರಳ
ಕೊಡದಿದ್ರ ಬಹಳ ಚಂಡಾಳ
ಎಷ್ಟು ಹೇಳಲಿ ರೈತನ ಕೀರ್ತಿ ಹಗಲಿರುಳು
ವೇಳೆ ವೇಳೆಗೆ ತಿನುದಿಲ್ಲ ಕೂಳ ||

|| ಏರ ||

ಅಗಣಿತ ಲೆಕ್ಕ ಅಖಂಡ ವಸ್ತು ಅವನಲ್ಲಿ ಇರುವದು
ವಿಚಾರ ಮಾಡಿದರ ಆಚಾರ ತಿಳುತೈತಿ ಎಲ್ಲರೊಳಗ ದೊಡ್ಡವ ರೈತ ||ಗೀಗೀ|| ಚೌಕ 3||
ನಿಷ್ಟುರ ಬಹಳ ನಿರ್ಬಂಧ ಮಾಡ್ಯಾನೊ ಮುಂಗಡ ಹಾಕ್ತಾನೊ ಉರ್ಲ
ನಿಮ್ಮಪ್ಪನ ಚಾಕ್ರಿ ಅಲ್ಲೇಲೊ ಮಗನೆ ಕರಸಿ ಕೇಳಲಿಕ್ಕ ಹಗಲೆಲ್ಲ
ಹತ್ತಿ ಬಿತ್ತಿ ಅವ ಅಡತಿಗೊಯ್ದರ ಕಸಗೊಂಡು ಕುಂತಾರೊ ಅಡತ್ಯವರೆಲ್ಲ
ಅಡತ ಜಕಾತಿ ಹಮಾಲಿ ಕೊಡಬೇಕು ಧರ್ಮಾದಾವ ಇಟ್ಟಾರೊ ಮ್ಯಾಲ
ಅಷ್ಟು ಇಷ್ಟು ಎಲ್ಲ ಕಷ್ಟವಾಗಿಸಿ ಎಷ್ಟು ಜೋರ ಮಾಡ್ತಾರೋ ರೈತನ ಮ್ಯಾಲ
ಹರ‍್ಯಾವ ಒಳ್ಳ್ಯಾವ ತಗೋತಾರೊ ರೈತನ ಬದಕಿಗೇನ ಬ್ಯಾನಿಲ್ಲ

|| ಚ್ಯಾಲ ||

ಈಗ ನಿಮ್ಮ ಮನಸಿನೊಳಗೂ ವಿಚಾರ ತಿಳಿದೂ ದಾರಿ ಹಿಡಿದು ನಡೆಯಿರಿ
ರೈತನ ಉಪ್ಪ ಉಣತೀರಿ
ಒಂದೇ ಮಾತಲಿ ಹೊಂದಿಕೊಂಡು ಬಾಳಿರಿ
ಭಲೇ ಬಂಗಾರ ಬೆಳೆದು ಬೇಕಾದುದು ಉಣ್ಣಿರಿ

||ಏರ ||

ಪ್ರಭು ಕವಿಗಾರ ಪದಾ ಹೇಳತಾನೊ ಅವನ ಮ್ಯಾಲ ರೈತನ ಹಸ್ತ
ವಿಚಾರ ಮಾಡಿದರ ಆಚಾರ ತಿಳುತೈತಿ ಎಲ್ಲರೊಳಗ ದೊಡ್ಡವ ರೈತ ||ಗೀಗೀ|| ಚೌಕ 4||

✦ ✦ ✦

6. ರೈತನ ನಂಬಿಗೆ-ಸಂಪ್ರದಾಯಗಳು

ವಿಶ್ವದಲ್ಲಿ ನಂಬಿಕೆಗಳಿಲ್ಲದ ಸಮಾಜವಿಲ್ಲ. ಉದ್ಯೋಗ-ವ್ಯವಸಾಯ, ಮದುವೆ-ಮುಂಜಿ, ಹಬ್ಬ-ಹರಿದಿನ ಹೀಗೆ ಯಾವ ಕ್ಷೇತ್ರವನ್ನು ತೆಗೆದುಕೊಂಡರೂ ಅಲ್ಲಿ ನಂಬಿಕೆಗಳು ಹಾಸು-ಹೊಕ್ಕಾಗಿವೆ. ಪಟ್ಟಣದ ಸುಶಿಕ್ಷಿತರೇ ಇರಲಿ, ಹಳ್ಳಿಯ ಅಶಿಕ್ಷಿತರೇ ಇರಲಿ - ಎಲ್ಲರೂ ನಂಬಿಕೆಗಳನ್ನು ಆಶ್ರಯಿಸಿಕೊಂಡೇ ಬಂದವರಾಗಿದ್ದಾರೆ. ಒಟ್ಟು ಸಮಾಜವನ್ನಾವರಿಸಿದ ಈ ನಂಬಿಕೆಗಳು ಕ್ರಮೇಣ ಆಚರಣೆ, ಸಂಪ್ರದಾಯಗಳಾಗಿ ಬೇರುಬಿಡುತ್ತವೆ. ಮತ್ತೆ ಕೆಲವು ನಂಬಿಕೆಗಳು ಮಾಯ ಮಾಟಗಳಾಗಿ ರೂಪುತಳೆಯುತ್ತವೆ. ಪ್ರಪಂಚದ ವಿಭಿನ್ನ ಪೂಜಾ ಪದ್ಧತಿ, ಪ್ರಾಣಿಬಲಿ, ವಿವಾಹಾದಿ ಮಂಗಳೋತ್ಸವಗಳಲ್ಲಿಯ ನಿಷೇಧಗಳು ಬೇರೆ ಬೇರೆ ಸಾಮಾಜಿಕ ರೀತಿ ನೀತಿಗಳು ನಂಬಿಕೆಗಳ ತಳಹದಿಯ ಮೇಲೆಯೇ ನಿಂತಿವೆ.

ವಿಷ್ಣುವಿನ ಮತ್ಸಕೂರ್ಮಾದಿ ದಶಾವತಾರ ಲೀಲೆಗಳನ್ನು ವಿಶ್ಲೇಷಿಸಿದರೆ ಪ್ರಾಣಿ ಮಾನವನಾಗಿ ವಿಕಾಸಗೊಂಡ ವಿವಿಧ ಹಂತಗಳ ಚರಿತ್ರೆ ಗೊತ್ತಾಗುವದು. ಆದ್ದರಿಂದಲೇ ಪ್ರಾಣಿ-ಮಾನವ ಸಂಬಂಧವನ್ನು ತಿಳಿಸಿದ ಆಧುನಿಕ ವಿಜ್ಞಾನಿ ಡಾರ್ವಿನ್ನನ ವಿಕಾಸವಾದ ತತ್ವಕ್ಕೂ, ಸನಾತನ ದಶಾವತಾರ ಲೀಲೆಗೂ ನಿಕಟ ಸಂಬಂಧವಿರುವುದನ್ನು ಕಾಣುತ್ತೇವೆ. ಜಲಚರ ಜೀವಿ ಹಂತ ಹಂತವಾಗಿ ವಿಕಾಸಗೊಳ್ಳುತ್ತ ನಿಸರ್ಗದ ಮಡಿಲಲ್ಲಿ ತನ್ನ ಬದುಕನ್ನು ರೂಪಿಸಿಗೊಂಡ ಮಾನವ, ತನ್ನ ಸುತ್ತಲಿನ ಪ್ರಕೃತಿಯ ಜೊತೆಗೆ ಒಂದಲ್ಲ ಒಂದು ವಿಧದಲ್ಲಿ ಸಂಬಂಧವನ್ನು ಬೆಸೆದುಕೊಂಡೇ ಬಾಳುತ್ತಿದ್ದಾನೆ. ಅಹಾರ, ನಿದ್ರೆ, ಮೈಥುನಗಳಲ್ಲಿ ಮಾನವ ಹಾಗೂ ಇತರ ಪ್ರಾಣಿಗಳಲ್ಲಿ ವ್ಯತ್ಯಾಸವಿಲ್ಲ.

ಆದಿಮಾನವ ಬದುಕಿನ ಪ್ರಥಮ ಅವಸ್ಥೆಯಲ್ಲಿ ಪ್ರಾಣಿಗಳನ್ನು ಬೇಟೆಯಾಡಿ ಹಸಿವನ್ನು ಹಿಂಗಿಸಿಕೊಳ್ಳುತ್ತಿದ್ದ. ಕೆಲವು ಕಾಲದ ನಂತರ ಅವುಗಳಲ್ಲಿ ಕೆಲವು ಪ್ರಾಣಿಗಳು ತನ್ನ ಅಭಿವೃದ್ಧಿಗೆ ಕಾರಣವೆಂದರಿತು ಅವನ್ನು ಕೊಲ್ಲುವ ತನ್ನ ಪ್ರವೃತ್ತಿಯನ್ನು ಬಿಟ್ಟು ಅವುಗಳನ್ನು ಸಾಕಿ, ಪಳಗಿಸಿ ಅವುಗಳ ಪೂರ್ಣ ಪ್ರಯೋಜನವನ್ನು ಪಡೆಯಹತ್ತಿದನು. ಹಾಗೆಯೇ ಕೆಲವು ಹಿಂಸ್ರಪಶುಗಳನ್ನು ಬೇಟೆಯಾಡಿ ಕೊಂದುಹಾಕಿದ. ಹೀಗೆ ಬೇಟೆಯಾಡುವಾಗ ಕೊಲ್ಲಲು ಅಸಾಧ್ಯವಾದ ಪ್ರಾಣಿಗಳನ್ನು ಕಂಡು ಭಯಭೀತನಾಗಿ ಅವುಗಳಿಗೆ ಕೈಮುಗಿದು ತನ್ನನ್ನು ರಕ್ಷಿಸೆಂದು ಪ್ರಾರ್ಥಿಸಿಕೊಂಡ.

ಪ್ರಾಚೀನ ಕಾಲದ ಕಾಡುಮಾನವನಲ್ಲಿಯೂ ಕೆಲವು ನಂಬಿಕೆಗಳು ಇದ್ದಿರಲೇಬೇಕು. ಅವು ಇಂದು ಮಾರ್ಪಡಾಗಿರುವ ಸಾಧ್ಯತೆಯೂ ಇಲ್ಲದಿಲ್ಲ. ಗುಡುಗು, ಸಿಡಿಲು,

ಬಿರುಗಾಳಿ, ಬೋರ್ಗರೆವ ಸಾಗರ, ಬಿಸಿಲಿನ ತಾಪ, ಚಳಿಯ ಬಾಧೆ- ಇವನ್ನು ಎದುರಿಸಿ ಅವನು ದಿಕ್ಕುಕಾಣದಂತಾದ, ಹಾಗೆಯೇ ಬಾಳಿನಲ್ಲಿ ಸಂಭವಿಸುವ ಹುಟ್ಟು -ಸಾವು, ರೋಗ-ಮುಪ್ಪು ಇವುಗಳಿಂದ ಭಯಭೀತನಾಗಿ ತನ್ನ ಶಕ್ತಿ ಪರಿಮಿತವೆಂದು ಅನಿಸಿರಬೇಕು. ಇದರಿಂದಾಗಿ ಅವನಿಗೆ ಅದೃಶ್ಯ ಶಕ್ತಿಯ (ದೇವ) ಅಸ್ತಿತ್ವದ ಅನುಭವ ಬಂದಂತಿದೆ. ಇದನ್ನು ಸರ್ವಚೇತನವಾದ (Animism) ಎಂದು ಕರೆಯಲಾಗುವುದು.

ರಾತ್ರಿಯಲ್ಲಿ ಸಂಚರಿಸುವಾಗ ಮರದ ನೆರಳು, ಪ್ರಾಣಿಗಳ ನೆರಳು ಕಂಡು ಹೆದರಿದ ಮಾನವನು ರಾಕ್ಷಸ ದೆವ್ವಗಳ ವಿಕಾರ ರೂಪಗಳನ್ನು ಕಲ್ಪಿಸಿಕೊಂಡಂತಿದೆ. ರಾತ್ರಿಯ ಭೀಕರ ಸ್ವಪ್ನಗಳು ಈ ನಂಬಿಕೆಯನ್ನು ಇನ್ನಷ್ಟು ಉಲ್ಬಣಗೊಳಿಸಿರಬೇಕು. ಕಾಡುಪ್ರಾಣಿಗಳಾದ ಹುಲಿ, ಸಿಂಹ, ಭಯಂಕರ ಸರ್ಪ ಇವುಗಳ ಪೂಜೆಗೆ ಇವುಗಳ ಬಗೆಗಿರುವ ಭಯವೇ ಕಾರಣವಾಗಿದೆ. ಅದೇನೆ ಇದ್ದರೂ, ಮಾನವನಲ್ಲಿರುವ ಅಜ್ಞಾನವೇ ಇವಕ್ಕೆಲ್ಲ ಮೂಲ ಕಾರಣವಾಗಿದೆ. ದೆವ್ವಗಳನ್ನು ನೋಡಿದವರೂ, ಅವುಗಳ ಅಳುವನ್ನು ಕೇಳಿದವರೂ ಇದ್ದಾರಂತೆ ! ಅವು ಕತ್ತು ಹಿಸುಕಿ ಕೆಲವರನ್ನು ಕೊಂದ ಉದಾಹರಣೆಗಳೂ ಇವೆ ! ಇವೆಲ್ಲ ದೆವ್ವಗಳ ಭೀತಿಯ ಭೀಕರ ಪರಿಣಾಮಗಳು. ಇಂತಹ ಪ್ರಸಂಗಗಳನ್ನು ದುರುಪಯೋಗ ಪಡಿಸಿಕೊಂಡು ದೆವ್ವ ಬಿಡಿಸುವವರು, ಮಾಂತ್ರಿಕರು ತಮ್ಮ ಲಾಭಕ್ಕಾಗಿ, ಉದ್ದೇಶ ಸಾಧನೆಗಾಗಿ ಮತ್ತೆ ಇಂತಹ ಕೆಲವು ಘಟನೆಗಳನ್ನು ಸೃಷ್ಟಿಸಿ ಹೇಳುವರು. ಇದಕ್ಕೆಲ್ಲ ಜನರಲ್ಲಿರುವ ಅಜ್ಞಾನ ಮತ್ತು ಮೂಢನಂಬಿಕೆಗಳೇ ಕಾರಣ. ಅತಿಮಾನುಷ ನಂಬಿಕೆಗಳ ಉದಾಹರಣೆಗಳನ್ನು ಇಲ್ಲಿ ಕೊಡಲಾಗಿದೆ.

1) ರಾತ್ರಿ ಹೊತ್ತಿನಲ್ಲಿ ಗೋಡೆ ಇಲ್ಲವೆ ನೆಲದ ಮೇಲೆ ಇದ್ದಲಿಯಿಂದ ಬರೆದರೆ ದೆವ್ವಗಳು ಕಾಣಿಸಿಕೊಳ್ಳುತ್ತವೆ.
2) ವಿಶೇಷವಾಗಿ ದೆವ್ವಗಳು ಹುಣಸೇ ಮರದಲ್ಲಿ ವಾಸಿಸುತ್ತವೆ.
3) ಮನೆಯ ಬಾಗಿಲ ಮೇಲೆ 'ನಾಳೆ ಬಾ' ಎಂದು ಬರೆದರೆ ದೆವ್ವಗಳು ಬಂದು ತಿರುಗಿ ಹೋಗುತ್ತವೆ.
4) ಅಮವಾಸ್ಯೆಯ ದಿನ ದೆವ್ವಗಳು ಹೆಚ್ಚು ಕಾಡುತ್ತವೆ.
5) ದೆವ್ವ ಬಿಡಿಸುವಾಗ ಪ್ರಾಯದವರು ಬದಿಯಲ್ಲಿದ್ದರೆ ಅವು ಅವರನ್ನು ಹಿಡಿದುಕೊಳ್ಳುತ್ತವೆ.
6) ದೆವ್ವಗಳ ಕೂದಲು ಕತ್ತರಿಸಿ ಅವುಗಳ ಕೈಗೆ ಸಿಗದಂತೆ ಬಚ್ಚಿಟ್ಟುಕೊಂಡರೆ ಅವು ನಮ್ಮ ಆಜ್ಞಾಧಾರಕವಾಗಿ ವರ್ತಿಸುತ್ತವೆ.

7) ಮಲಗುವಾಗ ತಲೆಯ ಬಳಿ ಪೊರಕೆಯನ್ನು ಹಾಗೂ ಚಪ್ಪಲಿಯನ್ನು ಇಟ್ಟುಕೊಂಡು ಮಲಗಿದರೆ ಯಾವ ದುಷ್ಟ ಶಕ್ತಿಗಳೂ ಸಮೀಪ ಸುಳಿಯುವುದಿಲ್ಲ.

8) ದೊಡ್ಡವರಾದಾಗಲೂ ರಾತ್ರಿ ಹಾಸಿಗೆಯಲ್ಲಿ ಮೂತ್ರವಿಸರ್ಜಿಸುತ್ತಿದ್ದರೆ ಆಂಜನೇಯ ಯಂತ್ರ ಕಟ್ಟಿಸಿಕೊಳ್ಳಬೇಕು.

9) ಜುಟ್ಟು ತೆಗೆದ ತೆಂಗಿನಕಾಯಿಯನ್ನು ದೇವರ ಪೂಜೆಗೆ ಇಡಬಾರದು.

10) ದೇವರಿಗೆ ಹಸುವಿನ ಹಾಲನ್ನೇ ಉಪಯೋಗಿಸಬೇಕು ('ಹಸು' ನಮಗೆ ಪೂಜ್ಯ ಎಂಬ ಕಾರಣವಿದೆ)

11) ದೀಪ ಹಚ್ಚಿದೊಡನೆ ಸಾಯಂಕಾಲ ಬಾಗಿಲು ಮುಚ್ಚಬಾರದು. ಅದು ಲಕ್ಷ್ಮೀ ಬರುವ ಹೊತ್ತು.

12) ದಕ್ಷಿಣೆ ಕೊಡದೆ ತೀರ್ಥ ತೆಗೆದುಕೊಳ್ಳಬಾರದು.

13) ದೇವರಿಗೆ ಏರಿಸುವ ಹೂವಿನ ವಾಸನೆ ತೆಗೆದುಕೊಳ್ಳಬಾರದು. ವಾಸನೆ ತೆಗೆದುಕೊಂಡರೆ ಅದು ಎಂಜಲಾದಂತೆ.

14) ಪಾದರಕ್ಷೆ ಧರಿಸಿ ಗಂಗೆಯಲ್ಲಿ ಹೋಗಬಾರದು.

15) ದೇವ ದರ್ಶನ ಪಡೆದ ಮೇಲೆ ಸ್ವಲ್ಪ ಸಮಯ ಅಲ್ಲಿ ಕುಳಿತು ಬರಬೇಕು. ಇಲ್ಲವಾದರೆ ದರ್ಶನ ಫಲವಿಲ್ಲ.

16) ದೀಪ ಹಚ್ಚುವ ಸಮಯದಲ್ಲಿ ಭೂದೇವಿ ತನ್ನ ಮಕ್ಕಳಿಗೆ ಹಾಲು ಕುಡಿಸುತ್ತಿರುವದರಿಂದ ಆಗ ಕುಣಿದಾಡಬಾರದು, ಹಾಗೆ ಮಾಡಿದರೆ ಹಾಲಿನಲ್ಲಿ ಮಣ್ಣು ಬೀಳುತ್ತದೆ.

17) ಪೂಜೆ ಕಟ್ಟಿಸಿದಾಗ ದೇವರ ಮೇಲಿನ ಹೂವು ಬಲಗಡೆಗೆ ಬಿದ್ದರೆ ನಾವು ಯೋಚಿಸಿದ ಕಾರ್ಯ ಆಗುತ್ತದೆ.

18) ಶಂಕರನ ಪೂಜೆಗೆ ತುಂಬೆ ಹೂವು ತುಂಬ ಶ್ರೇಷ್ಠವಾದುದು.

19) ತೀರ್ಥ ಮತ್ತು ಪ್ರಸಾದದಲ್ಲಿ ರುಚಿ ನೋಡಬಾರದು.

20) ತೀರ್ಥ ಸ್ವೀಕರಿಸಿದ ನಂತರ ಕೈಯನ್ನು ಬಟ್ಟೆಗೆ ಒರೆಸದೆ ತಲೆಗೆ ಸವರಿಕೊಳ್ಳಬೇಕು.

21) ಶಿವರಾತ್ರಿ ದಿನ ಶಿವನ ದರ್ಶನ ಮಾಡದಿದ್ದರೆ ಕತ್ತೆಯ ಜನ್ಮ ಬರುತ್ತದೆ.

22) ತೆಂಗಿನಕಾಯಿಯನ್ನು ಒಡೆಯಬಾರದು. ಅದು ಮುಕ್ಕಣ್ಣ.

ಅನಿಷ್ಠ ನಂಬಿಕೆಗಳು:

1) ಭಾದ್ರಪದ ಮಾಸದಲ್ಲಿ ಹಸು, ಮಾಘ ಮಾಸದಲ್ಲಿ ಎಮ್ಮೆ, ಶ್ರಾವಣ ಮಾಸದಲ್ಲಿ ಕುದುರೆ ಈಯಬಾರದು. ಒಂದು ವೇಳೆ ಇಂತಹ ಘಟನೆ ನಡೆದರೆ ಅವುಗಳ ಒಡೆಯನು ಸಾಯುತ್ತಾನೆ.

2) ಅನೇಕ ಪ್ರಾಣಿಗಳು ಮುಂದಾಗುವ ಅನಾಹುತವನ್ನು ಮೊದಲೇ ಸೂಚಿಸುತ್ತವೆ. ಮುಳುಗುವ ಹಡಗಿನಿಂದ ಇಲಿಗಳು ಮೊದಲೇ ಓಡಿಹೋಗುತ್ತವೆ. ದನಗಳು ಮತ್ತು ನಾಯಿಗಳು ತಮ್ಮ ಯಜಮಾನನಿಗೆ ಕೇಡಾಗುವುದನ್ನು ವಿಚಿತ್ರವಾಗಿ ವರ್ತಿಸಿ ತಿಳಿಸುತ್ತವೆ. ನಾಯಿ ಅತ್ತರೆ, ಎಮ್ಮೆ ತಿವಿದರೆ, ಆಕಳು ರೈತನ ಮುಖಕ್ಕೆ ಮೂರು ಸಾರಿ ಒದರಿದರೆ, ರಾತ್ರಿಯಲ್ಲಿ ಗೂಬೆ ವಿಕಾರವಾಗಿ ಕೂಗುತ್ತಿದ್ದರೆ ಮನೆಯಲ್ಲಿ ಯಾರಾದರೂ ಸಾಯುತ್ತಾರೆ.

ಕೃಷಿ ಆಧಾರಿತ ನಂಬಿಕೆಗಳು:

1) ಹತ್ತಿ ಹೊಲದಾಗ ಮುತ್ತಿನ ಗಿಡಾ ಇದ್ದರೂ ಕಿತ್ತಿ ಒಗೀಬೇಕು.

2) ಹತ್ತಿ ಬೆಳೆಗೆ ಹತ್ತು ಕುತ್ತು.

3) ಕೃಷಿ ಕೆಡುಗುಪೇಕ್ಷೆಯಲ್ಲಿ

4) ಎಡೆಯಲ್ಲಿ ಎತ್ತು ಹೊಡೆಯಬಾರದು, ತವರಿನಲ್ಲಿ ಹೆಂಡತಿಯನ್ನು ಬಡಿಯಬಾರದು.

5) ಕುಲಕ್ಕೆ ಕುಲ ಮೂಲ ಹೊಲಕ್ಕೆ ಕುಂಟೆತ್ತು ಮೂಲ.

6) ನನ್ನ ನೀರಾಗ ನಿಂದರಸಿದರ ನಿನ್ನ ಊರಾಗ ನಿಂದಿರಸ್ತೀನಿ. (ಬಾಳೆ ಹೇಳುವದಂತೆ)

7) ತೆಂಗಿನಿಂದ ಬಡತನ ಹಿಂಗುತ್ತದೆ.

8) ಎತ್ತ ಎದಿನೋಡಿ ಖರೀದಿಸು, ಆಕಳು ಕುಂಡಿ ನೋಡಿ ಖರೀದಿಸು.

9) ಸೇಂಗ್ಯಾ ಬಿತ್ತಿದವ ಮಂಗ್ಯಾ ಅಂತ.

10) ಹಸಿ ಹಣ್ಣು ಮಾರಬೇಕು, ಬಿಸಿ ಬೆಲ್ಲ ಮಾರಬೇಕು.

11) ಅಡವು ಬೆಳೆ ಕೆಟ್ಟು ಹೋಯ್ತು, ಅಂಗಲ ಬೆಳೆ ಕೊಟ್ಟು ಹೋಯ್ತು.

12) ಹಳಿ ಎತ್ತ ಹೊಳ್ಯಾಗ ಹೂಡು.

13) ಕರಿ ಎತ್ತ ಅಲ್ಲ, ಕರ್ಲ ಹೊಲ ಅಲ್ಲ.
14) ಕರಕಿ ಹೊಲ, ನೆರಿಕಿ ಮನಿ, ಕಿರಿಕಿರಿ ಹೆಣ್ತಿ ಇದ್ದರೆ ಬಡತನ ತಪ್ಪದು.
15) ಬೀಳ ಹೊಲದ ಮಗ್ಗಲ ಹೊಲ ಇರಬಾರದು, ಹಾಳಮನಿ ಮಗ್ಗಲ ಮನಿ ಇರಬಾರದು.
16) ಹೋರಿನ ನಂಬಿ ಹೊಲ ಮಾಡಬಾರದು, ಪೋರಿನ ನಂಬಿ ಬೇರೆ ಆಗಬಾರದು
17) ಹಳ್ಳ್ಯಾಗ ಹೊಲ ಇರಬೇಕು ಪ್ಯಾಟ್ಯಾಗ ಮನಿ ಇರಬೇಕು.
18) ಕರಕಿ ಹೊಲ ಇರಬಾರದು, ಬೆರಿಕಿ ಹೆಂಡತಿ ಇರಬಾರದು
19) ಕೊಂಡ ವಾಡೆಧಿಕ ಹಾಕುವ ದನ, ದಂಡಕೊಡುವ ಮಗ ಇರಬಾರದು
20) ಹಳ್ಳದ ಹೊಲ ಇರಬೇಕು, ಮೆಳ್ಳಗಣ್ಣಿನ ಸೊಸಿ ಇರಬೇಕು.
21) ಅಳಿಯ ಮಾವ ಎತ್ತು, ಬನ್ನಿ ನಗ, ಮನಿಮಗನ ಬೇಸಾಯ ಇದ್ದರ ಬಡತನ ದೂರ.
22) ಮಳಿ ಬರೂದಿಲ್ಲಾಂತ ಕಂಬಳಿ ಬಿಟ್ಟು ಹೋಗಬಾರದು ಕೆಸರಾಗ್ಯಾದಂತ ಮೆಟ್ಟು ಬಿಟ್ಟು ಹೋಗಬಾರದು. ಹಸಿವೆ ಆಗುವುದಿಲ್ಲವೆಂದು ಬುತ್ತಿ ಬಿಟ್ಟು ಹೋಗಬಾರದು.
23) ಮೂರು ವರ್ಷ ಬೆಳೆಸಿದರ ನೂರು ವರ್ಷ ಬದುಕಿಸತಾದ (ಎಲೆಬಳ್ಳಿ)
24) ಕರಿ ಎತ್ತ ಇರಬಾರದು ಕಾಡಿಗೆ ಕಣ್ಣಿನ ಸೊಸಿ ಇರಬಾರದು.
25) ಬರದಾಗ ಬಾರಿಕಾಯಿ, ಸುಕಾಲದಾಗ ಉಣಚೆ ಕಾಯಿ.
26) ಆರಿದ್ರ ಮಳೆಗೆ ಮೆಣಸಿನ ಕಾಯಿ ಅಗಿ ಹಚ್ಚಬಾರದು.
27) ಯಾವ ಬಿತ್ತಿಗೆಯನ್ನೂ ಶನಿವಾರ ಆರಂಭಿಸಬಾರದು.
28) ತೊಗಲಗೊಂಬಿ ಆಟ ಆಡಿಸಿದರ ಮಳಿ ಬರ್ತಾದ.
29) 'ಬಣಜಿಗ್ಯಾನ ಮಿಂಡ' ಕಾಣಿಸಿದ ಹೊತ್ತಿನಲ್ಲಿ ಪ್ರಯಾಣ ಮಾಡಬಾರದು.
30) ಆಷಾಢ ಗಾಳಿ(ಶುಷ್ಕ ಗಾಳಿ) ಬೀಸುವಾಗ ದನ-ಕರುಗಳಿಗೆ ರೋಗ ಮತ್ತು ಜನರಿಗೆ ಜಡ್ಡು -ಆಪತ್ತು.
31) ಕಣಿಕೆಯ ಬಣವಿಯನ್ನು ಪೂರ್ವ-ಪಶ್ಚಿಮವಾಗಿಯೇ ಒಟ್ಟಬೇಕು.
32) ಹಂತಿಗೆ ಎತ್ತು ಆಕಳುಗಳನ್ನು ಮಾತ್ರ ಉಪಯೋಗಿಸಬೇಕು, ಎಮ್ಮೆ ಕೋಣಗಳನ್ನು ಬಳಸಬಾರದು.

33) ರಾಸಿ ತುಂಬಿದ ಮೇಲೆ ಕಣದಲ್ಲಿ ಮೆಟ್ಟನಾಲಿಗೆ ಇಡಬಾರದು.

ಗಿಡಮರಗಳನ್ನು ಕುರಿತ ನಂಬಿಕೆಗಳು:

1) ಅರಳಿ ಮರದಲ್ಲಿ ಬ್ರಹ್ಮ ವಿಷ್ಣು ಇರುವುದರಿಂದ ಅದಕ್ಕೆ ಒದೆಯಬಾರದು.

2) ಎಕ್ಕೆ ಗಿಡ ಇಲ್ಲವೆ ಬನ್ನಿ ಮರ ಇದ್ದಲ್ಲಿ ಕಣ ಮಾಡಬೇಕು.

3) ಎಕ್ಕೆ, ಬನ್ನಿ, ಇಂಗಳ, ಆರಿಗ್ಯಾ, ಬಿಲ್ವಪತ್ರಿ, ಮಾವಿನಮರ–ಲಗ್ನವಾಗದೆ ಸತ್ತವನಿಗೆ ಎಕ್ಕೆ ಬಾಸಿಂಗ ಕಟ್ಟಿ ಮದುವೆ ಮಾಡಬೇಕು.

4) ನುಗ್ಗೆ ಗಿಡವನ್ನು ಮನೆಯ ಅಂಗಳ ಹಾಗೂ ಹಿತ್ತಲಲ್ಲಿ ಬೆಳೆಸಬಾರದು.

5) ಬಾಳೆಯನ್ನು ಮನೆಯ ಹಿತ್ತಲಲ್ಲಿ ಹಾಗೂ ಅಂಗಳದಲ್ಲಿ ಬೆಳೆಸಬಾರದು.

6) ಬೆಳಿಗ್ಗೆ ಎದ್ದೊಡನೆ ಸಿರಸಲ ಮರವನ್ನು ನೋಡಬಾರದು.

7) ಎಕ್ಕೆಗಿಡ ಇರುವ ಭೂಮಿಯಲ್ಲಿ ನೀರು ಇರುತ್ತದೆ.

8) ಹೈನು ತಿರುವಿಕೊಂಡಿದ್ದಲ್ಲಿ ಇಂಗಳ ಕಟ್ಟಿಗೆ ತಂದು ಆಕಳ ಗೂಟದ ಬಳಿಯಲ್ಲಿ ಹೊಡೆದರೆ ಮಾಟ, ಮಂತ್ರ ನಡೆಯುವುದಿಲ್ಲ.

9) ಕಣದ ಸುತ್ತು ದಾಂಗಡಿಗ್ಯಾನ ಬಳ್ಳಿ ಇರಬಾರದು.

10) ಆರಿಗ್ಯಾನ ಮರದಿಂದಲೇ ರಾಗೋಲ ದಿಂಡ ಕೆತ್ತಿಸಬೇಕು.

11) ಬನ್ನಿ ಗಿಡ ಇದ್ದಲ್ಲಿ ಬಾವಿ ತೋಡಿದರೆ ನೀರು ನಿಶ್ಚಿತ.

12) ಬಿಲ್ವಪತ್ರಿ ಗಿಡ ಕಡಿಯಬಾರದು.

13) ಮಾವಿನ ಗಿಡಕ್ಕೆ ಕಾಯಿ ಆದ ಮೇಲೆ ಮದುವೆ ಮಾಡುವರು.

14) ಇಂಗಳ ಕಟ್ಟಿಗೆ ಉರಿದರೆ ತಿಂಗಳಿಗೊಂದು ಹೆಣ.

15) ಬೆಳಿಗ್ಗೆ ಎದ್ದೊಡನೆ ಬನ್ನಿ ಗಿಡ ನೋಡಿದರೆ ಶುಭ.

16) ಬಂಜೆಯರು ಎಕ್ಕೆಗಿಡ ಪೂಜಿಸಿದರೆ ಮಕ್ಕಳಾಗುತ್ತವೆ.

ತಿಥಿ, ವಾರ, ನಕ್ಷತ್ರ ಕುರಿತ ನಂಬಿಕೆಗಳು:

1) ಅರವತ್ತು ಸಂವತ್ಸರಗಳಲ್ಲಿ ಬ್ರಹ್ಮನವು ಮೊದಲ ಇಪ್ಪತ್ತು ಸಂವತ್ಸರಗಳು (ಪ್ರಭವದಿಂದ ವ್ಯಾಯವರೆಗೆ) ಇದು ಉತ್ತಮಕಾಲ, ಇದಕ್ಕೆ 'ಬ್ರಹ್ಮ ಬೀಸಕಿ' ಎನ್ನುವರು.

ನಡುವಿನ ಇಪ್ಪತ್ತು ಸಂವತ್ಸರಗಳು (ಸರ್ವಜಿತುದಿಂದ ಪರಾಭವವರೆಗೆ) ವಿಷ್ಣುವಿನವು. ಇದು ಮಧ್ಯಮಕಾಲ. ಇದಕ್ಕೆ 'ವಿಷ್ಣು ಬೀಸಕಿ' ಕಾಲ ಎನ್ನುವರು. ಕೊನೆಯ ಇಪ್ಪತ್ತು ಸಂವತ್ಸರಗಳು (ಪ್ಲವಂಗದಿಂದ ಕ್ಷಯದವರೆಗೆ) ರುದ್ರನವು ಇದು ಕಷ್ಟಕಾಲ. ಇದಕ್ಕೆ 'ರುದ್ರ ಬೀಸಕಿ' ಎನ್ನುವರು. ಬೀಸಕಿ ಎನ್ನುವದು ಮರಾಠಿ ಪದ. ರೈತರು ಇದನ್ನು ಬೆಸ್ಕಿ ಎಂದು ತಪ್ಪಾಗಿ ಹೇಳುತ್ತಾರೆ.

2) ಪಂಚಕವಿದ್ದಾಗ ಕಣದ ಕೆಲಸ, ಕುಳಬಾನ, ಬಣಮಿ ಒಟ್ಟುವುದು, ಹೊರಸು ಹೆಣೆಯುವುದು, ಹಗೆಯಲ್ಲಿ ಕಾಳು ತುಂಬುವುದು ಈ ಕಾರ್ಯಕ್ಕೆ ನಿಷೇಧ.

3) ಆಯಾ ವಾರಗಳಲ್ಲಿ ಎದುರಾಗುವ ರಾಹು ನೋಡಿ ಬೇಸಾಯ ಕಾರ್ಯ ಆರಂಭಿಸಬೇಕು. ಇಲ್ಲಿ ರಾಹು ಮತ್ತು ಅವುಗಳ ದಿಕ್ಕುಗಳನ್ನು ಈ ಮುಂದೆ ಕೊಡಲಾಗಿದೆ.

ವಾರಗಳು	ದಿಕ್ಕು
ರವಿವಾರ,ಗುರುವಾರ	ಪೂರ್ವದಿಕ್ಕಿಗೆ
ಸೋಮವಾರ, ಶುಕ್ರವಾರ	ದಕ್ಷಿಣಕ್ಕೆ
ಮಂಗಳವಾರ	ಪಶ್ಚಿಮಕ್ಕೆ(ಒಂಟಿರಾಹು)
ಬುಧವಾರ, ಶನಿವಾರ	ಉತ್ತರಕ್ಕೆ

4) ಕಾರಹುಣ್ಣಿಮೆಯ ದಿನ ದೇವಾಲಯದಲ್ಲಿರುವ ಗುಂಡು ಎತ್ತಿ ಮಳೆ ಬೆಳೆ ತಿಳಿಯುವರು.

5) ಸಂಕ್ರಾಂತಿಯಂದು ಕಣದಲ್ಲಿ ಹೋಗಬಾರದು.

ಹಬ್ಬ ಹುಣ್ಣಿಮೆ ಕುರಿತ ನಂಬಿಕೆಗಳು:

1) ಅಮವಾಸೆಯ ದಿವಸ ಆಕಳು ಈದರೆ (ಜನ್ನಿಗಿ) ದೇವರಿಗೆ ದಾನಮಾಡಬೇಕು

2) ಕಾರ ಹುಣ್ಣಿಮೆಯ ದಿವಸ ಕರಿ ಹರಿಯುವಾಗ ಊರ ಅಗಸಿಯ ದಿಕ್ಕು ಹಾಗೂ ರಾಹು ಒಂದೇ ಆಗಿದ್ದರೆ ಸೂರ್ಯ ಮುಳುಗುವ ತನಕ ಕರಿ ಹರಿಯುವುದಿಲ್ಲ.

3) ಹೋಳಿ ಹುಣ್ಣಿಮೆಯ ಕಾಮನ ಬೂದಿಯನ್ನು ಬಿತ್ತುವ ಬೀಜದಲ್ಲಿ ಕೂಡಿಸಿದರೆ ಕ್ರಿಮಿಗಳಿಂದ ಬೀಜ ಕೆಡುವುದಿಲ್ಲ.

ದಿಕ್ಕು –ದೆಸೆ ಕುರಿತಾದ ನಂಬಿಕೆಗಳು:

1) ಗಂಗಾದಿಕ್ಕಿನಿಂದ ಬಿತ್ತಿದರೆ ಬೆಳೆ ಹೆಚ್ಚು ಬರುವುದು.

2) ಹೊಲದಲ್ಲಿ ಗಳೆಯನ್ನು ಪಶ್ಚಿಮಕ್ಕೆ ನಿಲ್ಲಿಸಬಾರದು.

3) ಬಿಳಿ ಎರಳೆ ಹೊಲದಲ್ಲಿ ಮೇಯ್ದು ಪಶ್ಚಿಮಕ್ಕೆ ಹೋದರೆ ಬೆಳೆ ಹುಲುಸು.

4) ಮಟ್ಟಿಯ ಬಾಯಿ ಪಶ್ಚಿಮ ಇಲ್ಲವೆ ದಕ್ಷಿಣ ಕಡೆಯಿರಬೇಕು.

5) ಹೊಲ ಎಡಕ್ಕೆ ಮಾಡಿ ಬಿತ್ತಬಾರದು.

6) ಹೊಲಕ್ಕೆ ಬರುವಾಗ ರಾಹು ಎದುರಾದರೆ ಎತ್ತುಗಳನ್ನು ಹೂಡಕೂಡದು.

7) ಹೊಲದಲ್ಲಿ ಸಿಂಗ ಬಲಕ್ಕೆ ಹೋದರೆ ಶುಭ.

8) ಸುರಂಗ ಹಕ್ಕಿ ಎಡದಿಂದ ಬಲಕ್ಕೆ ಹಾದು ಹೊಗಬೇಕು.

9) ಚಿಗರಿಯು ಬಲಕ್ಕೆ ಹಾಯ್ದು ಹೋದರೆ ಶುಭ.

10) ಹಂತಿ ಕಟ್ಟುವಾಗ ಎತ್ತುಗಳು ಪೂರ್ವದಿಕ್ಕಿನಿಂದ ಕಣದಲ್ಲಿ ಇರಬೇಕು ಮತ್ತು ಗಂಗಿದಿಕ್ಕಿನಿಂದ ಹೊರಗೆ ಹೋಗಬೇಕು.

11) ಪೂರ್ವ ದಿಕ್ಕು ನೋಡಿ ಮದ ಒಡೆದರೆ ಉತ್ತಮ.

ಸಂಕೀರ್ಣ ನಂಬಿಕೆಗಳು:

1) ಇರುವೆ ಮೊಟ್ಟೆ ಕಟ್ಟಿದರೆ, ಬೆಕ್ಕು ಸೀತರೆ, ಕೋಳಿಯ ಮರಿಗಳು ಗಾಳಿಗೆದುರಾಗಿ ಪುಕ್ಕವನ್ನೆತ್ತಿ ನಿಂತರೆ, ಗುಬ್ಬಿ ನೀರಿನಲ್ಲಿ ಸ್ನಾನ ಮಾಡುತ್ತಿದ್ದರೆ, ಕಾಗೆಗಳು ಕೂಗುತ್ತ ಊರು ಸುತ್ತು ಹಾಕಿದರೆ, ಸಾಯಂಕಾಲ ಗೂಬೆ ಕೂಗಿದರೆ, ಕಪ್ಪೆಗಳು ಒಂದೇ ಸಮನೆ ಒಟಗುಟ್ಟ ಹತ್ತಿದರೆ ಮಳೆ ಬರುವುದು.

2) ನರಿಯ ಮುಖವನ್ನು ನೋಡಿದರೆ, ರತ್ನಪಕ್ಷಿ (ಕುಂಬಾರ ಕಾಗೆ)ಯು ಕಾಣಿಸಿಕೊಂಡರೆ, ಪರಿಚಯವಿಲ್ಲದ ನಾಯಿ ಬೆನ್ನು ಹತ್ತಿದರೆ, ಕಬ್ಬು ನಾಟಿ ಮಾಡುವಾಗ ಯಾರಾದರೂ ಕುದುರೆಯೇರಿ ಬಂದರೆ, ಕನಸಿನಲ್ಲಿ ಹುಂಜ, ಆನೆ, ಹಂಸ ಇವುಗಳನ್ನು ಕಂಡರೆ, ಮಾತನಾಡುವಾಗ ಹಲ್ಲಿ ನುಡಿದರೆ ಶುಭ.

3) ಕಾಗೆ ಮನೆಯ ಅಂಗಳ ಇಲ್ಲವೆ ಕುಂಬಿಯ ಮೇಲೆ ಕುಳಿತು ಕೂಗಿದರೆ, ಬೆಕ್ಕು ಸುತ್ತು ಬಳಸಿ ಮುಖ ತೊಳೆದುಕೊಂಡರೆ ಮನೆಗೆ ಬೀಗರು ಬರುತ್ತಾರೆ.

4) ಇರುವೆಯ ಮನೆಯಲ್ಲಿ ಸಕ್ಕರೆ ಹಾಕಿದರೆ, ಗೋಮಾತೆಯನ್ನು ರಕ್ಷಿಸುತ್ತ ಪೂಜೆ ಮಾಡಿದರೆ ಪುಣ್ಯ ಬರುವುದು.

5) ಮನೆಯಲ್ಲಿ ಜೇನುಗೂಡು ಕಟ್ಟಿದರೆ ಶುಭ.

6) ನಾಗರಹಾವು ಗುಪ್ತನಿಧಿಯನ್ನು ಕಾಯುತ್ತಿರುತ್ತದೆ. ಅದರ ಹೆಡೆಯಲ್ಲಿ ಒಂದು ರತ್ನವಿರುತ್ತದೆ. ಅದು ಆಹಾರವನ್ನು ಹುಡುಕುವಾಗ ಆ ರತ್ನವನ್ನು ಕೆಳಗಿಟ್ಟು ಅದರ ಬೆಳಕಿನಲ್ಲಿ ಸಂಚರಿಸುತ್ತದೆ. ಆಗ ಆ ರತ್ನದ ಮೇಲೆ ಕೆಸರನ್ನು ಒಗೆದರೆ ಸುತ್ತ ಕತ್ತಲೆಯುಂಟಾಗಿ ಹಾವು ಸಾಯುತ್ತದೆ. ಆಗ ಆ ರತ್ನವನ್ನು ನಮ್ಮದಾಗಿಸಿ ಕೊಳ್ಳಬಹುದು. ಹಾವಿನ ದ್ವೇಷ ಹನ್ನೆರಡು ವರುಷ. ಹಾವನ್ನು ಕೆಣಕಿ ಬಿಡಬಾರದು. ಅದು ತನಗೆ ಪೀಡಿಸಿದವನ ಸೇಡು ತೀರಿಸಿಕೊಳ್ಳದೆ ಬಿಡಲಾರದು.

7) ಮನುಷ್ಯ ಮಲಗಿದಾಗ ಹಾವು ಕಾಲಿನ ಕಡೆಯಿಂದ ತಲೆಯತ್ತ ಹರಿದರೆ ಅವನು ಐಶ್ವರ್ಯವಂತನಾಗುವನು. ಇದಕ್ಕೆ ವ್ಯತಿರಿಕ್ತವಾಗಿ ತಲೆಯ ಕಡೆಯಿಂದ ಕಾಲಿನತ್ತ ಹರಿದರೆ ದರಿದ್ರನಾಗುವನು.

8) ಕಪಿ ಸಾಕ್ಷಾತ್ ಹನುಮಂತನೆಂದೇ ಜಾನಪದರ ನಂಬಿಕೆ. ಮಂಗನ ಮುಖ, ಕೈಗಳು ಕಪ್ಪಾದುದಕ್ಕೆ ಜನಪದರು ಒಂದು ರೋಚಕ ಕಥೆ ಹೇಳುತ್ತಾರೆ. ಅದು ಹೀಗಿದೆ:

ರಾವಣನು ಹನುಮಂತನ ಬಾಲಕ್ಕೆ ಬೆಂಕಿಯಿಟ್ಟಾಗ ಆತ ಲಂಕಾದಹನ ಮಾಡಿ ಪಡುಗಡಲಿಗೆ ಹಾರಿದನಂತೆ. ಉರಿಯುವ ಬಾಲವನ್ನು ನೀರಿನಲ್ಲಿ ಅದ್ದಿ ಕೈಯಿಂದ ತಿಕ್ಕಿದಾಗ ಕೈಗಳು ಸುಟ್ಟು ಕರಕಾದವು. ಆ ಕೈಗಳಿಂದ ಮುಖವನ್ನು ತಿಕ್ಕಿಕೊಂಡಾಗ ಮುಖವೂ ಕಪ್ಪಾಗಾಯಿತು. ಹೀಗಾಗಿ ಅವನ ವಂಶಜರ ಮುಖ ಹಾಗೂ ಕೈಗಳು ಕಪ್ಪಾಗಿಯೇ ಉಳಿದಿವೆಯಂತೆ.

ಸಾಮಾನ್ಯವಾಗಿ ಮಂಗನನ್ನು ಯಾರೂ ಕೊಲ್ಲುವುದಿಲ್ಲ. ಆಕಸ್ಮಿಕವಾಗಿ ಮಂಗ ಸತ್ತರೆ ಅದರ ಮೆರವಣಿಗೆ ಮಾಡಿ ಊರಿನ ವಿಶಿಷ್ಟ ಸ್ಥಳದಲ್ಲಿ ಅದನ್ನು ಹೂಳುವರು. ನಂತರ ಈ ಸ್ಥಳದಲ್ಲಿ ಒಂದು ಗುಡಿ ನಿರ್ಮಾಣವಾಗುತ್ತದೆ. ಅಂತಹ ಉದಾಹರಣೆಗಳು ಸಾಕಷ್ಟು ಸಿಗುತ್ತವೆ.

ಮಂಗವು ಮರದ ಟೊಂಗೆಯಿಂದ ಟೊಂಗೆಗೆ ಹಾರುವಾಗ ಟೊಂಗೆ ಮುರಿಯದಂತೆ ಅದಕ್ಕೆ ಶ್ರೀರಾಮನ ಅಭಯ ಹಸ್ತವಿದೆಯೆಂದು ಹೇಳುವರು.

ನಿಷೇಧಾತ್ಮಕ ನಂಬಿಕೆಗಳು:

ಹೆಂಗಸರು ಹುಲಿಯ ಮಾಂಸವನ್ನು ತಿನ್ನಬಾರದು. ಒಂದು ವೇಳೆ ತಿಂದರೆ ಅವರಲ್ಲಿ ಹುಲಿಯಂತೆ ಕ್ರೂರಗುಣ ಬರುತ್ತದೆ. ಮುಳ್ಳುಹಂದಿಯ ಮಾಂಸವನ್ನು ಸೈನಿಕರು

ತಿನ್ನಬಾರದು, ತಿಂದರೆ ಅವರು ಹೇಡಿಗಳಾಗುತ್ತಾರೆ. ಹಾಲು ಕರೆಯುವಾಗ ಕೈಮೇಲೆ ಮಲಗುವ ಆಕಳನ್ನು ಸಾಕಬಾರದು. ಹಾವಿನ ಕೂಟ ನೋಡಬಾರದು. ಕತ್ತೆ ಹೊರಳಾಡಿದ ಬೂದಿ ತುಳಿಯಬಾರದು. ನಾಯಿ ಮುಟ್ಟಿದ ಗಡಿಗೆ ಬಳಸಬಾರದು.

ನಂಬಿಕೆಗಳ ಸಹಾಯವಿಲ್ಲದೆ ಬದುಕುವ ಮಾನಸಿಕ ಗಟ್ಟಿತನ ಎಲ್ಲರಿಗೂ ಸಾಧ್ಯವಾಗಲಾರದು. ಅನೇಕರು ಬದುಕುವ ಪರಿಸರ, ಅವರ ತಿಳುವಳಿಕೆಯ ಇತಿಮಿತಿ ಮುಂತಾದ ಸಂಗತಿಗಳು ಅವರ ಬದುಕಿನಲ್ಲಿ ಕೆಲವಾದರೂ ನಂಬಿಕೆಗಳನ್ನು ಅವಲಂಬಿಸಲು ಕಾರಣವಾಗಬಹುದು. ಆದರೆ ಮನುಷ್ಯನ ಹಾಗೂ ಅವನ ಸುತ್ತಲಿನ ಸಮಾಜಕ್ಕೆ ಅಪಾಯಕಾರಿಯಾದ ಅನೇಕ ಧಾರ್ಮಿಕ ನಂಬಿಕೆಗಳು, ಜಾತಿ, ಅಸ್ಪೃಶ್ಯತೆ, ಗಂಡು ಹೆಣ್ಣಿನ ಅಂತರ ಮುಂತಾದ ಸಾಮಾಜಿಕ ಅಸಮಾನತೆಗಳನ್ನು ಪೋಷಿಸುವ ನಂಬಿಕೆಗಳನ್ನು ನಾವು ಬಿಟ್ಟುಕೊಡುವುದು ಕ್ಷೇಮಕರ. ಒಟ್ಟಿನಲ್ಲಿ ಜನಪದ ನಂಬಿಕೆಗಳು ಇಂದಿಗೆ ಪ್ರಸ್ತುತವೋ ಅಲ್ಲವೋ ಎನ್ನುವುದನ್ನು ವೈಜ್ಞಾನಿಕ ತಳಹದಿಯ ಮೇಲೆ ಆಲೋಚಿಸಿ ಅದರಂತೆ ನಡೆಯುವುದು ಅವಶ್ಯವಿದೆ.

7. ಕೃಷಿಕರ ತತ್ವ-ಸಿದ್ಧಾಂತಗಳು

ಹುಟ್ಟಿನಿಂದ ಮುಗ್ಧರೂ, ಸರಳ ಸ್ವಭಾವದವರೂ ಆದ ಕೃಷಿಕರು ಮೂಲತಃ ಶ್ರಮಜೀವಿಗಳು ಮತ್ತು ಪ್ರಕೃತಿ ಪ್ರೇಮಿಗಳು. ಇವರ ಬದುಕು ವಿಶಿಷ್ಟವಾದುದು. ಇವರಲ್ಲಿ ತಮ್ಮವೇ ಆದ ತತ್ವ ಸಿದ್ಧಾಂತಗಳಿವೆ. ರೈತರಲ್ಲಿ ಭೂಮಿಯ ಬಗ್ಗೆ ವಿಶೇಷ ಗೌರವವಿರುವದರ ಜೊತೆಗೆ ದೈವಭಕ್ತಿ ಹಾಗೂ ಸಂಪ್ರದಾಯ ನಿಷ್ಠೆಗಳು ಇವರಲ್ಲಿ ಬೇರೂರಿವೆ. ಇವರದು ನಿರಾಡಂಬರ ಜೀವನ. ಪ್ರಾಮಾಣಿಕತೆ ಇವರ ಬಾಳಿನ ಅಸ್ತಿವಾರ. ಶರಣರಂತೆ ಇವರದು ಕಾಯಕ ನಿಷ್ಠೆ. ಕಾಯಕದಿಂದ ಬಂದುದರಲ್ಲಿ ಎಲ್ಲರೊಡನೆ ಹಂಚಿ ತಿನ್ನುವ ಭಾವ. ಇದನ್ನೇ ಶರಣರು 'ದಾಸೋಹ' ಎಂದು ಕರೆದಿದ್ದಾರೆ.

ದೈವಭಕ್ತಿ : ರೈತರಲ್ಲಿ ನಾವು ಕಾಣುವದು ಬಹುದೇವೋಪಾಸನೆ. ಭೂಮಿತಾಯಿ ಅವನಿಗೆ ಅನ್ನವೀಯುವ ಪ್ರಥಮದೇವರು. ಭೂಮಿತಾಯಿಗೆ ನೆರವಾಗುವ ಮಳೆರಾಯ, ಬೆಳಕುಕೊಡುವ ಸೂರ್ಯಚಂದ್ರರು, ವಾಯುದೇವ- ಇವರನ್ನು ಆತ ಮರೆಯದೆ ಸ್ತುತಿಸುತ್ತ ಬಂದಿದ್ದಾನೆ. ಇವರೆಲ್ಲ ರೈತನಿಗೆ ಕಾಣುವ ದೇವರುಗಳು. ಹಾಗೆಯೇ ತಲೆತಲಾಂತರಗಳಿಂದ ನಂಬಿಕೊಂಡು ಬಂದಿರುವ ಪರಮಾತ್ಮ, ಇಳೆ,ಬೆಳೆ, ಸುಳಿದು ಸೂಸುವ ಗಾಳಿ ಇವುಗಳನ್ನೆಲ್ಲ ದಯಪಾಲಿಸಿದವ ಪರಮಾತ್ಮ. ಇವನೇ ಜಗದ ತಂದೆ ಅಥವಾ ಜಗದೊಡೆಯ. ಇವನ ಜೊತೆಯಲ್ಲಿ ತಮ್ಮ ಊರಿನ ತಮಗೆ ಪರಿಚಿತರಾದ ಮಲ್ಲಿಕಾರ್ಜುನ, ಸಂಗಮೇಶ್ವರ, ನಂದಿ, ಸೋಮೇಶ್ವರ, ವೀರಭದ್ರ, ಗಣಪತಿ, ಮಾರುತಿ-ಇವರನ್ನು ಮರೆಯಲಾರ. ಸ್ತ್ರೀದೇವತೆಗಳಲ್ಲಿ-ಲಕ್ಷ್ಮೀ, ಬನಶಂಕರಿ, ಎಲ್ಲಮ್ಮ, ದುರ್ಗಾದೇವಿ, ಶೆಟವಿ ಮೊದಲಾದವರನ್ನು ನೆನೆಯುತ್ತಾರೆ.

ಶಿವಶಿವ ಅಂದರ ಸಿಡಿಲೆಲ್ಲ ಬಯಲಾಗಿ ।
ಕಲ್ಲು ಬಂದೆರಗಿ ಕಡೆಗಾಗಿ ।ಎಲೆಮನವೆ ।
ಶಿವನೆಂಬ ಶಬುದ ಬಿಡಬ್ಯಾಡ ।।

ನಂಬಿದರೆ ನಂಬೇನ ನಂಬಿಗುಳ್ಳಯ್ಯನ ।
ಕಂಬಿಕಾವಡಿ ಒಡೆಯನ । ಮಲ್ಲಯ್ಯನ ।
ನಂಬೀನಿ ಬಹಳ ದ್ರುಡದಿಂದ ।।

ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ ।
ಬಸವ ಕಾಯಕದ ಗುರುಬೀಜ । ಶಿವಮತಕೆ ।
ಬಸವ ಓಂಕಾರ ಶಿವನಾಮ ।।

ಶಿವ ನಾರಾಯಣ ಇವರಲ್ಲಿ ಭೇದವೆಣಿಸದ ಕೃಷಿಕ –

ನಾರಾಯಣ ನಿನ್ನ ನಾಮದ ಬೀಜವ ।
ನಾನೆಲ್ಲಿ ಬಿತ್ತಿ ಬೆಳೆಯಲಿ । ನಿನ್ನ ನಾಮ ।
ನಾಲಿಗಿ ಮ್ಯಾಲ ಬೆಳೆದೇನ ॥

ಬದುಕಿನಲ್ಲಿ ಕಷ್ಟಗಳು ಬರುವುದು ಸಹಜ. ನಾವು ಎಲ್ಲರೊಡನೆ ಸ್ನೇಹಭಾವದಿಂದ ನಡೆದುಕೊಂಡರೂ ನಮ್ಮ ಪ್ರಗತಿಯನ್ನು ಕಂಡು ಕೆಲವರಿಗೆ ಅಸೂಯೆ. ಮತ್ತೆ ಕೆಲವರು ಅಪಾರ್ಥಮಾಡಿಕೊಂಡು ವೈರ ಸಾಽಸುವರು. ಇದಕ್ಕೆ ಬಂಧುಗಳೂ ಹೊರತಾಗಿಲ್ಲ. ಆಗ ಅವನ ಅಳಲು ಹಾಗೂ ಪ್ರಾರ್ಥನೆ:

ಬಾಗಾದಿ ಬಲಕಿರಲಿ ವೈರಿ ತಾ ಎಡಕಿರಲಿ ।
ಛಾಡಿ ನಿನ ಮನಿಯು ಎದುರಿರಲಿ । ಬಲ ಭೀಮ ।
ದೇವ ನನಮ್ಯಾಲ ದಯವಿರಲಿ ॥

ಈ ದೇವರುಗಳ ಜೊತೆಗೆ ಕನ್ನಡ ನಾಡಿನ ಶಿವಶರಣ ಶರಣೆಯರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ, ಮಡಿವಾಳ ಮಾಚಿದೇವ, ಕುಂಬಾರ ಗುಂಡಯ್ಯ, ಹರಳಯ್ಯ, ಮಾದರ ಚೆನ್ನಯ್ಯ, ಹೂಗಾರ ಮಾದಯ್ಯ, ಕಿನ್ನರಿ ಬೊಮ್ಮಯ್ಯ, ಶಿವಶರಣೆಯರಲ್ಲಿ ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ಸತ್ಯಕ್ಕ ಮೊದಲಾದವರನ್ನು ನೆನೆಯುತ್ತಾರೆ. ಇದಲ್ಲದೆ ಕರ್ನಾಟಕದ ಸಾಧು-ಸತ್ಪುರುಷರಾದ ಅಥಣಿ ಶಿವಯೋಗಿಗಳು, ಚಿತ್ತರಗಿ ಮಹಾಂತಜ್ಜ, ಹುಬ್ಬಳ್ಳಿಯ ಸಿದ್ಧಾರೂಢರು, ಶಿರಹಟ್ಟಿಯ ಫಕೀರಸ್ವಾಮಿ, ನವಿಲುಗುಂದದ ನಾಗಲಿಂಗ, ಬಬಲಾದಿ ಚಿಕ್ಕಪ್ಪಯ್ಯ, ಕೊಡೇಕಲ್ಲ ಬಸವಣ್ಣ, ಲಚ್ಯಾಣ ಸಿದ್ಧಲಿಂಗ ಯತಿಗಳು, ಶಿಶುನಾಳ ಶರೀಫರು- ಮೊದಲಾದವರನ್ನು ನೆನೆದು ಕೈಮುಗಿಯುತ್ತಾರೆ. ಇವರೆಲ್ಲರನ್ನು ಕುರಿತ ಜನಪದ ಹಾಡುಗಳು ನಮ್ಮ ನಾಡಿನಲ್ಲಿ ರಾಸಿರಾಸಿಯಾಗಿ ದೊರೆಯುತ್ತವೆ.

ಕೃಷಿಕರ ಜೀವನದಲ್ಲಿ ಬಂದ ಕಹಿ ಅನುಭವ ಇಲ್ಲಿದೆ. ಇಲ್ಲಿಯವರೆಗೆ ಜನರನ್ನು ನಂಬಿದ್ದಾಯಿತು, ಪ್ರಯೋಜನವಾಗಲಿಲ್ಲ. ಅವರು ನಡುನೀರಿನಲ್ಲಿಯೇ ಕೈಬಿಟ್ಟರು. ತಂದೆ ಮಲ್ಲಯ್ಯ ನೀ ನನ್ನ ಕೈಬಿಡಬ್ಯಾಡ ಎಂದು ಪ್ರಾರ್ಥಿಸಿದ ರೀತಿ ಅನನ್ಯ:

ಮಂದಿ ಮಂದಿ ಎಂದು ಮಂದಿ ನಂಬಲು ಹೋದೆ ।
ಮಂದಿ ಬಿಟ್ಟಾರ ನಡುನೀರ । ಮಲ್ಲಯ್ಯ ।
ತಂದಿ ನನಕೈಯ ಬಿಡಬ್ಯಾಡ ॥

ಹೆಣ್ಣುಮಕ್ಕಳ ಬೆಳಗಿನ ಬೀಸುವ ಹಾಡುಗಳಲ್ಲಿ, ಪುರುಷರ ವಿವಿಧ ಕಾಯಕದ

ಹಾಡುಗಳಲ್ಲಿ ವಿಶೇಷವಾಗಿ ಹಂತಿಯ ಹಾಡುಗಳಲ್ಲಿ ಈ ಮೇಲಿನ ದೇವತೆಗಳ, ಶರಣರ, ಸಂತ–ಮಹಂತರ ಸ್ತುತಿಯನ್ನು ಕಾಣುತ್ತೇವೆ.

ಕೃಷಿಕರು ಅದೇಕೆ ಒಟ್ಟು ಜಾನಪದರ ಕೊನೆಯ ಬಯಕೆ ಶಿವಪದ ಹೊಂದುವದು. ಇದಕ್ಕೆ ಉದಾಹರಣೆಯಾದ ಒಂದು ತ್ರಿಪದಿ:

ಮುಗ್ಧ ಶರಣರ ಹಾಡು ಸಿದ್ಧಿ ಮಂತ್ರವು ನೋಡು ।
ಸಿದ್ಧಾಗೊ ಹಾಡು ಹಾಡುದಕೆ । ಎಲೆ ಜೀವ ।
ಶುದ್ಧಾಗಿ ಹೊಂದು ಶಿವಪಥವ ॥

ಗರತಿ ಬೀಸುವ ಕಾರ್ಯ ಮುಗಿಸಿ ಕಲ್ಲು ನಿಲ್ಲಿಸುವಾಗ:

ಆದಮುಕ್ಕಿಗೆ ಶರಣು ಗೋದಿಕಲ್ಲಿಗೆ ಶರಣು ।
ಓಂ ನಾಮ ಶಿವಗ ಶಿವ ಶರಣು । ಮಲ್ಲಯ್ಯ ।
ನಿಮ್ಮ ಪಾದಕ ನಮ ಶರಣು ॥

ಈ ಸ್ತುತಿಪದ್ಯಗಳಲ್ಲಿ ಗರತಿಯರು ತವರುಮನೆಯಲ್ಲಿರುವ ತಂದೆ–ತಾಯಿ, ತನ್ನ ಗಂಡ, ಮಕ್ಕಳು, ಅತ್ತೆ ಮಾವಂದಿರು, ನಾದಿನಿ, ನೆಗೆಣ್ಣಿ , ತನ್ನ ಬಳಗ–ಇವರನ್ನು ನೆನೆಯದೆ ಇರಲಾರರು.

ಕಾಸೀಗಿ ಹೋಗುದಕ ಏಸೊಂದು ದಿನ ಬೇಕ ।
ತಾಸೊತ್ತಿನ ಹಾದಿ ತವರೂರ । ಮನಿಯಾಗ ।
ಕಾಸಿ ಕುಂತಾಳ ಹಡೆದವ್ವ ॥

ತಂದೀನ ನೆನೆದರ ತಂಗೂಳ ಬಿಸಿಯಾಯ್ತು ।
ಗಂಗಾದೇವಿ ನನ್ನ ಹಡದವ್ನ । ನೆನೆದರ ।
ಮಾಸಿದ ತಲೆಯು ಮಡಿಯಾಯ್ತು ॥

ಒಟ್ಟಿನಲ್ಲಿ ಜಾನಪದರ ದೈವಭಕ್ತಿ ಬುದ್ಧಿಪ್ರಧಾನವಾದುದ್ದಲ್ಲ. ಅದು ದೃಢ ನಂಬಿಕೆಯಿಂದ, ಭಾವುಕತೆಯಿಂದ ಕೂಡಿರುವಂತಹುದು.

ಕಾಯಕ ಸಿದ್ಧಾಂತ :

ಕೃಷಿ ಉದ್ಯೋಗ ಮಾಡುವವ ಕೃಷಿಕ. ಒಂದು ಕಾಲಕ್ಕೆ ಈ ಉದ್ಯೋಗಕ್ಕೆ ಪ್ರಥಮಸ್ಥಾನ ಕೊಡಲಾಗಿತ್ತು. ಆದರೆ ಇಂದು ಈ ಮಾತು ಸುಳ್ಳಾಗಿದೆ. ಅಷ್ಟೇ ಏಕೆ, ಈ ಉದ್ಯೋಗ ಕನಿಷ್ಟವೆನಿಸಿದೆ. ಇಂದಿನ ದಿನಗಳಲ್ಲಿ ಕೃಷಿ ಉದ್ಯೋಗ ಹಾನಿಕರವಾಗಿದ್ದರೂ, ಬಂದ ಕಷ್ಟಗಳನ್ನು ತಾಳ್ಮೆಯಿಂದ ನುಂಗಿಕೊಂಡು ರೈತ ಅದನ್ನು ಮುಂದುವರಸಿಕೊಂಡು

ಬಂದಿದ್ದಾನೆ. ಇದಕ್ಕೆ ಕಾರಣ ಕೃಷಿಕನಲ್ಲಿರುವ ಭೂವ್ಯಾಮೋಹ, ಹಾಗೆಯೇ ಇದನ್ನು ಬಿಟ್ಟರೆ ಅವನಿಗೆ ಬೇರೆ ಉದ್ಯೋಗ ಸಾಽಸದು. ಇಂದಲ್ಲ ನಾಳೆ ಒಳ್ಳೆಯದಾದೀತೆಂಬ ಆಶಾಭಾವನೆ ಅವನದಾಗಿದೆ. ಸರಕಾರವೂ ಕೃಷಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಶ್ರಮಿಸುತ್ತಿಲ್ಲ, ಇಷ್ಟಾದರೂ ಕೃಷಿಕರಿಗೆ ಭೂಮಿತಾಯಿ ರಕ್ತಸಂಬಂಽ. ಅಂತೆಯೇ ಅವರು ಅದನ್ನು ಬಿಟ್ಟುಕೊಡಲಾರರು.

ಕೃಷಿಕರಿಗೆ ಬೇಸಾಯ ಉದ್ಯೋಗವಾಗಿಲ್ಲ; ಅದು ಅವರಿಗೆ ಕಾಯಕವಾಗಿದೆ. ಅದರಿಂದಲೇ ಅವರಿಗೆ ಸದ್ಗತಿ. ಅವರಿಗೆ ಕಾಯಕವೇ ಕೈಲಾಸ; ದುಡಿಮೆಯೇ ದೇವರು; ನೆಲವೇ ಜೀವಂತ ಕೈಲಾಸ. ಈ ಬಗೆಗೆ ರೈತ ಹಾಡಿದ್ದು ಇಂತಿದೆ:

ಕಾಯಕವೆ ಶಿವಭಕ್ತಿ ಕಾಯಕವೆ ಶಿವಭಜನೆ ।
ಕಾಯಕವೆ ಲಿಂಗ ಶಿವಪೂಜೆ । ಶಿವಯೋಗ ।
ಕಾಯಕವೆ ಕಾಯ್ವ ಕೈಲಾಸ ।।

ಬೇಡೆನೆಗೆ ಕೈಲಾಸ ಬಾಡುವದು ಕಾಯಕವು ।
ನೀಡೆನಗೆ ಶಿವನೆ ಕಾಯಕವ । ಕುಣಿದಾಡಿ ।
ನಾಡ ಹಂದರಕೆ ಹಬ್ಬಿಸುವೆ ।।

ಕಾಯಕದಲ್ಲಿ ಮೇಲುಕೀಳುಗಳಿಲ್ಲ, ಮೊದಲ ಕಾಲದಲ್ಲಿ ವಾಸ್ತವವಾಗಿ ಒಂದು ಇಡೀ ಗ್ರಾಮ ಒಂದು ದೊಡ್ಡ ಕುಟುಂಬವಿದ್ದಂತೆ ಇತ್ತು. ರೈತನಿಗೆ ನೆರವಾಗುವ ಆಯಗಾರರನ್ನು ಅವನು ಗೌರವದಿಂದ ಕರೆಯುತ್ತಿದ್ದ. ಕುಂಬಾರನನ್ನು ಕುಂಬಾರಣ್ಣ ಎಂದೂ ಬಡಿಗನನ್ನು ಬಡಿಗಗೌಡ ಎಂದೂ ಕರೆಯುತ್ತಿದ್ದುದನ್ನು ನೋಡಿರುವೆ. ಹಳ್ಳಿಯ ಮುಗ್ಧಬಾಲೆಯರಿಬ್ಬರು ನೀರು ತರಲು ಕೆರೆಯತ್ತ ನಡೆದಿದ್ದಾರೆ. ಅವರೀರ್ವರೂ ಬೇರೆ ಬೇರೆ ಜಾತಿಯವರು. ಅವರಿಗೆ ಅನೇಕರು ಕುಲ ಕೇಳಿದಾಗ ಅವರ ಉತ್ತರ ಇಂತಿದೆ:

ನಾನು ನನ್ನ ಗೆಳತಿ ಕೂಡಿ ನೀರಿಗೆ ಹೋಗಿ ।
ಕುಲವ ಕೇಳ್ಯಾರ ಬಹುಮಂದಿ । ಕೇಳಿದರ ।
ಕುಲವೆರಡು ನಮ್ಮ ಮನವೊಂದು ।।

ಜಾತೀಯತೆ ನಮ್ಮ ಸಮಾಜಕ್ಕೆ ಅಂಟಿದ ಒಂದು ದೊಡ್ಡ ಕಲಂಕ. ಜಾತೀಯತೆಯ ವಿಷಬೀಜವನ್ನು ಕಿತ್ತೊಗೆಯಲು ಶ್ರಮಿಸಿದವರು ಶಿವಶರಣರು. ಜಾತಿಯ ಮೇಲು ಕೀಳುಗಳನ್ನು ಅಲ್ಲಗಳೆದು, 'ಜಾತನಾರು' ಎಂಬುದನ್ನು ಶರಣರ ಕಥನ ಗೀತಗಳಲ್ಲಿ ಜಾನಪದರು ಹಾಡಿಕೊಂಡಿದ್ದಾರೆ.

ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ ।
ಭಲರೆ ಬಸವಯ್ಯ ಬಸವರಸ । ನಿನ್ಹೆಸರು ।
ನೆಲೆಯಾತು ನಿತ್ಯ ಜನಪದಕೆ ।।

ಮಾದರ ಚೆನ್ನಯ್ಯ ಪರಮ ಶಿವಭಕ್ತ ! ಅವನ ನಡೆ ಚೆನ್ನ; ನುಡಿಚೆನ್ನ !! ಆದುದರಿಂದಲೇ ಶಿವನು ಅವನ ಮುಂದೆ ಕುಳಿತು ಅವನ ಎಡೆಯೊಳಗಿನ ಅಂಬಲಿಯನ್ನು ಉಂಡು ತೇಗಿದನು:

ಜಾತಿಯೊಳು ಮಾದರನು ನೀತಿಯೊಳು ಶಿವಶರಣ ।
ಮಾತು ವಚನಗಳು ಚೆನ್ನಯ್ಯ । ಶಿವನುಂಡ ।
ಕೂತು ಎಡೆಯೊಳಗೆ ಅಂಬಲಿಯ ।।

ಅಂತೆಯೇ ಚೋಳರಾಜನು ಚೆನ್ನನನ್ನು ಕುರಿತು ಹೀಗೆ ಹೇಳಿದ್ದಾನೆ:

ಹರನೊಲಿದ ಜಾತಿಯೇ ವರಜಾತಿ ಜಗದೊಳಗೆ ।
ಮರೆಮಾತು ಏಕೆ ನಡೆಮೊದಲು । ಹೋಗೋಣ ।
ಹರನ ಬಳಿಯಿದನು ಅರಿಯುದಕೆ ।।

ಶರಣರಿಗೆ ಜಾತಿಯೆತ್ತಿ ಹೊಲೆಯನೆನ್ನುವದು ಮೂರ್ಖತನ. ಶರಣರೇ ಚೋಳರಾಜನಿಗೆ ಈ ಕುರಿತು ಹೇಳಿದುದು ಇಂತಿದೆ:

ಹೊಲಸು ತಿಂಬವ ಹೊಲೆಯ ಹೊಲಬಿಲ್ಲದವ ಹೊಲೆಯ
ನೆಲೆಸಲ್ಹುಸಿನುಡಿಯು ಎದೆಯೊಳಗೆ । ಹೊಲೆಯರಸ ।
ಹೊಲೆಯರೆನ್ನುವರೆ ಶರಣರಿಗೆ ।।

ಈ ಎಲ್ಲಾ ತತ್ತ್ವಗಳನ್ನು ನಮ್ಮ ಕೃಷಿಕರು ಆಚರಿಸುತ್ತ ಬಂದಿದ್ದಾರೆ. ಇಂತಹ ತತ್ತ್ವಗಳಿರುವುದರಿಂದಲೇ ಭಾರತವನ್ನು 'ವಿಶ್ವಜಾನಪದದ ಜೀವಂತ ಕಣಜ' ಎಂಬುದಾಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದ ಪ್ರೊ. ಅಲೆನ್ ದುಂಡೇ ಎಂಬ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಭಾರತದ - ವಿಶೇಷವಾಗಿ ಕರ್ನಾಟಕದ - ಜಾನಪದದ ಹಿರಿಮೆ ಗರಿಮೆಗಳ ಅರಿವಾಗದೇ ಇರದು.

ಶರಣ ಹರಳಯ್ಯನ ಜೀವನದಲ್ಲಿ ಒಂದು ಘಟನೆ ನಡೆಯಿತು. ಬಸವಣ್ಣನವರಿಗೆ 'ಶರಣು' ಎಂದ ಹರಳಯ್ಯನಿಗೆ, ಪ್ರತಿಯಾಗಿ ಬಸವಣ್ಣನವರು 'ಶರಣು-ಶರಣು' -ಎಂದುದು ಒಂದು ಸಂದರ್ಭ ! ಅದಕ್ಕೆ ಶರಣ ಹರಳಯ್ಯ ನೊಂದುಕೊಂಡು ಒಂದು ಅಂಕ ಶರಣು ತನಗೆ ಬಸವಣ್ಣರವರಿಂದಾದುದಕ್ಕೆ ಪ್ರಾಯಶ್ಚಿತ್ತವನ್ನು ಚಿಂತಿಸುತ್ತಾನೆ.

ಇಂತಿರಲು ಶರಣನ ಮಡದಿ ಅದಕ್ಕೆ ಒಂದು ಪರಿಹಾರ ಸೂಚಿಸುತ್ತಾಳೆ. ಸತಿ-ಪತಿಗಳು ತಮ್ಮ ಒಂದೊಂದು ತೊಡೆಯ ಚರ್ಮಕೊರೆದು ಪಾದರಕ್ಷೆಮಾಡಿ ಬಸವಣ್ಣನವರಿಗೆ ಅರ್ಪಿಸಬೇಕೆಂಬುದು ಅವಳ ಸಲಹೆ. ಇದು ಛಲದಲ್ಲಿ ಪರಿವರ್ತನೆಗೊಂಡು ಕಾಯಕಕ್ಕೆ ತೊಡುಗುತ್ತಾರೆ. ಅದು ಜಾನಪದದಲ್ಲಿ ಬಂದದು ಇಂತಿದೆ:

ಮರುದಿನವೆ ಹರಳಯ್ಯ ಕೊರೆದ ಬಲದೊಡಿ ಚರ್ಮ ।
ಹರನೆಂದು ಮಡದಿ ಎಡದೊಡೆಯ । ತಾ-ಕೊಯ್ದು ।
ಭರನೆ ಹದ ಮಾಡಿ ಒಣಗಿಸಿದ ॥

ಮಿಸುನಿಯದೆ ಜರಹಚ್ಚಿ ಹೊಸಮುತ್ತು ಪೋಣಿಸಿದ ।
ಕುಸುರ್ದ್ಪಿಣೆದ ರನ್ನ ಮಾಣಿಕದ । ಜೋಡುಗಳು ।
ಮಸಗಿದವು ಚಂದ್ರ-ರವಿಯಂತೆ ॥

ಕೃಷಿ ಕುಟುಂಬದ ಮನೆಯ ಯಜಮಾನ ನಸುಕಿನ ಐದು ಗಂಟೆಗೆ ಏಳುತ್ತಾನೆ. ಆಳುಮಗ-ಮನೆಯ ಮಗ ಒಂದೇ ಎಂದು ಮಲಗಿದ ಆಳುಮಗನನ್ನು ಎಬ್ಬಿಸದೆ ತಾನೇ ಕೊಂಡು ಗೋದಲಿಗೆ ಹೋಗಿ ಗಂಡಗಚ್ಚೆ ಹಾಕಿ ಹೆಂಡಿಕಸ ಕಾಯಕಕ್ಕೆ ನಿಲ್ಲುತ್ತಾನೆ. ಎಂಟೆತ್ತುಗಳ ಗೋದಲೆ ಅದು. ಸೆಗಣಿ ತೆಗೆಯುತ್ತ ಹಾಡುವ ತ್ರಿಪದಿಯಿದು. ಇದರಿಂದ ಅವನ ಕಾಯಕ ನಿಷ್ಠೆ ತಿಳಿಯುವುದು:

ಕಸವ ಹೊಡೆದ ಕೈಯು ಕಸ್ತೂರಿ ನಾತಾವ ।
ಬಸವಣ್ಣ ನಿನ್ನ ಸೆಗಣಿಯ । ಬಳಿದಕೈ ।
ಎಸಳ ಯಾಲಕ್ಕಿ ನಿನ್ನ ಗೊನಿನಾತ ॥

ಅಂತೆಯೇ ಕೃಷಿಕ ಜಗದ ಅನ್ನದಾತ! ಅವನ ಜೀವನ ಸಾರ್ಥಕ !!

ದಾಸೋಹ:

ಕೃಷಿಕರಲ್ಲಿ ಸಂಗ್ರಹ ಪ್ರವೃತ್ತಿ ತೀರ ಕಡಿಮೆ. 'ಇಂದಿಂಗೆಂದು ನಾಳಿಂಗೆಂದು ಕುದಿದೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದಿರುವ ಶರಣ ಸಿದ್ಧಾಂತವೇ ಕೃಷಿಕರಿಗೂ ಅನ್ವಯವಾಗುವುದು. ಔದಾರ್ಯವಿಲ್ಲದವರಲ್ಲಿ ದಾಸೋಹ ಗುಣವು ಕಂಡುಬರಲಾರದು. 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ' ಎಂದಿದೆ ಸರ್ವಜ್ಞವಾಣಿ. ಕೃಷಿಕರಲ್ಲಿಯೂ ಈ ಜೀವನ ಮೌಲ್ಯವು ಹಾಸುಹೊಕ್ಕಾಗಿದೆ. ಇಲಿಹಾಳ ಬೊಮ್ಮಯ್ಯನ ಹಾಡಿನಲ್ಲಿ ದಾಸೋಹದ ವಿಚಾರ ಇಂತಿದೆ:

ಶಿವಕೊಟ್ಟ ಕಾಲಕ್ಕೆ ಭವದೊಳಗೆ ನೀಡ್ಯೆಣ್ಣೊ ।
ಕವಣೆಗಲ್ಲಂತೆ ಜಾರಿದರೆ । ಜೀವನಕೆ ।
ನವಣೆ ಬಿತ್ತುಣಕಿ ಸತ್ತಿಂದ ॥

ಕೃಪಣ, ದುಷ್ಟ ಸತ್ತಾಗ ಅವನು ಮತ್ತೆ ಹುಟ್ಟಿ ಮರ್ತ್ಯಕ್ಕೆ ಬರಬಾರದೆಂದು ನವಣೆ ಬಿತ್ತುವ ಸಂಪ್ರಾದಾಯವಿದೆ. ಗರತಿ ಪತಿಯ ಮನೆಗೆ ಹೊರಟಾಗ ತನ್ನ ತಮ್ಮನಿಗೆ ಹೇಳುವ ತತ್ವವನ್ನು ಈ ಕೆಳಗಿನ ತ್ರಿಪದಿಯಲ್ಲಿ ಕಾಣುತ್ತೇವೆ:

ಹಗಿಗೋಳ ತಗಿವಾಗ ನಗಿಮಾರಿ ನಿನಗಿರಲಿ ।
ಬಡವರು ಬಂದರ ನೆದರಿರಲಿ । ನನತಮ್ಮಾ ।
ಅಪ್ಪನ ಗುಣವು ನಿನಗಿರಲಿ॥

ದಾನಕ್ಕೂ ದಾಸೋಹಕ್ಕೂ ಅಂತರವಿದೆ. ದಾನ ಮಾಡುವುದರಲ್ಲಿ 'ನಾನು ಕೊಡುತ್ತೇನೆ' ಎಂಬ ಭಾವವಿರುವುದು, ದಾಸೋಹದಲ್ಲಿ ಈ ಭಾವ ಇರಲಾರದು. 'ಕೊಡುವವಂ ಸಂಗ, ಕೊಳ್ಳುವವಂ ಸಂಗ' ಎಂದು ಬಸವಣ್ಣನವರು ಹೇಳಿದ ಭಾವದಲ್ಲಿ ಮಾಡುವದು ದಾಸೋಹ. ಕಾಯಕ ಮತ್ತು ದಾಸೋಹಗಳು ಶರಣರು ವಿಶ್ವಕ್ಕೆ ಕೊಟ್ಟ ಎರಡು ಕಾಣಿಕೆಗಳು.

ಕೃಷಿಕರು ಹುಟ್ಟುದಾನಿಗಳು, ವಿಶೇಷವಾಗಿ ತಾವು ಬೆಳೆಯುವ ದವಸ ಧಾನ್ಯಗಳನ್ನು ಕಾಯಿಕಸಿರುಗಳನ್ನು ಇಲ್ಲದವರಿಗೆ, ನಿರ್ಗತಿಕರಿಗೆ ನೀಡುವುದು ಅನೂಚಾನವಾಗಿ ನಡೆದುಬಂದ ಸಂಪ್ರದಾಯ. ದಾನಪ್ಪ, ಧರ್ಮಪ್ಪ, ರಾಜಕುಮಾರ, ಸಿರಿಯಾಳ- ಮೊದಲಾದ ಹೆಸರುಗಳನ್ನು ರೈತರು ತಮ್ಮ ಮಕ್ಕಳಿಗೆ ಇಡುವುದು ರೂಢಿ. ದಿನಾಲು ಬೆಳಗಿನಿಂದ ಸಂಜೆಯವರೆಗೆ ಮನೆಮನೆಗೆ ಭಿಕ್ಷಕ್ಕೆ ಬರುವವರಿಗೆ ನೀಡುವದು ರೈತರಿಗೆ ಬೇಸರವೆನಿಸದು. ಆಕಳು, ಎಮ್ಮೆ ಈದಾಗ ಎರಡು ದಿವಸ 'ಗಿಣ್ಣದ ಹಾಲು' ಎಂದು ಬೇರೆಯವರಿಗೆ ಕೊಡುವ ಪದ್ಧತಿ ರೂಡಿಯಲ್ಲಿದೆ. 'ಅನ್ನದಾನಕ್ಕಿಂತ ಇನ್ನು ದಾನಗಳಿಲ್ಲ' ಎಂದು ಸರ್ವಜ್ಞ ಸಾರಿದ್ದಾನೆ. ಉತ್ತರ ಕರ್ನಾಟಕದಲ್ಲಿ ಶಾಲೆ ಕಲಿಯುವ ಬಡಮಕ್ಕಳಿಗೆ ವಾರದಲ್ಲಿ ಒಂದೊಂದು ದಿನ ಒಬ್ಬರು ಊಟ ಮಾಡಿಸುವ ಪದ್ಧತಿಯಿತ್ತು. ಇದನ್ನು ಪ್ರಸಾದ ಇಲ್ಲವೆ ದಾಸೋಹ ಎಂದೇ ಭಾವಿಸುತ್ತಿದ್ದರು. ದಾಸೋಹವಿಲ್ಲದ ಮನೆ ಮನೆಯಲ್ಲ.

ಅತ್ತ ಮಕ್ಕಳ ಕೈಗೆ ತುತ್ತು ರೊಟ್ಟಿ ಕೊಡಲಿಲ್ಲ ।
ಮಕ್ಕಳ ಬೇಡಿ ಪರುವತಕೆ । ಹೋದರೆ ।
ಮುಕ್ಕಣ್ಣ ಶಿವನು ಒಲಿಯುವನೆ? ॥

ಎಂದು ಜನಪದ ಗರತಿ ಹಾಡಿದ್ದಾಳೆ. ಮಳೆಯೆಳಸಿದಾಗ ಅನ್ನಸಂತರ್ಪಣೆ, ಜಾತ್ರೆ-ಪರಿಸೆಗಳಲ್ಲಿ ಅನ್ನದಾನ, ಮಠಗಳಲ್ಲಿ ದಾಸೋಹ, ಬೇಸಿಗೆಯಲ್ಲಿ 'ಅರವಟ್ಟಿಗೆ' ಗಳ ವ್ಯವಸ್ಥೆ, ಬರಗಾಲದಲ್ಲಿ ನಿರ್ಗತಿಕರಿಗೆ ಅನ್ನಛತ್ರ ಒದಗಿಸುವುದು, ಯಾತ್ರಾರ್ಥಿಗಳಿಗೆ ದಾಸೋಹ -ಇವೆಲ್ಲ ಕೃಷಿಕರ ಸತ್‌ಸಂಪ್ರದಾಯಗಳು.

ಕೃಷಿಕನ ಹೆಂಡತಿ ನಸುಕಿನ 5 ಗಂಟೆಗೆ ಎದ್ದು, ಹೊಸ್ತಲ ಮುಂದಿನ ಕಸಗುಡಿಸಿ ನೀರಿನ ಚಳಿ ಹೊಡೆದು, ಹೊಸ್ತಲ ಪೂಜೆಮಾಡಿ, ಒಂದು ತಟ್ಟೆಯಲ್ಲಿ ಅನ್ನ ಹಾಗೂ ಒಂದು ತಂಬಿಗೆ ನೀರು ತಂದು ಮನೆಯ ಮುಂದಿನ ಎರಡು ನೆಲವುಗಳಲ್ಲಿರುವ ಪರ್ರ್ಯಾಣ (ಹರಿವಾಣ)ಗಳಲ್ಲಿ ಹಾಕಿ ಕೈಮುಗಿಯುವಳು. ಇದು ದಾಸೋಹದ ಉತ್ಕೃಷ್ಟ ಉದಾಹರಣೆಯಲ್ಲವೇ?

ಇತರೆ ಅಂಶಗಳು:

ದಯವೇ ಧರ್ಮದ ಮೂಲವೆಂದಿದೆ ಶರಣವಾಣಿ. ಇದೇ ರೈತವಾಣಿಯೂ ಅಹುದು. ದಯವಿಲ್ಲದ ಧರ್ಮ ನಾಲಿಗೆಯಿಲ್ಲದ ಗಂಟೆಯಂತೆ. ದಯೆ ಮಾನವನಲ್ಲಿರ ಬೇಕಾದ ಒಂದು ಪ್ರಮುಖ ಗುಣ, ಜಾನಪದದಲ್ಲಿ ದಯಾಗುಣದ ಪ್ರಸ್ತಾಪ ಹಲವಾರು ಕಡೆ ಬಂದಿದೆ :

ಕಾರುಣ್ವಮರುದಿನ ಅಣ್ಣ ಬ್ಯಾಟಿಗಿ ಹೋದ।
ಹೆಣ್ಣು ಚಿಗರಿಧಿಯ ಕೊಲಬ್ಯಾಡ। ಅಣ್ಣಯ್ಯ।
ನನಸರಿ ಮಾಡಿ ಬಿಡು ಅದನ॥

ಎಂದು ತಂಗಿಯು ಅಣ್ಣನಿಗೆ ಹೇಳುವದಾಗಲೀ, ಕಿನ್ನರಿ ಬೊಮ್ಮಯ್ಯನ ಹಾಡಿನಲ್ಲಿ ಬರುವ-

ದಯವಿಲ್ಲ ಕುಲಗೇಡಿ ದಯವಿರಲಿ ಪಶುಗಳಲಿ।
ದಯವೆ ಧರ್ಮವಯ್ಯ ಜಗದೊಳಗೆ। ಪಾಲಿಸಲು।
ಭಯವೇ ಜೀವನಿಗೆ ಭವದೊಳಗೆ॥

ಈ ವಿಚಾರವಾಗಲೀ ದಯೆಯ ಗಮನಾರ್ಹ ಉದಾಹರಣೆಗಳು. ಹೆಣ್ಣು-ಹೊನ್ನು ಮಣ್ಣುಗಳು ಭಯಾನಕ ವಸ್ತುಗಳು. ಇವುಗಳ ಬಗ್ಗೆ ಸದಾ ಎಚ್ಚರವಿರಬೇಕು.

''ಹೆಣ್ಣಿಗಾಗಿ ಸತ್ತವರು ಕೋಟಿ
ಹೊನ್ನಿಗಾಗಿ ಸತ್ತವರು ಕೋಟಿ
ಮಣ್ಣಿಗಾಗಿ ಸತ್ತವರು ಕೋಟಿ
ಗುಹೇಶ್ವರಾ ನಿಮಗಾಗಿ ಸತ್ತವರನಾರನೂ ಕಾಣೆ''

ಎಂದರು ಶಿವಶರಣ ಪ್ರಭುದೇವರು. 'ನೇಗಿಯ ಅಮುಗಯ್ಯ' ಎಂಬ ಶರಣನ ಜನಪದ ಹಾಡಿನಲ್ಲಿ ಬರುವ ವಿಚಾರ ಇಂತಿದೆ:

ಪರಹೆಣ್ಣು ಕಣ್ಣೊಳಗೆ ಪರಹೊನ್ನು ಮನದೊಳಗೆ ।
ಪರಮಣ್ಣು ಕೈಗೆ ಮುಟ್ಟದಿರೆ । ಶೀಲೆಂದು ।
ಶರಣ ಅಮುಗಯ್ಯ ಸಾರಿದನು ॥

ಕೃಷಿಕರದು ಸಾಮಾನ್ಯವಾಗಿ ಅವಿಭಕ್ತ ಕುಟುಂಬ. ತಂದೆ, ತಾಯಿ, ಹೆಂಡತಿ, ಮಕ್ಕಳು, ಮೊಮ್ಮಕ್ಕಳು ಯಜಮಾನನೊಡನೆ ಕೂಡಿ ಬಾಳುವುದು ಇಂದು ಸಾಧ್ಯವಾಗುತ್ತಿಲ್ಲ. ಯಜಮಾನ ಹೇಳಿದಂತೆ ಎಲ್ಲರೂ ಕೇಳುವುದು, ಕೂಡಿ ಕೆಲಸಮಾಡಿ, ಕೂಡಿ ಉಣ್ಣುವುದು, ಅಣ್ಣ-ತಮ್ಮಂದಿರ ಹೆಂಡರು, ಮಕ್ಕಳು ಎಲ್ಲರೂ ಕೂಡಿ ಏಕತ್ರ ಕಟುಂಬದಲ್ಲಿ ಐವತ್ತರಷ್ಟು ಸಂಖ್ಯೆಯ ಸದಸ್ಯರಿರುತ್ತಿದ್ದ ಉದಾಹರಣೆಗಳನ್ನು ನೋಡಿದ್ದೇನೆ. ಎಲ್ಲರಲ್ಲಿ ತ್ಯಾಗ ಮತ್ತು ತಿಳುವಳಿಕೆ ಇದ್ದರೆ ಮಾತ್ರ ಇದು ಸಾಧ್ಯ. ಅವಿಭಕ್ತ ಕುಟುಂಬದ ಯಜಮಾನನ ಹೊಣೆ ಗುರುತರ. ಅವನು ಎಲ್ಲರನ್ನು ಸಮಾನವಾಗಿ ನೋಡಿಕೊಳ್ಳಬೇಕು. ಇವನ ಪತ್ನಿಯೇ ಯಜಮಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಳು. ಏಕತ್ರ ಕುಟುಂಬದಲ್ಲಿ ಒಂದೇ ಮನೆಯಲ್ಲಿ ಪರಸ್ಪರ ಅರಿವಿನಿಂದ, ಸಂಪೂರ್ಣ ಸಂಯಮ ಮತ್ತು ನೀತಿಯುಳ್ಳ ಶಿಸ್ತಿನ ಬಾಳ್ವೆ ಮಾಡುತ್ತಿದ್ದರು. ಇವರೆಲ್ಲರಲ್ಲಿ ಕುಟುಂಬ ಮರ್ಯಾದೆ ಮುಖ್ಯವಾಗಿತ್ತು. ಹೊಸದಾಗಿ ಸೊಸೆ ಈ ಮನೆಗೆ ಬರುವಾಗ ಅವಳ ತಾಯಿ 'ತುಂಬಿದ ಮನೆಯ ಒಡಿಬ್ಯಾಡ' ಎಂದು ಉಪದೇಶ ಮಾಡಿ ಕಳಿಸುತ್ತಿದ್ದಳು.

ಜನಪದ ಗರತಿಯರಿಗೆ ತವರಿನ ವ್ಯಾಮೋಹ ವಿಪರೀತ. ತಾಯಿಲ್ದ ತವರಿಗೆ ಹೋಗುವುದೆಂದರೆ ನೀರಿಲ್ದ ಕೆರೆಗೆ ಕರುಬಂದು ಮರಳಿಹೋದಂತೆ ಎಂಬುದು ಅವಳ ಅನಿಸಿಕೆ. ಗಂಡನ ಮನೆಯಲ್ಲಿದ್ದರೂ ಗರತಿಗೆ ತಾಯಿಯದೇ ಧ್ಯಾನ. ತಾಯಿಯ ಮಹತಿ ಕುರಿತು ಅವಳು ಹೇಳಿದ ಪದ್ಯವಿದು:

ಉಂಗುರ ಉಡುದಾರ ಮುರದರ ಮಾಡಿಸಬಹುದು ।
ಮಡದಿ ಸತ್ತರ ತರಬಹುದು । ಹಡೆದಂಥ ।
ತಂದೆ ತಾಯೆಲ್ಲಿ ಸಿಕ್ಕಾರು? ॥

ಜಾನಪದ ಕಲ್ಪನೆಯಂತೆ ತಾಯ್ತನ ಎಂಬುದು ಹೆಣ್ಣಿನ ಒಂದು ನಿರೀಕ್ಷಿತ ಪ್ರಕ್ರಿಯೆ ಮಾತ್ರವಲ್ಲ; ಅದೊಂದು ದೊಡ್ಡ ಸಾಧನೆ. ಒಂದು ಹೆಣ್ಣು ಹುಟ್ಟಿ ಬೆಳೆದು ಶಾಸ್ತ್ರೋಕ್ತವಾಗಿ ಮದುವೆಯಾಗಿ, ಮಕ್ಕಳ ತಾಯಿಯಾಗಿ, ಸೊಸೆಯಾಗಿ, ಅನಂತರ ಅತ್ತೆಯಾಗಿ, ಅಜ್ಜಿಯಾಗಿ

ತಮ್ಮ ವಂಶದ ಕುಡಿಗಳು ಚಿಗುರುತ್ತಿರುವುದನ್ನು ಕಂಡು ಮುದಗೊಂಡು ಶಿವನಿಂದ ಮುತ್ತೈದೆ ಸಾವನ್ನು ಬೇಡಿ ಪಡೆದುಕೊಂಡು ಮುಕ್ತಳಾಗುವವರೆಗಿನ ಬಾಳಪಯಣ ವಿಶಿಷ್ಟವಾದುದು. ಈ ದಾರಿಯಲ್ಲಿ ಅವಳಿಗೆ ತವರು ಮನೆಯಲ್ಲಿ ತಾಯಿಯಿರುವದೇ ಒಂದು ಸೌಭಾಗ್ಯ. ಬೇರೆ ಇನ್ನಾರಿದ್ದರೂ ತಾಯಿಯ ಸ್ಥಾನವನ್ನು ತುಂಬಿಕೊಡಲಾರರು :

ಯಾರು ಇದ್ದರು ನನ್ನ ತಾಯವ್ವನ್ಹೋಲರ।
ಸಾವಿರ ಕೊಳ್ಳಿ ಒಲಿಯಾಗ। ಇದ್ದರ।
ಜ್ಯೋತಿ ನಿನ್ನ ಯಾರು ಹೋಲರ॥

ಇದು ಅವಳ ಅಂತರಂಗದ ಅನುಭವದ ನುಡಿ. ತಾಯಿಗೆ ಸರಿಸಮ ತಾಯಿಯೊಬ್ಬಳೇ.

ಕೃಷಿಕ ದಂಪತಿಗಳಾದರೂ ಮಕ್ಕಳ ಬಯಕೆ ಸಹಜ. ಮನೆಗೆ ಮಕ್ಕಳೇ ಮಾಣಿಕ್ಯ. ಅಂತೆಯೇ ಬಂಜೆಯ ಬಾಳು 'ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಂತೆ' ನಿರರ್ಥಕ. ಮಕ್ಕಳು ಬಿದಿಗೆಯ ಚಂದ್ರನಂತೆ ಬೆಳೆಯುತ್ತಿದ್ದರೆ ತಂದೆತಾಯಿಗಳಿಗೆ ಸಂತಸ. ಅವರ ಆಟ-ಪಾಠಗಳನ್ನು ನೋಡುವುದೆಂದರೆ ಅವರಿಗೆ ಎಲ್ಲಿಲ್ಲದ ಹಿಗ್ಗು. ರೈತರ ಮಕ್ಕಳು ಮಣ್ಣಿನಲ್ಲಿ ಹುಟ್ಟಿ ಮಣ್ಣಿನಲ್ಲಿಯೇ ಬೆಳೆಯುವರು. ಅವರ ಆಟಗಳಲ್ಲಿ ಚಿಣ್ಣಿದಾಂಡು, ಲಗ್ಗೀ ಚೆಂಡು, ಬಗಾಟಿ ಬೊಗರಿ, ಅಜ್ಜನ ಕೋಲಿದು ನನ್ನಯ ಕುದುರೆ ಮೊದಲಾದವು ಗಂಡುಮಕ್ಕಳ ಆಟಗಳಾದರೆ, ಕವಡಿ-ಬಳೆಚೂರಾಟ, ಹಗ್ಗದಾಟ, ಕಣ್ಣುಮುಚ್ಚಾಲೆ, ಇತ್ಯಾದಿ ಹೆಣ್ಣುಮಕ್ಕಳ ಆಟಗಳೆನಿಸುತ್ತವೆ. ಯುವಕ-ಯುವತಿಯರು ಆಡುವ ಆಟಗಳಲ್ಲಿ ಹುತುತೂ, ಖೋಖೋ, ಕೋಲಾಟ ಇವನ್ನು ಹೆಸರಿಸಬಹುದು. ಏನಿದ್ದರೂ ಈ ಮಕ್ಕಳ ಆಟಗಳು ಖರ್ಚು ಇಲ್ಲದವು. ಮನರಂಜನೆಯೊಡನೆ ಆರೋಗ್ಯವೃದ್ಧಿ ಮಾಡುವ ಕೃಷಿಕ ಮಕ್ಕಳ ಆಟಗಳು ಇಂದು ಕಣ್ಮರೆಯಾಗುತ್ತಿರುವುದು ವಿಷಾದನೀಯ.

'ಒಳ್ಳೇದು ಉಣ್ಣಲಿಲ್ಲ; ಒಳ್ಳೇದು ಉಡಲಿಲ್ಲ' ಎಂಬ ಲೋಕೋಕ್ತಿ ಕೃಷಿಕರನ್ನೇ ಕುರಿತು ಹುಟ್ಟಿದೆ. ವರ್ಷದಲ್ಲಿ ಹನ್ನೆರಡು ಅಮಾವಾಸೆಗಳು, ಹನ್ನೆರಡು ಹುಣ್ಣಿಮೆಗಳು ಹಾಗೆಯೇ ಜಾತ್ರೆ, ಉತ್ಸವಾದಿಗಳಿದ್ದರೂ, ಅವರ ದುಡಿಮೆಯಲ್ಲಿ ಇಂತಹ ಸಂದರ್ಭಗಳಲ್ಲಿಯೂ ಹೊಸಬಟ್ಟೆ ಧರಿಸಿ, ಮೃಷ್ಟಾನ್ನ ಉಣ್ಣಲು ಶಕ್ಯವಿಲ್ಲದಾಗಿದೆ. ಅಂತೆಯೇ 'ಹಬ್ಬದ ದಿನವೂ ಹಳೆಯ ಗಂಡನೇ?' ಎಂಬ ಗಾದೆ ರೂಢವಾಗಿದೆ. ರೈತರಿಗೆ ಬೆಳಗಿನ ನ್ಯಾರಿಗೆ ತಂಗಳರೊಟ್ಟಿ, ಮೊಸರು, ಕೆಂಪುಚಟ್ನಿ ಜೊತೆಗೆ ಉಳ್ಳೀಗಡ್ಡಿ (ಈರುಳ್ಳಿ) ಆದರೆ ತೀರಿತು. ಮಧ್ಯಾಹ್ನ. ಸಾಯಂಕಾಲದಲ್ಲಿಯೂ ರೊಟ್ಟಿ ಒಂದರೆಡು ಕಾಯಿಪಲ್ಲೆ ಆದರೆ ತೃಪ್ತಿ. ಅವರಿಗೆ ಅಕ್ಕಿ

ಅನ್ನ ಸಿಗುವುದು ಹಬ್ಬದ ದಿನಗಳಲ್ಲಿ ಮಾತ್ರ. ಹಬ್ಬದ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಹೋಳಿಗೆಯ ಊಟವಿರುತ್ತದೆ. ರೈತರು ಗೋದಿಯ ಆಹಾರ ಬಳಸುವದು ಕಡಿಮೆ. ಊಟದಲ್ಲಿ ಜೋಳದ ನುಚ್ಚು, ಮಜ್ಜಿಗೆ ಅವನ ಪ್ರೀತಿಯ ಆಹಾರ. ಅಂತೆಯೇ-

ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ ।
ಕಾಳಮ್ಮೆ ಕರೆದ ಹಯವಾಗಿ । ಬೆಳವಲದ ।
ಮೇಳ ನೋಡೆಂದ ಸರ್ವಜ್ಞ ॥

ಎಂದು ಜನಪದ ಕವಿ ಸರ್ವಜ್ಞ ಹಾಡಿದ್ದಾನೆ. 'ಜೋಳವನು ತಿಂಬವನು ತೋಳದಂತಾಗುವನು' ಎಂಬ ಸರ್ವಜ್ಞನ ಅಭಿಪ್ರಾಯದಂತೆ ಬೆಳವಲ ನಾಡಿನ ರೈತರು ಶಕ್ತಿವಂತರು. ಅವರಲ್ಲಿ ಅನೇಕರು ತುಂಬಿದ ಜೋಳದ ಚೀಲ (110 ಕೆ.ಜಿ. ಅಂದಾಜು)ವನ್ನು ತೆಕ್ಕೆ ಹೊಡೆದು ಎತ್ತುವರು. ಜಾತ್ರೆ ಉತ್ಸವಗಳಲ್ಲಿ ರೈತರ ಭಾರ ಎತ್ತುವ, ಭಾರ ಎಳೆಯುವ ಸ್ಪರ್ಧೆಗಳು ನಡೆಯುತ್ತವೆ.

ರೈತ ಪುರುಷರು ಕಚ್ಚೆ ದೋತರವನ್ನು ಉಡುತ್ತಾರೆ. ಮೇಲೆ ಒಂದು ಬನಿಯನ್ನು. ಅದಕ್ಕೆ ಅವರು 'ಮುಂಡಾ ಛಾಟಿ' ಎಂದು ಕರೆಯುವರು. ಇದರ ಮೇಲೆ ಒಂದು ಅಂಗಿ ಅದು ಕಪ್ಪಿನದು ಇಲ್ಲವೆ ನೆಹರೂ ಮಾದರಿಯದು, ತಲೆಗೆ ರೂಮಾಲು, ಪಟಗಾ ಇಲ್ಲವೆ ಟೊಪ್ಪಿಗೆ ಇರುವದು. ಕೆಲಸ ಮಾಡುವಾಗ ಮೈಯಲ್ಲಿ ಬನಿಯನ್ ಮಾತ್ರ ಇರುವುದು. ದೋತರವನ್ನು ಕೆಲಸದ ವೇಳೆಯಲ್ಲಿ ಗಂಡುಗಚ್ಚೆ ಹಾಕುವರು. ಇತ್ತೀಚಿಗೆ ರೈತರ ಹೆಗಲ ಮೇಲೆ ಹಸಿರು ಟಾವೆಲ್ ಬಂದಿದೆ. ರೈತ ಮಹಿಳೆಯರು ಥಡಿ, ಸೆರಗಿನ ಸೀರೆ ಉಟ್ಟು ಮೇಲೆ ಕುಪ್ಪಸ ತೊಡುತ್ತಾರೆ. ಮೈಮೇಲೆ ಬೆಳ್ಳಿ-ಬಂಗಾರದ ಆಭರಣಗಳು ತೀರ ವಿರಳ. ರಾತ್ರಿ ಮಲಗಿದಾಗ ಹೊದ್ದುಕೊಳ್ಳಲು ಕೌದಿ ಬಳಸುವರು. ಕೆಲವರು ಚಾದರ, ಕಂಬಳಿಗಳನ್ನು ಬಳಸುತ್ತಾರೆ. ಚಳಿಗಾಲದಲ್ಲಿ ಚಳಿಯಿಂದ ರಕ್ಷಿಸುವ ಹಾಗೂ ಬೇಸಿಗೆಯಲ್ಲಿ ಸೆಕೆಯಿಂದ ರಕ್ಷಿಸುವ ವಿಶಿಷ್ಟಗುಣ ಈ ಕೌದಿಯಲ್ಲಿದೆ. ಇದನ್ನೇ ವಿನೋದವಾಗಿ 'ಜಗದ್ಗುರು ಜಗದೀಶ; ಥಂಡಿ ಗುರು ಕೌದೀಶ' ಎಂದು ಹೇಳುವದುಂಟು. ಹೆಣ್ಣುಮಕ್ಕಳು ವಿಶೇಷವಾಗಿ ಬಳಸುವದು ಇಲಕಲ್ಲ ಸೀರೆ, ಹಾಗೂ ಗುಳೇದಗುಡ್ಡದ ಕುಪ್ಪಸ. ಸಾಮಾನ್ಯವಾಗಿ ಕೃಷಿಕ ಹೆಣ್ಣುಮಕ್ಕಳ ಸೀರೆಯ ಸೆರಗು ತಲೆಯ ಮೇಲೆ ಇರುತ್ತದೆ. ಮರಾಠಾ ಹಾಗೂ ಕೆಲವು ಬ್ರಾಹ್ಮಣ ಹೆಂಗಸರು ಕಚ್ಚೆ ಹಾಕಿ ಸೀರೆ ಉಡುತ್ತಾರೆ. ಕೈಯಲ್ಲಿ ಗಾಜಿನ ಬಳೆಗಳು, ಹಣೆಯಲ್ಲಿ ಕುಂಕುಮ ಮದುವೆಯಾದವರ ಕೊರಳಲ್ಲಿ ಮಂಗಲಸೂತ್ರ ಹಾಗು ಬೆಳ್ಳಿಯ ಕಾಲುಂಗರ ಕಡ್ಡಾಯವಾಗಿರುತ್ತವೆ. ನಮ್ಮ ಜನಪದರ ಆಭರಣಗಳು ಹಲವಾರು.

ಅವುಗಳಲ್ಲಿ ಬಹಳಷ್ಟು ಆಭರಣಗಳು ಮದುವೆ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಧರಿಸುವದುಂಟು.*

ಕೃಷಿಕರು ಜಾತ್ರೆ ಉತ್ಸವಗಳಲ್ಲಿ ದೊಡ್ಡಾಟ, ಡಪ್ಪಿನಾಟ, ಶ್ರೀಕೃಷ್ಣಪಾರಿಜಾತ, ತೊಗಲು ಬೊಂಬೆಯಾಟ, ಇವುಗಳಲ್ಲಿ ಒಂದೊ, ಎರಡೋ ಪ್ರತಿವರ್ಷ ತರಿಸಿ ನೋಡಿ ಸಂತಸ ಪಡುವರು. ದೊಡ್ಡಾಟ ಅಥವಾ ಬಯಲಾಟವನ್ನು ತಾವೇ ಸಿದ್ಧಪಡಿಸಿ ಆಡುತ್ತಿದ್ದುದೂ ಉಂಟು. ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಯಕ್ಷಗಾನವು ಪ್ರಸಿದ್ಧವಾಗಿದೆ. ಕೆಲವು ಗ್ರಾಮಗಳಲ್ಲಿ ಹವ್ಯಾಸಿ ನಾಟಕ ತಂಡಗಳು ಜಾತ್ರೆಗಳಲ್ಲಿ ಪ್ರದರ್ಶನ ನೀಡುತ್ತವೆ.

ಒಟ್ಟಿನಲ್ಲಿ ಜನಪದರು ತಮ್ಮ ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಕಡೆಗಣಿಸದೆ ಉಳಿಸಿ ಬೆಳಸಿಕೊಂಡು ಬಂದಿದ್ದಾರೆ. ಇವುಗಳ ಬಗ್ಗೆ ಅವರಿಗೆ ಕೀಳರಿಮೆ ಇಲ್ಲ; ಅಷ್ಟೇ ಏಕೆ? ಈ ಬಗೆಗೆ ಅವರಲ್ಲಿ ಅಪಾರ ಗೌರವವಿದೆ. ಅಂತೆಯೇ ಇವರು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳು' ಎಂಬ ಹೇಳಿಕೆಗೆ ಭಾಜನರಾಗಿದ್ದಾರೆ. ಅಶಿಕ್ಷಿತರಾದ ಇವರಲ್ಲಿ ಒಬ್ಬಿಬ್ಬರು ರಾಮಾಯಣ, ಮಹಾಭಾರತದ ಯಾವುದೇ ಸನ್ನಿವೇಶಗಳನ್ನು ಕತೆ ಮಾಡಿ ಹೇಳುವವರಾಗಿದ್ದಾರೆ. 'ಉಪ್ಪಿಕ್ಕಿದವರನ್ನು ಮುಪ್ಪಿನ ತನಕ ನೆನೆ' ಎಂಬ ಗಾದೆಯಂತೆ ಅವರು ಉಪಕಾರ ಮಾಡಿದವರನ್ನು ಎಂದೂ ಮರೆಯಲಾರರು.

ನಮ್ಮ ಜನಪದರ ತ್ಯಾಗಜೀವನದ ಪ್ರಸಂಗಗಳು ಹಲವಾರು. ಕೆರೆಕಟ್ಟಿಸುವಾಗ ನೀರು ಬರದಿರಲು ಗೌಡರ ಸೊಸೆ ಬಲಿದಾನ ಮಾಡಿ ನೀರು ತರಸಿದ್ದು, ಹಲಸಂಗಿಯ ಕೋಟೆ ಕಟ್ಟುತ್ತಿರುವಾಗ ನಿಲ್ಲದಿರಲು ಮಾದರಜಕ್ಕವ್ವ ಬಲಿಯಾಗಿ ಕೋಟೆ ಸಿದ್ಧವಾದುದು. ಇಂತಹ ಪ್ರಸಂಗಗಳು ಇಂದಿಗೂ ಉಳಿದು ಬಂದಿವೆ. ಇವುಗಳ ಕುರಿತು ಹಾಡು - ಕಥೆ ರಚಿಸಿದವರೂ ಜನಪದರೆ. ನಮ್ಮನಾಡಿನ ವೀರರ ಸ್ಮಾರಕಕ್ಕೆ ನೆಟ್ಟ ವೀರಗಲ್ಲುಗಳೂ, ಮಹಾ ಸತಿಯರ ಸ್ಮಾರಕದ ಮಾಸ್ತಿಕಲ್ಲುಗಳೂ ನಾಡಿನ ತ್ಯಾಗಜೀವಿಗಳ ಚರಿತ್ರೆಗೆ ಸಾಕ್ಷಿಯಾಗಿವೆ.

ನಮ್ಮ ಕೃಷಿಕರು ತಮ್ಮ ನಿತ್ಯಜೀವನದಲ್ಲಿ ಗಾದೆಗಳನ್ನು ಧಾರಾಳವಾಗಿ ಬಳಸುತ್ತ ಬಂದಿದ್ದಾರೆ. 'ಗಾದೆ ವೇದಕ್ಕೆ ಸಮಾನ', 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಈ ಮಾತುಗಳು ಗಾದೆಗಿರುವ ಮಹತಿಗೆ ಸಾಕ್ಷಿಯಾಗಿವೆ. ಇವುಗಳ ಸಂಗ್ರಹ, ಅಧ್ಯಯನವೇ ಕುತೂಹಲಕಾರಿಯಾದುದು. ಮಾದರಿಗಾಗಿ ಇಲ್ಲಿ ಕೆಲವು ಗಾದೆಗಳನ್ನು ಕೊಡಲಾಗಿದೆ.

---

* ಹೆಚ್ಚಿನ ವಿಷಯಕ್ಕೆ ನನ್ನ 'ಜಾನಪದ ಜೀವಾಳ' ಕೃತಿಯಲ್ಲಿಯ 'ನಮ್ಮ ಜನಪದದ ಆಭರಣಗಳು' ಲೇಖನ ನೋಡಬಹುದು.

ಕೃಷಿ :

1. ಮಳೆಯಿಲ್ಲದ ಪೈರೂ ಒಂದೇ ಮತಿಯಿಲ್ಲದ ಕೂಸೂ ಒಂದೇ.
2. ಮಳೆಗಾಲದ ಬಿಸಿಲು ನಂಬಲಾರದು, ನಗೆಗಾರನ ಮಾತು ನಂಬಬಾರದು.
3. ಅಟ್ಟುಂಬುವವನ ಹೆಂಡತಿ–ಮೊಟ್ಟೆ ಹೊಡೆಯುವವನ ಆಳು ಆಗಬಾರದು.
4. ಅಂಗೈ ಮಣ್ಣಾದರೆ ಅಂಗಳಿಗೆ ಗಂಜಿ.
5. ಅನ್ನ ಹಾಕಿದ ಮನೆ ಕೆಡಲ್ಲ, ಗೊಬ್ಬರ ಹಾಕಿದ ಹೊಲಾ ಕೆಡಲ್ಲ.
6. ಉಡಿಯಾನ ಬೀಜಕ್ಕಿಂತ ಹಿಡಿಯಾನ ಬೀಜ ಮುಂದ.
7. ಎತ್ತಿನ ಗುಣ ಉತ್ತವನೇ ಬಲ್ಲ.
8. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ.
9. ಆವು ಕರ ಇದ್ದ ಮನೆಗೆ ಬರವೇ ಇಲ್ಲ.
10. ಕೊಟ್ಟಿಗೆಗೆ ಎತ್ತು ಚೆಂದ, ಮೂಗಿಗೆ ನತ್ತು ಚೆಂದ.
11. ಧನವಿಲ್ಲದಿದ್ದರೂ ದನಾ ಇರಬೇಕು.
12. ಬಗ್ಗಿ ದುಡಿದರೆ ಮಾತ್ರ ಸುಗ್ಗಿಯಲ್ಲಿ ಹಿಗ್ಗು.
13. ಬೀಜ ಸಣ್ಣದಾದರೇನು ಮರ ಸಣ್ಣದೇ?
14. ಮನೆಗೊಬ್ಬ ಮುದುಕಿ ಹೊಲಕ್ಕೊಬ್ಬ ಮುದುಕ.
15. ಮಾಡಿದರೆ ಹೊಲ, ಹೂಡಿದರೆ ಒಲೆ, ತೋಡಿದರೆ ಭಾವಿ.
16. ಹೊಟ್ಟೆ ತುಂಬ ಹುಲ್ಲು ಹಂಡೆ ತುಂಬ ಹಾಲು.

ವ್ಯವಹಾರ :

1. ಅಜ್ಜಿ ನೂತದ್ದೆಲ್ಲಾ ಮೊಮ್ಮಗನ ಉಡುದಾರಕ್ಕೆ.
2. ಅತ್ತೆ ಒಡೆದ ಪಾತ್ರೆ ಹಳೆಯದು.
3. ಅನ್ಯಾಯದಿಂದ ಗಳಿಸಿದ್ದು ಅಡವಿಪಾಲು.
4. ಅತ್ತೆ ಸತ್ತ ಬಳಿಕ ಸೊಸೆಗೆ ಬುದ್ಧಿ ಬಂತು.
5. ಅಪ್ಪನಿಗೆ ಸಂತೆಯ ಚಿಂತೆ ಮಕ್ಕಳಿಗೆ ತಿನಿಸಿನ ಚಿಂತೆ.

6. ಅರಸು ಬೇಡಿ ಕೆಟ್ಟ ತಿರುಕ ಕೂತು ಕೆಟ್ಟ.
7. ಅಲ್ಪರ ಸಂಗ, ಅಭಿಮಾನ ಭಂಗ
8. ಇಗೋ ಮಣಿ, ತಗೋ ಮಣಿ, ತಾ ಮಣಿ.
9. ಉದ್ಯೋಗಂ ಪುರುಷ ಲಕ್ಷಣಂ.
10. ಕೊಳ್ಳುವಾಗ ಕುದುರೆ ಮಾರುವಾಗ ಕತ್ತೆ.
11. ಸಾಲ ತಲೆ ಹೊರೆ, ಬಡ್ಡಿ ಬಂಡಿಧಿ ಹೊರೆ.
12. ಹೊಲೆಯಾಳಿಗೊಂದು ಮನೆಯಾಳು.

ದಡ್ಡತನ :

1. ಅಜ್ಜಾ, ಮದುವೆ ಎಂದರೆ ಯಾರಿಗೆ ನನಗಾ ಎಂದ.
2. ಅರ್ಧ ಕಲಿತವನಿಗೆ ಅಬ್ಬರ ಹೆಚ್ಚು.
3. ಅಪ್ಪ ಸತ್ತ ಆರು ತಿಂಗಳಿಗೆ ಹುಚ್ಚುಮಗ ಹೊರಳಾಡಿ ಅತ್ತ.
4. ಅಪ್ಪಾ ಭಟ್ಟರ ಸೊಸೆಯಾಗಿ, ತಿಪ್ಪಾ ಭಟ್ಟರ ಮಗಳಾಗಿ 'ಲವಣ' ಎಂದರೆ ತಿಳಿಯೆನೇ ದೊಡ್ಡಮ್ಮಿ ಸೆಗಣಿ.
5. ಆಕಾಶ ನೋಡಲಿಕ್ಕೆ ನೂಕು ನುಗ್ಗಲು ಏಕೆ?
6. ಆನೆಯ ಮೇಲೆ ಕುಳಿತು ಬೇಡಬೇಡ.
7. ಇಲ್ಲದ ಊರಿನ ದಾರಿ ಕೇಳಿದರು.
8. ಊನನ ಕೂಡ ಕಾನನಕ್ಕೆ ಹೋಗಬೇಡ.
9. ಎರಡು ಕಣ ಕಾಯ್ದು ದಾಸಯ್ಯ ಕೆಟ್ಟ.
10. ಕಣ್ಣಿಲ್ಲದವರಿಗೆ ಕನ್ನಡಿಯೇಕೆ?
11. ಕೆಂಪು ಸೀರೆ ಉಟ್ಟಿರುವವಳೇ 'ನನ್ನ ಹೇಣ್ತಿ' ಅಂದ.
12. ತಾಳಿ ಕಟ್ಟಲಿಕ್ಕೆ ಕೂಲಿ ಕೇಳಿದ.
13. ಹಗ್ಗ ಸಾಲದ್ದಕ್ಕೆ ಭಾವಿ ಮುಚ್ಚಿದರು.
14. ಹೇನಿಗಂಜಿ ತಲೆ ಬೋಳಿಸಿಕೊಂಡರು.

ಜಾತೀಯತೆ :

1. ಆಯಗಾರನನ್ನು ಆಯಗಾರ ಸೇರ.
2. ಎಲ್ಲಮ್ಮನ ಗುಡ್ಡದಲ್ಲಿ ಮುಲ್ಲಾನದೇನು ?
3. ಕೋಮಟಿಗ ಕೊಡ, ಬಣಜಿಗ ಬಿಡ.
4. ಜನಿವಾರದವನನ್ನು ಜನ್ಮಾಂತರಕ್ಕೂ ನಂಬಬೇಡ.
5. ಊಟವಾದ ಮೇಲೆ ಜಾತಿ ಕೇಳಿದರು.
6. ಜೇಡನ ಹೆಂಡತಿ ಬೆತ್ತಲೆ.
7. ಬಿದ್ದ ಕಲ್ಲು ಅಗಸನದು, ಎದ್ದ ಕಲ್ಲು ಪೂಜಾರಿಯದು.

ಊಟೋಪಚಾರ

1. ಅನ್ನ ಇದ್ದಲ್ಲಿ ನಾಯಿ, ಹುಲ್ಲು ಇದ್ದಲ್ಲಿ ಹಸು.
2. ಅಂಬಲಿ ಊಟ ಕಂಬಳಿ ಹೊದಿಕೆ.
3. ಉಂಡಿದ್ದೇ ಉಗಾದಿ, ಮಿಂದಿದ್ದೇ ದೀವಳಿಗೆ.
4. ಊಟಕ್ಕೆ ಬಾಯಿಬೇಕು ಮಕ್ಕಳಿಗೆ ತಾಯಿಬೇಕು.
5. ಕೋಳಿ ತಿನ್ನುವವನಿಗೆ ಹೋಳಿಗೆ ರುಚಿಸೀತೆ.
6. ಹಸಿದು ಹಣ್ಣು ತಿನ್ನು ಉಂಡು ಕಬ್ಬು ತಿನ್ನು.
7. ಹಾಲುಂಡು ಮೇಲುಂಬರೇ?

ಹಾಸ್ಯರಸ :

1. ಅವಸರದಲ್ಲಿ ಅಜ್ಜಿ ಮೈನೆರೆದಳು.
2. ಇದ್ದಲ್ಲಿ ಗೌಡ ಹೋದಲ್ಲಿ ಕಿವುಡ.
3. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು.
4. ಚಟ ಬಿಡುವುದು ಚಟ್ಟ ಏರಿದಾಗಲೇ.
5. ಬಿಕ್ಕಿ ಬಿಕ್ಕಿ ಅತ್ತರೆ ಬೀಸುವ ಕಲ್ಲು ತಿರುಗುವುದೇ?

ಐತಿಹಾಸಿಕ ಪೌರಾಣಿಕ :

1. ಅಂಕೆಯಿಲ್ಲದೆ ಕಪಿ ಲಂಕೆ ಸುಟ್ಟಿತು.
2. ಉತ್ತರನ ಪೌರುಷ ಒಲೆಯ ಮುಂದೆ.
3. ಕಾಶಿಗೆ ಹೋದರೂ ಕರ್ಮ ಬಿಡಲಿಲ್ಲ.

ಅಶ್ಲೀಲ :

1. ಉಂಡಿದ್ದೆಲ್ಲಾ ಕುಂಡೀಲೆ ಹೋಯ್ತು.
2. ಕೂಸು ಮುದ್ದಾದರೆ ಹೂಸು ಮುದ್ದೇ?
3. ತೀಟೆ ತೀರಿದ ಮೇಲೆ ಲೌಡಿಯ ಸಂಗವೇಕೆ ?

'ಒಡಪು' ಉತ್ತರ ಕರ್ನಾಟಕದ ವಿಶಿಷ್ಟ ಗದ್ಯಸಾಹಿತ್ಯ. ವಿವಿಧ ಮಂಗಲ ಪ್ರಸಂಗಗಳಲ್ಲಿ ದಂಪತಿಗಳು ಪರಸ್ಪರ ಹೆಸರು ಹೇಳುವಾಗ ಹಿನ್ನೆಲೆಯಾಗಿ ಇವನ್ನು ಬಳಸುವದು ವಾಡಿಕೆ.

1) ಹೆಣ್ಣುಮಕ್ಕಳ ಒಡಪುಗಳು

(i) ಪ್ರಾಸಬದ್ಧ ರಚನೆಗೆ:

ಸುಂದರಾಧಿ ಅಂತಾರ
ಚೆಂದರನ ಹೋಲತಾರ
ವಂದನಾ ಮಾಡಿದರ ವರಾ ಕೊಡತಾರ............

ಸಿಟ್ಟಿನಿಂದ ನೋಡತಾರ
ಗುಟ್ಟಿನಿಂದ ಇರತಾರ
ರಟ್ಟಿ ಧಿಮುರಿದು ರೊಟ್ಟಿ ತಿಂತಾರ..................

(ii) ಕಲ್ಪನಾರಮ್ಯತೆಗೆ:

ಹಲ್ಲ ನೆಲ್ಲಕ್ಕಿ ಗಲ್ಲ ಕಮಳದ ಹೂವ
ಕಣ್ಣ ಕವಳಿ ಹಣ್ಣ, ಮೂಗ ಸಂಪಗಿ ಹೂವ
ನಮ್ಮ.........ರು ಸುಳಿದರ ಬೆಳಕು ಬೀಳ್ತಾದ.

ಸುಲಿದ ಹಲ್ಲ ಸುಗುಣ ಸಂಪೂರ್ಣ
ಏಕಾಂತರ ಹೊಟ್ಟೀಲೆ ಶ್ರೀಕಾಂತರು ಹುಟ್ಯಾರ.......

(iii) ದಾಂಪತ್ಯ ಪ್ರೇಮಕ್ಕೆ

ಮಲಮಲ ಅಂಗಿ ಮೈಯಾಗ
ಮಲ್ಲಿಗಿ ಹೂವ ಕೈಯಾಗ
ಮಲ್ಲಮ್ಮನಂಥಾ ಮಡದೀನ ಕರಕೊಂಡು
ಮಲ್ಲಯ್ಯನ ಗುಡಿಗೆ ಹೋಗ್ತಾರ...........

ಸೂಜಿ ಮಲ್ಲಿಗಿ ಜಾಜಿ ಮಲ್ಲಿಗಿ
ದುಂಡು ಮಲ್ಲಿಗಿ ಮಧ್ಯಾಣಮಲ್ಲಿಗಿ
ಎಲ್ಲಾ ಮಲ್ಲಿಗಿ ತಗೊಂಡು ಇದ್ದಲ್ಲಿ ಬರತಾರ

(iv) ಹಾಸ್ಯಕ್ಕೆ

ಇಲಕಲ್ಲ ಸೀರಿ
ಗುಳೇದಗುಡ್ಡ ಖಣಾ
..........ರ ಮಾತು ಒಣ ಒಣ

(v) ಆಧುನಿಕತೆಗೆ:

ಗೋದಿ ಭಕ್ರಿ ಚಿನ್ನಿ ಸಕ್ರಿ
ಊಟಕ್ಕೆ ಕರದರ ನಾಟಕಕ್ಕ ಹೋಗ್ತಾರ.........

2) ಗಂಡಸರ ಒಡಪುಗಳು

ಹೊಲದಾಗ ಬೆಳೆಯೂದು ಹುಲ್ಲ
ಕುಸ್ತಿಹಿಡಿಯುವವನಿಗನ್ನುವರು ಮಲ್ಲ
...........ಳು ಮಾಡ್ತಾಳ ಭಾಳ ಗುಲ್ಲ.

ಹಗ್ಗದಲೆ ಹೊಡದರ
ಮಗ್ಗಲಿಗೆ ಬರತಾಳ....

ಒಗಟು ಜಾನಪದದ ಇನ್ನೊಂದು ಪ್ರಕಾರ. ಬಿಡುವಿನ ಸಮಯದಲ್ಲಿ ಮತ್ತು ರಾತ್ರಿ ಮಲಗುವ ಮುಂಚೆ ಮನೆಯವರೆಲ್ಲ ಕೂಡಿ ಈ ಒಗಟುಗಳ ಪ್ರಶ್ನೋತ್ತರ ಸಾಗುತ್ತಿತ್ತು. ಇದು ಕೃಷಿಕರ ಮನರಂಜನೆ.

ಪ್ರಾಕೃತಿಕ ವಸ್ತು:ಕ್ರಿಯೆ	ಉತ್ತರಗಳು
1. ಕಣ್ಣಿಗೆ ಕಾಣದು, ಕೈಗೆ ಸಿಗದು, ಅದಿಲ್ಲದೆ ನಡೆಯದು	ಗಾಳಿ

2. ಶಿವರಾತ್ರಿ ಕಳಿಧಿತು. ಶಿವ ಶಿವಾ ಅಂತ ಹೋಯ್ತು — ಚಳಿ
3. ಜಗದ ಜನರಿಗೆಲ್ಲಾ ಒಂದೇ ಹಾಸಿಗೆ, ಒಂದೇ ಹೊದಿಕೆ. — ಭೂಮಿ, ಆಕಾಶ
4. ನೀರಲ್ಲಿ ಹುಟ್ಟಿ , ನೀರಲ್ಲಿ ಬೆಳೆದು ಅಲ್ಲೇ ಬೇಗನೆ ಸಾಯುವದು — ಗುರುಳೆ
5. ಕಟ್ಟಿ ಇಲ್ಲದ ಕೇರ್ಯಾಗ ಬೆಳ್ಳಿ ಬಟ್ಲ ತೇಲ್ತದ — ಚಂದ್ರ ಆಕಾಶ
6. ಕೆಳಗೆ ಬಾಗಿಲಿರುವ ಮನೆ, ಖರ್ಚಿಲ್ಲದ ಅರಮನೆ,
ಮರದಲ್ಲಿ ತೂಗುವ ತೂಗುಮನೆ — ಗೀಜಗನ ಗೂಡು
7. ಮುಗಿಲ ಮ್ಯಾಲ ಸೆಡ್ಡಿ ನೆಲದ ಮ್ಯಾಲ ಕೂರಿಗಿ ಬಿತ್ತೂದು
ಕಾಣೂದಿಲ್ಲ, ಬೀಜ ಮಾತ್ರ ಭೂಮಿ ಮ್ಯಾಲ ಕುಣಿತಾವ. — ಮಳೆ ಬೀಳುವದು

ಸಸ್ಯ ಸಂಪತ್ತು:

1. ಹಗ್ಗ ಹಾಸ್ಯಾದ ಗೂಳಿ ಮಲಗ್ಯಾದ — ಕುಂಬಳಬಳ್ಳಿ; ಕಾಯಿ
2. ಗಿಡ್ಡಗಿಡಕ ಗಿಣಿ ಮುಕುರ್ಯಾವ — ಮೆಣಸಿನಕಾಯಿ
3. ಅಂಕಡೊಂಕ 'ಸು', ಅದರ ತಮ್ಮ 'ಜೀ',
ಕರಿಯ ಗುಳಿಗಿ 'ಮೆ' — ಸುಂಟಿ, ಜೀರಗಿ, ಮೆಣಸು
4. ಬಂಗಾರ ಪೆಟಿಗ್ಯಾಗ ಬೆಳ್ಳಿ ಲಿಂಗ — ಹಲಸಿನ ಹಣ್ಣು
5. ಹಸಿರು ಕೋಲಿಗೆ ಮುತ್ತಿನ ತುರಾಯಿ — ಈರುಳ್ಳಿ ಹೂವು

ನಿತ್ಯದ ಸಲಕರಣೆಗಳು

1. ಬಂಗಾರ ಗುಬ್ಬಿ ಬಾಲದಲ್ಲಿ ನೀರು ಕುಡಿಯುತ್ತದೆ. — ಚಿಮಣಿ, ದೀಪ
2. ತೆಗ್ಗಿನಾಗ ಬಸಿರಾಗತೈತಿ, ತೆವರಾಗ ಹಡಿತೈತಿ — ತೊಗಲಿನ ಕಪಲಿ
3. ಕರಿ ಎತ್ತ ಕೈ ಹಚ್ಚಗೊಡುದಿಲ್ಲ — ಕಾದ ಹಂಚು
4. ಗಬ್ಬದ ಚೇಳು ಗುಡ್ಡ ಏರತೈತಿ — ತತ್ರಾಣಿ

ದೇಹಾಂಗಗಳು:

1. ಗುಡಿ ಹಿಂದ ಗುಂಡಗಲ್ಲ ಬಿದ್ದೈತಿ — ತುರುಬ
2. ಅವ್ವ ಅಂದಾಗ ಕೂಡೋದಿಲ್ಲ , ಅಪ್ಪ ಅಂದಾಗ ಕೂಡುವವು — ತುಟಿಗಳು

ಊಟೋಪಚಾರ:

1. ದುಡ್ಡುಕೊಟ್ಟು ತಂದು ಮುಂದ ಕುಂತು ಅಳತಾರ — ಈರುಳ್ಳಿ

2. ದಿಗ್‌ದಿಗ್ ಬರತಾದ, ದಿನ್ನಿ ಏರತಾದ,
ನೀರ ಕಂಡರ ಹಿಂದಕ ಸರಿತಾದ — ಉಕ್ಕುವ ಹಾಲು

3. ಗುಂಬ ನೀರಾಗ ಗುಂಡಗಲ್ಲ ತೇಲತೈತಿ — ಬೆಣ್ಣೆ ಮುದ್ದಿ

ವಿನೋದ :

1. ಬೆಳ್ಳಿ ಛಢಿ, ನೆಲಕ್ಕೆ ಬಡಿ — ಸುಂಬಳ

2. ಅವ್ವ ಅಪ್ಪನ ಬಿಟ್ಟು ತಿನ್ನುವುದೇನು? — ಹೆರಿಗೆಬೇನೆ ತಿನ್ನುವದು

ಅಶ್ಲೀಲ :

1. ನಿಂದರೊಳಗ ನಂದು ಅಳಗಾಡತಾದ — ಗಂಟೆ.

8. ಜಾನಪದ ಸಂಸ್ಕೃತಿ

'ಸಂಸ್ಕೃತಿ' ಎಂಬ ಪದವು ವಿಶಾಲಾರ್ಥವನ್ನು ಹೊಂದಿದೆ. ಒಂದು ಜನಸಮೂಹದ ಕೃಷಿ, ಕರಕುಶಲ ಕಲೆಗಳು ವಿವಾಹ ಮತ್ತು ಕುಟುಂಬಗಳಂತಹ ಸಾಮಾಜಿಕ ಸಂಸ್ಥೆಗಳು, ಧರ್ಮ, ಸಾಹಿತ್ಯ, ಭಾಷೆ, ಆಚಾರ-ವಿಚಾರಗಳು, ನಂಬಿಕೆ-ಸಂಪ್ರದಾಯಗಳು, ಇವುಗಳನ್ನೆಲ್ಲ ಒಟ್ಟಾಗಿ ಅರ್ಥೈಸುವುದೇ ಸಂಸ್ಕೃತಿ. ಇದನ್ನೇ ಸಂಕ್ಷಿಪ್ತವಾಗಿ ಹೇಳುವದಾದರೆ ಜನಸಮುದಾಯವೊಂದರ ಒಟ್ಟು ಜೀವನ ವಿಧಾನವೇ ಸಂಸ್ಕೃತಿ. ಯಾವುದೇ ಒಂದು ಸಮಾಜದ ಸಂಸ್ಕೃತಿಯೆಂದರೆ ಅಲ್ಲಿರುವ ದೈವಾರಾಧನೆ, ಜಾತ್ರೆ-ಉತ್ಸವಗಳು, ಹಬ್ಬ ಹರಿದಿನಗಳು, ವಿಶಿಷ್ಟ ಆಚರಣೆಗಳು, ಪುರಾಣ- ಐತಿಹ್ಯಗಳು ಇವುಗಳ ಒಟ್ಟು ಆಶಯ. ಆದರೆ ನಮ್ಮ ನಾಡಿನ ಸಂಸ್ಕೃತಿಯಲ್ಲಿ ಇವೆಲ್ಲ ಅಂಶಗಳು ಮರೆಯಾಗಿ ಕೇವಲ ಮತ-ಧರ್ಮಗಳ ಆಚರಣೆಯೇ ಸಂಸ್ಕೃತಿ ಎಂಬ ಸಂಕುಚಿತ ಅರ್ಥ ರೂಢಿಯಲ್ಲಿದೆ. ''ಒಂದು ಮತಧರ್ಮದ ಚೌಕಟ್ಟಿನಲ್ಲಿ ನರಳುವ ಆಚರಣೆ, ನೀತಿ ನಿಯಮಗಳು ಸಂಸ್ಕೃತಿ ಎಂಬ ಹೆಸರಿನಲ್ಲಿ ಬಳಕೆಯಾಗಿದ್ದರಿಂದ, ಈ ದೇಶದ ಸಂಸ್ಕೃತಿ- ಧರ್ಮಪರವಾಗಿ, ರಾಜಪರವಾಗಿ ಕೆಲಸ ನಿರ್ವಹಿಸಿದೆ. ಅಂದರೆ ಒಬ್ಬ ರಾಜನಿಂದ ಒಂದು ಮತದಿಂದ ಅಂದಂದಿನ ಜನಸಮುದಾಯ ಜೀವನವಿಧಾನ ನಿರ್ಧರಿತವಾಗಿದೆ. ಜನಸಮುದಾಯ ತನ್ನ ಜೀವನವಿಧಾನಗಳನ್ನು ತಾನೇ ರೂಪಿಸಿಕೊಳ್ಳಲು ಅವಕಾಶವಿಲ್ಲದ್ದಕ್ಕಾಗಿ ರಾಜಪ್ರಭುತ್ವ ಧರ್ಮಪ್ರಭುತ್ವಗಳ ತುಳಿತಕ್ಕೆ ಸಿಕ್ಕಿ ಈ ದೇಶದ ಜನತೆಯ ಬದುಕೆಲ್ಲ ರಾಜ-ಧರ್ಮಗಳ ಚೌಕಟ್ಟಿನಲ್ಲಿ ನರಳಿದೆ''.*

ಸಂಸ್ಕೃತಿಯು ಮತಾವಲಂಬಿ ವ್ಯಕ್ತಿಯ ಒಳತೋಟಿಗೆ ಸಂಬಂಧಿಸಿದ್ದು, ಮಾನಸಿಕ ಸಂಸ್ಕಾರಕ್ಕೆ ಈ ಸಂಸ್ಕೃತಿಯೇ ಮೂಲ ಮೊದಲಾದ ಏಕಮುಖ ಚಿಂತನೆಗಳ ಫಲವಾಗಿ ಕನ್ನಡ ನೆಲದ ಸಂಸ್ಕೃತಿ ಎಂದರೆ ವೈದಿಕ ಸಂಸ್ಕೃತಿ ಎಂಬ ತಪ್ಪುಕಲ್ಪನೆ ಜನರಲ್ಲಿ ಮನೆಮಾಡಿದೆ. ನಿಜವಾಗಿ ಹೇಳುವುದಾದರೆ ಕನ್ನಡ ನಾಡಿನ ಸಂಸ್ಕೃತಿಯು ಬಹುಮುಖೀ ಸಂಸ್ಕೃತಿಯ ನೆಲೆಗಳುಳ್ಳದು. ಇದರಲ್ಲಿ ಜನಸಾಮಾನ್ಯರ ಸಂಸ್ಕೃತಿ-ವಿಶಿಷ್ಟವಾದುದು ಎಂಬುದನ್ನು ವಿದ್ವಾಂಸರು ದುರುದ್ದೇಶದಿಂದ ಮರೆಮಾಚಿ ಅಲ್ಪಸಂಖ್ಯಾತರ ಪ್ರತಿಷ್ಠಿತ ಸಂಸ್ಕೃತಿಯನ್ನೇ ಮೆರೆಸುತ್ತ ಬಂದುದು ತುಂಬಲಾರದ ಹಾನಿ. ಹೀಗಾಗಿ ನಮ್ಮ ನೆಲದ ಜನಪದ ಸಂಸ್ಕೃತಿಗೆ

---

* ಡಾ. ಬಸವರಾಜ ಸಬರದ : ಹೊಸದಿಕ್ಕು, ಪು. 10

ಬಹಳಷ್ಟು ಅನ್ಯಾಯವಾಗಿದೆ. ಇದನ್ನು ಪುನಃ ರೂಪಿಸಿ ಅದರ ಸತ್ವ ಸಿದ್ಧಾಂತಗಳನ್ನು ತಿಳಿಸಿಕೊಡುವ ಹೊಣೆ ನಮ್ಮ ಮೇಲಿದೆ.

ಕೃಷಿಜಾನಪದ ಅಧ್ಯಯನವು ಸಾಂಸ್ಕೃತಿಕ ಮಾನವಶಾಸ್ತ್ರದ ಅಧ್ಯಯನವನ್ನು ಒಳಗೊಂಡಿದೆ. ನಮ್ಮ ಕೃಷಿ ಜಾನಪದವು ಸಾವಿರಾರು ವರ್ಷಗಳಷ್ಟು ಪ್ರಾಚೀನವಾದುದು. ಇಲ್ಲಿಯ ಭೂಮಿ, ನೀರು, ಹವಾಗುಣ ಇವುಗಳನ್ನು ಆಧರಿಸಿ ಸಾಗಿ ಬಂದಿರುವಂತಹದು. ಯಾವ ನೆಲಕ್ಕೆ ಯಾವ ಬೀಜ ಹಾಕಬೇಕು? ಆ ಬೆಳೆ ಬೆಳೆಸುವ ರೀತಿ ಎಂತಹದು? ರೋಗ ನಿವಾರಣಾಕ್ರಮ ಯಾವದು? ಒಕ್ಕುವ ಹಾಗೂ ದಾಸ್ತಾನು ಮಾಡುವ ಕ್ರಮಗಳಾವವು? ಇತ್ಯಾದಿಗಳು ನಮ್ಮ ಕೃಷಿಕರಿಗೆ ಗೊತ್ತು. ಅಂತಯೇ ರಾಷ್ಟ್ರಕವಿ ಕುವೆಂಪು ಅವರು ರೈತನನ್ನು 'ನೇಗಿಲಯೋಗಿ' ಎಂದು ಕರೆದಿದ್ದಾರೆ.

''ನೇಗಿಲು ಹಿಡಿದು ಹೊಲದೊಳು ಹಾಡುವ
ಉಳುವಾ ಯೋಗಿಯ ನೋಡಲ್ಲಿ'' ಎಂದು ಹೇಳುತ್ತ
''ರಾಜ್ಯಗಳುದಿಸಲಿ , ರಾಜ್ಯಗಳಳಿಯಲಿ
ತನ್ನೀ ಕೆಲಸವ ಬಿಡನೆಂದೂ'' ಎಂದಿರುವರು.

ಆದರೆ ಇಂದಿನ ವಸ್ತುಸ್ಥಿತಿ ಹಿಂದಿನಂತಿಲ್ಲ. ಸಾರಿಗೆ ಸಂಪರ್ಕಗಳು, ಸುದ್ದಿ ಮಾಧ್ಯಮಗಳು ರೈತನನ್ನು ಹಿಂದಿನಂತೆ ದೂರವಿಡದೆ ರಾಷ್ಟ್ರದ ಪ್ರಗತಿಯಲ್ಲಿ ಅವನನ್ನು ಜಗ್ಗಿ ತಂದು ಎಚ್ಚರಗೊಳಿಸತೊಡಗಿವೆ. ಇಂದಿನ ರೈತನ ಹೆಗಲಿಗೆ ರೇಡಿಯೊ ಬಂದಿದೆ. ಅವನ ಸೊಂಟಕ್ಕೆ ಮೊಬೈಲ್ ಬಂದಿದೆ. ಅವನ ಮನೆಯಲ್ಲಿ ದೂರದರ್ಶನ ಬಂದು ವಿಶ್ವದ ರಾಜಕೀಯ, ಆರ್ಥಿಕ, ಸಾಮಾಜಿಕ ಚಿತ್ರಣ ಗೊತ್ತಾಗತೊಡಗಿದೆ. ಇದರೊಂದಿಗೆ ಸುಧಾರಿತ ಬೇಸಾಯ, ಹೆಚ್ಚು ಆದಾಯ ಬರುವ ಕೃಷಿ ಇವುಗಳ ಬಗ್ಗೆ ಇಂದಿನ ರೈತ ತಲೆಕೆಡಿಸಿಕೊಳ್ಳತೊಡಗಿದ್ದಾನೆ. ಸ್ವಾತಂತ್ರ್ಯಾನಂತರ ನಮ್ಮ ಜನಸಂಖ್ಯೆ ವಿಪರೀತವಾಗಿ ಏರತೊಡಗಿದೆ. ಜನಸಂಖ್ಯೆಗೆ ಅನುಗುಣವಾಗಿ ನಾವು ಹೆಚ್ಚು ಆಹಾರ ಧಾನ್ಯ ಉತ್ಪಾದಿಸಬೇಕು. ಹೀಗಾಗಿ ಸರಕಾರವು ರೈತನ ತಲೆಯಲ್ಲಿ 'ಹಸಿರು ಕ್ರಾಂತಿ'ಯ ಹುಳ ತುಂಬಿಸಿತು.

ಇದರ ದುಷ್ಪರಿಣಾಮ ಒಂದಲ್ಲ, ಹಲವು. ಹೆಚ್ಚು ಬೆಳೆಯುವ ಗುಂಗಿನಲ್ಲಿ ಕಾಡು ಕಡಿದು ಸಾಗುವಳಿ ಭೂಮಿಯನ್ನಾಗಿ ಪರಿವರ್ತಿಸಲಾಯಿತು. ನೆಲದಲ್ಲಿ ಎಲ್ಲೆಂದರಲ್ಲಿ ಬೋರು ಕೊರೆದು ನೀರು ತೆಗೆಯಲಾಯಿತು. ಈಗ ಕನ್ನಡ ಜನಪದ ಸಮಾಜದೊಳಕ್ಕೆ ಪಂಪಸಟ್ಟು , ಟ್ರ್ಯಾಕ್ಟರ್, ನಮ್ಮ ನೆಲಕ್ಕೆ ಒಗ್ಗುವವೋ ಇಲ್ಲವೋ, ಗೊತ್ತಿಲ್ಲದ ಸುಧಾರಿಸಿದ ಬೀಜ, ರಸಗೊಬ್ಬರಗಳ ಹಾವಳಿ ನಡೆದಿದೆ. ಎಲ್ಲ ಬೆಳೆಗಳಿಗೂ ಹೊಸ ಹೊಸ ರೋಗಗಳು

ಕಾಣಿಸಿಕೊಳ್ಳತೊಡಗಿವೆ. ಈ ರೋಗಗಳ ಹತೋಟಿಗಾಗಿ ವಿವಿಧ ಕಂಪನಿಗಳ ಕ್ರಿಮಿ ನಾಶಕಗಳು ರೈತನ ಮನೆಬಾಗಿಲಿಗೆ ಬಂದಿವೆ. ಈ ಕ್ರಿಮಿನಾಶಕಗಳ ಬಳಕೆ ಕುರಿತು ದೂರದರ್ಶನದಲ್ಲಿ ಅಗ್ಗದ ಪ್ರಚಾರ ಸಾಗಿದೆ. ರೈತ ಈ ಪ್ರಚಾರದಿಂದಾಗಿ ಮೋಸ ಹೋಗತೊಡಗಿದ್ದಾನೆ. ನಮ್ಮ ರೈತ ಬುದ್ಧಿಜೀವಿಯಾಗಿರದೆ ಭಾವಜೀವಿಯಾಗಿರುವುದರಿಂದ ಅವನಿಗೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗತೊಡಗಿದೆ. ವ್ಯವಸಾಯಗಾರನ ಯೋಗಕ್ಷೇಮಕ್ಕೆ ಆಧಾರವಾದ ವ್ಯವಸಾಯ ಸಹಕಾರಿ ಸಂಘಗಳು ಚೇತರಿಸಿಕೊಳ್ಳಲಾರದ ಸಂಕಷ್ಟಕ್ಕೆ ಸಿಲುಕಿವೆ. ದಿಕ್ಕುಕಾಣದ ರೈತ ಆತ್ಮಹತ್ಯೆಗೆ ಕೊರಳು ಒಡ್ಡತೊಡಗಿದ್ದಾನೆ. ಇಂದಿನ ಭೂಮಿ ಬರಡಾಗತೊಡಗಿದೆ. ಮಳೆ ಕಡಿಮೆಯಾಗುತ್ತ ಬಂದಿದೆ.

ಈ ಸಂದರ್ಭದಲ್ಲಿ ಪೀಟರ್ ಫಾರ್ಬ ಹೇಳುವ ಕೆಲಮಾತುಗಳನ್ನು ಗಮನಿಸಬೇಕು. ''ಮಣ್ಣು ಜೀವಂತವಾದುದು, ಜೀವವಿರದ ಮಣ್ಣೇ ಇಲ್ಲ. ಮಣ್ಣಿರದೇ ಜೀವವಿಲ್ಲ. ಅದಕ್ಕೆ ನಾವು ಹಾಕುವ ಎಲೆಗಳ ಕೊಳೆತ ಹಸುರಿನ ತಾಯಿ. ಅದೇ ಮಣ್ಣು ಜೀವನದ ಚಕ್ರ. ಮಣ್ಣಿನ ಉಳುಮೆ ಎರೆಹುಳುಗಳಿಂದಲೇ ಆಗುತ್ತದೆ. ಭೂಮಿಯ ಒಳಗೆ ಅಪಾರ ಸಂಖ್ಯೆಯಲ್ಲಿರುವ ಇವನ್ನು ಅರಿಸ್ಟಾಟಲ್ ಕರುಳುಗಳು ಎಂದು ಗಣಿಸಿದ್ದ. ನೇಗಿಲು ಮಾನವನ ಅತ್ಯಂತ ಪ್ರಾಚೀನವಾದ ಅತ್ಯುಪಯೋಗವಾಗುವ ಯಂತ್ರಸಾಧನಗಳಲ್ಲಿ ಒಂದಾಗಿದ್ದರೂ ಅವನು ಬದುಕಿರುವ ಮುಂಚೆಯೇ ನಿಜವಾಗಿ ಎರೆಹುಳುಗಳಿಂದ ಕ್ರಮವಾಗಿ ಉಳಲ್ಪಟ್ಟಿರುವದಲ್ಲದೆ, ಇನ್ನೂ ಉಳಲ್ಪಡುತ್ತಿದೆ.'' ಆದರೆ ಇಂತಹ ಅಮೌಲ್ಯ ಹುಳುಗಳನ್ನು ನಾವು ಇಂದು ನಾಶಪಡಿಸಿದ್ದೇವೆ. ವಿಶೇಷವಾಗಿ ಬಳಸುವ ಕ್ರಿಮಿನಾಶಕಗಳಿಂದ ಇವು ಈಗ ಭೂಮಿಯಲ್ಲಿ ಕಾಣಸಿಗವು. ನಮ್ಮ ರೈತಬಳಸುವ ಕ್ರಿಮಿನಾಶಕಗಳಿಂದ ಪಡೆಯುವ ಆಹಾರಧಾನ್ಯ, ಹಣ್ಣು ಹಂಪಲು, ಕಾಯಿಪಲ್ಲೆಗಳ ಮೂಲಕ ಇಂದಿನ ರೈತ ಹಾಗೂ ನಾಗರಿಕರು ಪರ್ಯಾಯವಾಗಿ ವಿಷವನ್ನು ಅಲ್ಪ ಪ್ರಮಾಣದಲ್ಲಿ ಸೇವಿಸತೊಡಗಿದ್ದಾರೆ. ಮನುಷ್ಯ ತಿನ್ನುವ ದ್ರಾಕ್ಷಿ , ಎಲೆ ಬಳ್ಳಿಯಲ್ಲಿಯೂ ಕ್ರಿಮಿನಾಶಕ ಬಳಕೆಯಾಗುತ್ತಲಿದೆ.

ರಸಗೊಬ್ಬರಗಳ ಬಳಕೆ, ಕ್ರಿಮಿಕೀಟ, ಕಳೆನಾಶಕಗಳ ದುಷ್ಪರಿಣಾಮಗಳನ್ನು ಈಗಾಗಲೇ ವಿಜ್ಞಾನಿಗಳು ಹಾಗೂ ಪರಿಸರವಾದಿಗಳು ಹೇಳುತ್ತಿದ್ದಾರೆ. ಇದೊಂದು ಪಿಡುಗು ಎಂದು ಅವರು ಗೋಗರೆಯುತ್ತಿದ್ದರೂ ಅವರ ಸಂಖ್ಯೆ ವಿರಳವಾದ ಕಾರಣ ಇದರ ಪರಿಣಾಮ ಮಾತ್ರ ಶೂನ್ಯ. ಸರಕಾರವೂ ಈ ವಿಷಯದಲ್ಲಿ ಗಂಭೀರವಾಗಿ ಚಿಂತಿಸುತ್ತಿಲ್ಲ. ಕ್ರಿಮಿನಾಶಕ ಹೊಡೆದ ಹುಲ್ಲು ತಿಂದು ರೈತನ ದನಗಳು ಶಕ್ತಿಹೀನವಾಗತೊಡಗಿವೆ. ಹೀಗೆ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಕ್ರಿಮಿನಾಶಕಗಳಿಂದ ಆಗಿರುವ ಹಾಗೂ ಆಗುತ್ತಿರುವ ಅನಾಹುತಗಳನ್ನು

ಕುರಿತು ಡೇವಿಡ್ ಬೆಲ್ ಎಂಬುವರು 'A Growing Problem' ಎಂಬ ಒಂದು ಗ್ರಂಥ ರಚಿಸಿದ್ದಾರೆ. ಹಾಗೆಯೇ ವಿಶ್ವಪರಿಸರ ಸಮಿತಿಯವರು 'our common future' ಎಂಬ ಇನ್ನೊಂದು ಗ್ರಂಥವನ್ನು ಪ್ರಕಟಿಸಿದ್ದಾರೆ. ಡಾ|| ಕೆ. ಶಿವರಾಮಕಾರಂತರು ಈ ಎರಡೂಗ್ರಂಥಗಳ ಸಂಗ್ರಹಾನುವಾದ ಮಾಡಿ 'ಕೀಟನಾಶಕಗಳ ಪಿಡಗು' ಮತ್ತು 'ನಮ್ಮೆಲ್ಲರಿಗೂ ಒಂದೇ ಭವಿಷ್ಯ' ಎಂಬ ಶಿರೋನಾಮೆಯಲ್ಲಿ ಕನ್ನಡದಲ್ಲಿ ಗ್ರಂಥ ರಚಿಸಿದ್ದಾರೆ. ಇವು ನಮಗೀಗ ಎಚ್ಚರಿಕೆಯ ಮೊದಲ ಗಂಟೆಗಳು.

ನಿಸರ್ಗಕೃಷಿಗೆ ಹೆಸರಾಗಿರುವ ಜಪಾನಿನ ಫುಕುವೋಕ , ಶೂನ್ಯ ಬೇಸಾಯಕ್ಕೆ ಒತ್ತು ಕೊಡುತ್ತಿರುವ ಬೆಂಗಳೂರ ಬಳಿಯ ಸೋರಹುಣಸೆಯ ನಾರಾಯಣರೆಡ್ಡಿ , ಸಾವಯವ ಗೊಬ್ಬರದ ಸತ್‌ಪರಿಣಾಮವನ್ನು ತಿಳಿಸುತ್ತಿರುವ ಶಿವಮೊಗ್ಗ ಸಮೀಪದ ಕೃಷಿತಜ್ಞ ಪ್ರಫುಲ್ಲಚಂದ್ರ ಮೊದಲಾದವರ ವಿಚಾರಗಳನ್ನು ನಾವೀಗ ಪಾಲಿಸಬೇಕಾಗಿದೆ.

ಗಾಡಿ ಮಾರಿದಾಗ ನೊಗ ಉಳಿಸಿಕೊಳ್ಳುವ, ಎತ್ತು ಮಾರಿದಾಗ ಹಗ್ಗ ಉಳಿಸಿಕೊಳ್ಳುವ ನಮ್ಮ ರೈತ ಯಾವಾಗಲೂ ಆಶಾವಾದಿ. ಹಗೆ ತೆಗೆದಾಗ ತಳದಲ್ಲಿ ಒಂದು ಬೊಗಸೆ ಕಾಳು ಉಳಿಸುತ್ತಾನೆ. ಬಳ್ಳದಿಂದ ಅಳೆಯುವುದಾದ ಮೇಲೆ ಅದರಲ್ಲಿ ತುಸು ಧಾನ್ಯ ಹಾಕುತ್ತಾನೆ. ಅಳೆಯುವಾಗ ಮೊದಲ ಮಾಪಿಗೆ ಲಾಭ ಎನ್ನುತ್ತಾನೆ. ಹತ್ತು ಸೇರು ಆದಾಗ ಹತ್ತೆಚ್ಚು ಎನ್ನುವ ಅವನ ಮಾನಸಿಕ ಸಂಸ್ಕೃತಿ ನಾವಿಂದು ಅರಿಯಬೇಕಾಗಿದೆ. ಈಗ ಕನ್ನಡ ಜನಪದ ಸಮಾಜದೊಳಗೆ ಪಂಪ್‌ಸೆಟ್, ಟ್ರ್ಯಾಕ್ಟರ್ ಮೊದಲಾದ ಆಧುನಿಕ ಸಾಮಗ್ರಿಗಳು ಪ್ರವೇಶ ಪಡೆದಿವೆ. ಹೀಗಾಗಿ ಕೃಷಿಕರಲ್ಲಿ ಅಷ್ಟೇ ಏಕೆ– ಕುರಿಕಾಯುವವರಲ್ಲಿಯೂ 'ನಾಗರಿಕತೆ' ಇಣುಕತೊಡಗಿದೆ. ಅರ್ಧ ಸೇರು ಜೋಳವನ್ನು ಗಿರಣಿಗೆ ಒಯ್ದು ಸರದಿಗಾಗಿ ಕಾಯ್ದು ಬೀಸಿಕೊಂಡು ಬರುತ್ತಿದ್ದಾರೆ. ಹೀಗಾಗಿ ಕೃಷಿಕರೇ ಸೋಮಾರಿಗಳಾಗುತ್ತಿದ್ದಾರೆ. ಬೀಸುವ ಕುಟ್ಟುವ ಕಲ್ಲುಗಳು ಹಳ್ಳಿಗಳಲ್ಲಿಯೂ ಉಳಿದಿಲ್ಲ. ಆಗ ತಂದು ಆಗ ತಿನ್ನುವ ನೌಕರರ ಸ್ಥಿತಿ ಕೃಷಿಕರಲ್ಲಿ ಬಂದಿದೆ. ನಾಲ್ಕಾರು ಜನ ಬೀಗರು ಬಂದರೆ ಒದ್ದಾಡುವ ಸ್ಥಿತಿಯನ್ನು ರೈತರ ಮನೆಗಳಲ್ಲಿ ಕಾಣುತ್ತೇವೆ. ಬೀಸುವ– ಕುಟ್ಟುವ ಕ್ರಿಯೆ ನಿಂತು ಹೋದ ಮೇಲೆ ಆ ಉದ್ಯೋಗದೊಡನೆ ಹಾಡುವ ಹಾಡುಗಳು ನಶಿಸುಹತ್ತಿವೆ. ಈ ಸ್ಥಿತಿ ಎಲ್ಲ ಬಗೆಯ ಹಾಡುಗಳಿಗೂ ಬಂದೊದಗಿದೆ. ತಾಸಿನ ಮದುವೆಗಳ ಈ ಕಾಲದಲ್ಲಿ ಮದುವೆಯ ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುವ ಹಾಡುಗಳಿಗೆ ಅವಕಾಶವೂ ಇಲ್ಲ; ಸಮಯವೂ ಇಲ್ಲ. ಕಪಲಿ ಹೋದಮೇಲೆ ಆ ಹಾಡುಗಳೂ, ಹಂತಿ ನಿಂತ ಮೇಲೆ ಆ ಹಾಡುಗಳೂ ಕಾಣಸಿಗುತ್ತಿಲ್ಲ, ಕಪಲಿ ಎಂದರೇನು? ಹಂತಿ ಎಂದರೇನು? ಎಂದು ನಮ್ಮ ಮಕ್ಕಳು ಈಗ ಕೇಳುವಂತಾಗಿದೆ. ಜನಪದ ಒಗಟುಗಳೂ, ಒಡಪುಗಳೂ, ಕಥೆಗಳೂ ಈಗ

ಬಳಕೆಯಾಗುತ್ತಿಲ್ಲ. ಕಾರಣವೆಂದರೆ ಕೇಳುವವರಿಗೂ ಹೇಳುವವರಿಗೂ ಪುರಸೊತ್ತಿಲ್ಲ. ಎಲ್ಲದಕ್ಕೂ ಸಮಯಾಭಾವ.

ತೊಳೆನೀರು ಮಾಡಿದ ಹಾಲನ್ನು ಹಿಂದಿನವರು ಮಾರುತ್ತಿರಲಿಲ್ಲ. ಬೇಕಾದರೆ ಒಂದು ಬಟ್ಟಲು ಹಣಪಡೆಯದೆ ಕೊಡುತ್ತಿದ್ದರು. ಮಜ್ಜಿಗೆಗೆ ಆಗ ಶಿವದಾನ ಎಂದು ಹೆಸರಿತ್ತು. ಶಿವದಾನವೆಂದರೆ ಅದು ಪುಕ್ಕಟ್ಟೆಯಾಗಿ ಸಿಗುವ ವಸ್ತು. ಅದನ್ನು ಮಾರುವದೆಂದರೆ ಅನೀತಿ ಎಂಬ ಭಾವ ರೈತರಲ್ಲಿತ್ತು. ಮನೆಗೆ ಮೇಲುಮುದ್ದಿ ಹಾಕುವಾಗ, ಹೊರಸು ಹೆಣೆಯುವಾಗ ಓಣಿಯ ಜನರೆಲ್ಲ ಸೇರಿ ಆ ಕೆಲಸವನ್ನು ಫಲಾಪೇಕ್ಷೆಯಿಲ್ಲದೆ ಮಾಡುತ್ತಿದ್ದರು. ಹತ್ತಿ ಬಿಡಿಸುವಾಗ, ಕಳೆ ಕೀಳುವಾಗ ಹೆಣ್ಣುಮಕ್ಕಳು ಜನಪದ ಹಾಡು, ಕಥೆ, ಒಗಟು, ಒಡಪುಗಳನ್ನು ಹೇಳುತ್ತಿದ್ದರು. ಇದರಿಂದ ಅವರಿಗೆ ಕೆಲಸದಲ್ಲಿ ದಣಿವು ಅನಿಸುತ್ತಿರಲಿಲ್ಲ.

ಇಂದು ಈ ಸಾಹಿತ್ಯ ಗ್ರಂಥಸ್ಥವಾಗತೊಡಗಿದೆ. ಟೇಪರೆಕಾರ್ಡ್ ಮೂಲಕ ಈ ಹಾಡುಗಳ ದಾಟಿಯನ್ನು ಹಿಡಿದಿಡುವ ಪ್ರಯತ್ನ ಸಾಗಿದೆ. ಇದು ಸ್ತುತ್ಯ ಕಾರ್ಯವೇ ಸರಿ. ಈ ಸಾಹಿತ್ಯ ಉಳಿದರೂ ಈ ಹಾಡುಗಳ ಹುಟ್ಟಿಗೆ ಕಾರಣವಾದ ಉದ್ಯೋಗಗಳು ನಿಂತುಹೋದುದು ತುಂಬಿಬಾರದ ಹಾನಿ. ನಮ್ಮ ನಾಡಿನ ರಾಸಿರಾಸಿಯಾಗಿರುವ ಜನಪದ ಕಥೆಗಳಲ್ಲಿ ಸಂಸ್ಕೃತಿಯ ಬೀಜಗಳಿವೆ. ಹೊಲ ಕೊಂಡವನೊಬ್ಬ ಉಳುಮೆ ಮಾಡುತ್ತಿರುವಾಗ ಆ ಹೊಲದಲ್ಲಿ ನಿಽ ಸಿಗಲು ಅದು ತನ್ನದಲ್ಲವೆಂಬ ಭಾವದಿಂದ ಅದನ್ನು ಮೊದಲಿನ ಹೊಲದ ಯಜಮಾನನಿಗೆ ಮರಳಿಸಲು ಹೋದ ಸಂಗತಿ ಒಂದು ಕಥೆಯಲ್ಲಿದೆ. ಇಂತಹ ಕಥೆಗಳು ಕೃಷಿಕನ ಸಂಸ್ಕೃತಿಗೆ ಹಿಡಿದ ಕನ್ನಡಿಯಂತಿವೆ. ಸತ್ಯ, ತ್ಯಾಗ, ಶಾಂತಿ, ಸಹಕಾರ ಮುಂತಾದ ತತ್ವಗಳು ಹೇಳುವುದಕ್ಕಲ್ಲ; ಆಚರಿಸಿ ತೋರಿಸುವುದಕ್ಕೆ ಎಂಬ ಮಾತನ್ನು ನಾವು ಮರೆಯಬಾರದು. ಸಂಸ್ಕೃತಿ ಎಂಬುದು ಮಾನವೀಯ ಮೌಲ್ಯಗಳ ಜೀವಾಳ. ಜಾನಪದವು ಸಂಸ್ಕೃತಿಯ ರಕ್ಷಣೆಗಾಗಿ ಸೃಷ್ಟಿಯಾಗಿರುವಂತಹುದು. ಮಾನವನಿಗೆ ಆಹಾರವು ಬದುಕಲು ಹೇಗೆ ಅವಶ್ಯಕವೋ ಹಾಗೆಯೇ ಸಂಸ್ಕೃತಿಯು ಆಂತರಿಕ ಬದುಕಿನ ಶ್ರೇಷ್ಠತೆಗೆ ಅನಿವಾರ್ಯವಾಗಿದೆ ಎಂಬುದರ ಅರಿವನ್ನುಂಟುಮಾಡುತ್ತದೆ ಈ ಜಾನಪದ ಜ್ಞಾನ. ನಾವು ಇಂತಹ ಅಮೂಲ್ಯ ಜ್ಞಾನವನ್ನು ಕಡೆಗಣಿಸುವುದರಿಂದ ನಮ್ಮ ಮನವು ಅಶಾಂತಗೊಂಡು ಬಾಹ್ಯಸುಖದ ವಸ್ತುಗಳಲ್ಲಿ ಶಾಂತತೆಯನ್ನು ಹುಡುಕತೊಡಗಿದೆ. ಇದರ ಪರಿಣಾಮವಾಗಿ ವ್ಯಕ್ತಿಮೌಲ್ಯಕ್ಕಿಂತ ವಸ್ತುಮೌಲ್ಯವೇ ಶ್ರೇಷ್ಠವೆನಿಸಹತ್ತಿದೆ. ದಯಾಮೂಲವಾದ ಧರ್ಮವು ಭಯಮೂಲವಾಗಿ ಪರಿವರ್ತನೆಗೊಂಡು ಸಂಸ್ಕೃತಿಯ ಬೇರನ್ನೇ ಕತ್ತರಿಸತೊಡಗಿದೆ.

ಕೆಲವು ಪಂಡಿತರು ಜಾನಪದ ಪಳಿಯುಳಿಕೆ ಎಂದು ಅಭಿಪ್ರಾಯಪಡುತ್ತಾರೆ. ಇದು

ತಪ್ಪು. ಸರ್ವಕಾಲೀನವಾದ ಜಾನಪದಕ್ಕೆ ಕೊನೆಯೆಂಬುದಿಲ್ಲ. ಅದು ನಿತ್ಯನೂತನ; ಹಾಗೆಯೇ ಅದು ಸಾವನ್ನು ಽಕ್ಕರಿಸಿ ನಿತ್ಯ ಬದಲಾವಣೆಯೊಂದಿಗೆ ಜೀವಂತವಾದುದು. ಇದರಲ್ಲಿ ಆಚರಣೆಯ ವಿಧಾನಗಳಲ್ಲಿ ಬದಲಾವಣೆ ಆಗಿರಬಹುದು, ಆದರೆ ಅದರ ಆಶಯದಲ್ಲಿ ಅದು ಚಿರಂಜೀವಿ. ಇದೇ ಅದರ ನಿರಂತತೆಯ ಗುಟ್ಟು. ಹೊಸ ಹೊಸ ರೂಪದೊಂದಿಗೆ ಅದು ಫೀನಿಕ್ಸನಂತೆ ಮರುಹುಟ್ಟು ಪಡೆಯುತ್ತಲೇ ಇದೆ. ಜೀವನದ ಪ್ರವಾಹದೊಂದಿಗೆ ಅದು ಸದಾ ಚಲಿಸುತ್ತಿರುವದರಿಂದ ನಾವು ಅದರಲ್ಲಿ ಬದಲಾವಣೆ ಕಾಣುತ್ತೇವೆ ಆಷ್ಟೇ. ಇಂದು ಜಾನಪದದ ಮರುಚಿಂತನೆ ಪುನರ್ವಿಮರ್ಶೆಯ ಅವಶ್ಯಕತೆ ತುಂಬ ಇದೆ. ಅಧುನಿಕ ಜೀವನ ಶೈಲಿಯಿಂದ ತ್ವರಿತ ಗತಿಯಲ್ಲಿ ನಶಿಸಿ ಹೋಗುತ್ತಿರುವ ಜನಪದರ ಮೌಲಿಕ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು 'ಅನ್ವಯಿಕ ಜಾನಪದ' ಅಧ್ಯಯನದ ತುರ್ತು ಅಗತ್ಯವಿದೆ. ತಮ್ಮ ಮೂಲ ಸಂಸ್ಕೃತಿಯಿಂದ ಜನಪದರು ದೂರ ಸರಿಯುವ ಮುನ್ನವೇ ಅವರ ಜೀವನ ಸಂಸ್ಕೃತಿಯನ್ನು ಅನ್ವಯಿಕ ಜಾನಪದ ಅಧ್ಯಯನದ ನೆಲೆಯಲ್ಲಿ ಕಂಡುಕೊಳ್ಳಬೇಕಾಗಿದೆ. ಪಾಶ್ಚಾತ್ಯ ತತ್ತ್ವಸಿದ್ಧಾಂತ ಅಧ್ಯಯನ ಕ್ರಮಗಳ ನೆಲೆಯಲ್ಲಿ ನಮ್ಮ ಜಾನಪದವನ್ನು ಅಧ್ಯಯನ ಮಾಡುವ ವಿಚಾರ ಸರಿಯಾದುದಲ್ಲ. ನಮ್ಮ ಜಾನಪದದಲ್ಲಿಯೇ ನೂರಾರು ಕೈಗಳು ಕೆಲಸಮಾಡುವಷ್ಟು ಅವಕಾಶಗಳಿವೆ. ಹೊಸ ಹೊಸ ಸಂಶೋಧನೆಗಳು ವಿದ್ವಾಂಸರಿಗೆ ಸವಾಲಾಗಿ ನಿಂತಿವೆ.

ಜಾನಪದ ಅಧ್ಯಯನಕ್ಕಾಗಿಯೇ ಕರ್ನಾಟಕದಲ್ಲಿ ಒಂದು ವಿಶ್ವವಿದ್ಯಾನಿಲಯದ ಅವಶ್ಯಕತೆಯಿದೆ. ಇಲ್ಲಿ ಮಾಡಬೇಕಾದ ಕಾರ್ಯ ಸಾಕಷ್ಟಿದೆ. ಕನ್ನಡ ವಿಶ್ವವಿದ್ಯಾಲಯದಂತೆ ಇದಕ್ಕೂ ಭೌಗೋಲಿಕ ಮಿತಿ ಇರಕೂಡದು. ಸಮಗ್ರ ಕರ್ನಾಟಕದ ಜಾನಪದ ಅಧ್ಯಾಪನ, ಅಧ್ಯಯನ, ಸಂಶೋಧನ, ಗ್ರಂಥಪ್ರಕಟಣೆ ಮತ್ತು ಮಾರಾಟ, ಜಾನಪದಕ್ಕೆ ಸಂಬಂಽಸಿದ ಇನ್ನೂ ಹತ್ತು ಹಲವು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯ ಮಾಡಬೇಕು. ಜೊತೆಗೆ ಜಾನಪದದ ತೌಲನಿಕ ಅಧ್ಯಯನವೂ ನಡೆಯುವದು ಅವಶ್ಯವಿದೆ. ಈ ವಿಶ್ವವಿದ್ಯಾಲಯದಲ್ಲಿ ನುರಿತ ಜಾನಪದ ವಿದ್ವಾಂಸರ ಒಂದು ಪಡೆಯೇ ಶ್ರಮಿಸಬೇಕು. ಅಂದಾಗ ಮಾತ್ರ ನಮ್ಮ ಜಾನಪದದ ಭಾಂಡಾರ ಉಳಿದೀತು. 'ಜಾನಪದ ಅವಿನಾಶಿ'; 'ಜಾನಪದಕ್ಕೆ ಸಾವಿಲ್ಲ' ಎಂಬ ಮಾತುಗಳನ್ನು ನಾವು ಕೇಳುತ್ತಿರುತ್ತೇವೆ. ಒಂದು ಜಾನಪದ ನಾಶವಾದರೇನಾಯಿತು? ಮತ್ತೊಂದು ಹುಟ್ಟುತ್ತದೆ ಎನ್ನುವವರು ಜಾಣರಲ್ಲ. ಹೊಸದೊಂದು ಹುಟ್ಟಿದರೇನಾಯ್ತು, ಕಳೆದುದು ಕಳೆದಂತೆಯೇ ಅಲ್ಲವೇ ? ಎಂಬುದು ನ್ನ ಪ್ರಶ್ನೆ .

ಹಸಿವಿಗೆ ಹಾಲ್ಕೊಟ್ಟು ಸಿಸುವಿಗೆ ಬೆಣ್ಣೆಕೊಟ್ಟು ।
ಬಿಸಿಲಿಗಿ ನಿಂತವರ ನೆರಳಿಗೆ । ಕರೆದರೆ ।
ಅಸವಲ್ಲದ ಪುಣ್ಯ ಮಗನಿಗೆ ॥

ಇದೊಂದು ಜನಪದ ತ್ರಿಪದಿ. ಜನಪದರ ಪರಮಾದರ್ಶ ಇಲ್ಲಿ ಮೂಡಿ ನಿಂತಿದೆ. ಜನಪದ ಸಂಸ್ಕೃತಿಯ ಕೆನೆಯಂತಿರುವ ಇಂತಹ ತ್ರಿಪದಿಗಳು ಸಾವಿರಾರು. ಅಂತೆಯೇ ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯ ಅನುಭವಾಮೃತ ! ಜನಪದ ನಮ್ಮ ಶ್ರಮಿಕ ವರ್ಗದ ಸಂಸ್ಕೃತಿ!!

9. ಮುಗಿಸುವ ಮುನ್ನ :

ಜನಪದ ಸಾಹಿತ್ಯವೆಂದರೆ ಸಾಮಾನ್ಯವಾಗಿ ಕೃಷಿಕರದೇ ಸಾಹಿತ್ಯ. ಇದು ಕೃಷಿಕರ ಜೀವನದ ಅನೇಕ ಮಗ್ಗಲುಗಳನ್ನು ತಿಳಿಯಪಡಿಸುತ್ತದೆ. ಜನಪದ ಗೀತೆಗಳು ಕೃಷಿಕರ ಜೀವನದ ಎಲ್ಲ ಮಜಲುಗಳನ್ನು ತೆರೆದು ತೋರಿಸುತ್ತವೆ. ಈ ಹಾಡುಗಳು ಜನಪದ ಸಂಗೀತದ ಜೇನುಲೇಪವನ್ನು ಪಡೆದುಕೊಂಡೇ ಹುಟ್ಟುವದರಿಂದ ಅವು ಕೇಳುಗರನ್ನು ವಿಶೇಷವಾಗಿ ಆಕರ್ಷಿಸುತ್ತವೆ. ಜಾನಪದವು ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ, ವೈದ್ಯ, ನಂಬಿಕೆ –ಆಚರಣೆಗಳು ಮೊದಲಾದವುಗಳನ್ನು ಒಳಗೊಂಡಿದೆ.

ಕೃಷಿಕರ ಬದುಕಿನಲ್ಲಿ ಕಾಯಕ, ಜಾತೀಯತೆಯ ನಿರ್ಮೂಲನೆ, ದಾಸೋಹ, ದಯೆ, ಛಲ, ಸಹಕಾರ, ಶಾಂತಿ, ಸಹಜೀವನ ಮೊದಲಾದ ಶಾಶ್ವತ ಜೀವನ ಮೌಲ್ಯಗಳು ಹಾಸುಹೊಕ್ಕಾಗಿರುತ್ತವೆ. ಕೃಷಿಕರದು ನಿರಾಡಂಬರ ಬದುಕು. 'ಅಂಬಲಿಕಂಬಳಿ ರಾಸ್ತು ಮಿಕ್ಕದ್ದೆಲ್ಲಾ ಜಾಸ್ತು' ಎಂಬುದು ಅವರ ಜೀವನಸೂತ್ರ. 'ಹಾಡು ಹರವೋದು, ಮತ್ಸರ ಮರೆಯೋದು' ಅವರು ಸಾಽಸಿದ ಸಿದ್ಧಿ ! 'ರೈತ ಅಂದರೆ ರೊಕ್ಕದ ಗಿಡ', 'ಹೊಲಕ್ಕೆ ಸುರಿಸಿದ ಬೆವರಧಿ ಮುಂದ ಮುತ್ತಾಗಿ ಉದರತೈತಿ.' 'ಒಕ್ಕಲುತನ ಮಾಡಂವ ನೇಗಿಲುಯೋಗಿ, ಲಿಂಗಪೂಜಾ ಮಾಡಾಂವ ಶಿವಯೋಗಿ', ಇವೆಲ್ಲ ಗಾದೆಗಳು ರೈತನ ಮಹತಿಯನ್ನೇ ಸಾರುತ್ತವೆ. ಊಟದ ವಸ್ತುಗಳಲ್ಲಿ ರುಚಿಯಿಲ್ಲ, ಹಸಿವೆಯಲ್ಲಿ ರುಚಿಯಿದೆ ಎಂಬುದು ಅವನಿಗೆ ಚೆನ್ನಾಗಿ ಗೊತ್ತು. ಅವನ ಊಟದಲ್ಲಿ ವಿಶೇಷವೇನೂ ಇಲ್ಲ. ರೊಟ್ಟಿ, ಬೇಳೆಯ ಸಾರು ಇಲ್ಲವೆ ಮೊಸರು. ಅದೂ ಇಲ್ಲದಿದ್ದರೆ ಪುಂಡಿಪಲ್ಲೆ, ಈರುಳ್ಳಿ ಚಟ್ನಿ ಇಲ್ಲವೆ ಸೇಂಗಾ ಚಟ್ನಿ ಇದ್ದರಾಯಿತು, ಮೇಲೆ ಜೋಳದ ನುಚ್ಚು ಮಜ್ಜಿಗೆ ಬೇಕು. ಇಲ್ಲವೆ ಜೋಳದ ಅಂಬಲಿಯಾದರೂ ಆದೀತು. ದಿನದಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲ ಹೀಗೆ ಮೂರು ಊಟಗಳು. ರಾತ್ರಿ ಎಲ್ಲಿ ಮಲಗಿದರೂ ಕೆಲವೊಮ್ಮೆ ಹೆಂಟೆಯ ಹೊಲದಲ್ಲಿ ಮಲಗಿದರೂ ಸುಖನಿದ್ರೆ !

ಚಹಾ, ಕಾಫಿ ಮೊದಲಾದ ಪೇಯಗಳಿಂದ ರೈತ ಬಹುದೂರ. (ಈಗ ಇದಕ್ಕೂ ಮುಂದೆ ಹೋಗಿ ಸೆರೆ ಕುಡಿಯುವವರ ಸಂಖ್ಯೆ ಅಽಕವಾಗಿದೆ). ಎಕ್ಕೆ ಎಲೆಯಲ್ಲಿ ಚಿಲುಮೆ ತಯಾರಿಸಿ ಅದರಲ್ಲಿ ತಂಬಾಕು ತುಂಬಿ, ಚಕಮುಕಿಯಿಂದ ಹೊತ್ತಿಸಿ ಸೇದುವ ಕೆಲವು ರೈತರಿದ್ದರು. ಹಬ್ಬ-ಹುಣ್ಣಿಮೆಗಳಲ್ಲಿ ಎಲೆ ಅಡಿಕೆ ಸಾಮಾನ್ಯವಾಗಿತ್ತು. ಊರಿಗೊಂದು 'ತಾಲೀಮಖಾನೆ'ಗಳಿದ್ದವು. ಅಲ್ಲಿ ಅಂಗಸಾಧನೆ ಮಾಡಿ ಜಾತ್ರೆ ರಥೋತ್ಸವಗಳಲ್ಲಿ ಕುಸ್ತಿ ಹಿಡಿಯುತ್ತಿದ್ದ ಕೃಷಿಕರಿದ್ದರು. ಹಾಲು ಹೈನು ವೆಗ್ಗಳವಾಗಿದ್ದ ಕಾಲವದು. ಹೈನದಿಂದಲೇ ಒಕ್ಕಲಿಗನಿಗೆ ತ್ರಾಣ, ತೇಜಗಳು ಬರುವವೆಂಬುದನ್ನು ಅವನು ಅರಿತಿದ್ದ. ವರ್ಷದಲ್ಲಿ ಒಂದು ಸಾರೆ ಶ್ರೀಶೈಲಕ್ಕೋ, ಬಸವ ಕಲ್ಯಾಣಕ್ಕೋ ಯಾತ್ರೆ ಮಾಡುತ್ತಿದ್ದ. ಮದುವೆ ಮೊದಲಾದ ಮಂಗಲ ಕಾರ್ಯಗಳಲ್ಲಿ ರೈತರೆಲ್ಲಾ ಕೂಡಿ ಸಂತಸಪಡುತ್ತಿದ್ದರು. ವಿಶೇಷವಾಗಿ ಆಗ ಅಭಿನಯಿಸುತ್ತಿದ್ದ ಸಿದ್ಧರಾಮೇಶ್ವರ ಮೊದಲಾದ ನಾಟಕಗಳನ್ನು ನೋಡಿ ಅವರ ತತ್ತ್ವ ಸಿದ್ಧಾಂತಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದ.

ಭಾವಿ ಹೊಡೆಸುವಾಗ ಮನೆಯ ಯಜಮಾನ ಉಪ್ಪು ಬಿಟ್ಟು ವ್ರತ ಕೈಕೊಳ್ಳುತ್ತಿದ್ದ. ಇದರಿಂದ ಭಾವಿಗೆ ಸಿಹಿನೀರು ಬರುವದೆಂಬ ನಂಬಿಕೆ ಅವನದು. ಇಂತಹ ಸಾವಿರಾರು ನಂಬಿಕೆಗಳು ಅವನಲ್ಲಿದ್ದವು. ಇವುಗಳೆನ್ನಲ್ಲ ಇಂದಿನ ರೈತ ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದಾನೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಏನಿದ್ದರೂ 'ರೈತ ಜಗದ ಅನ್ನದಾತ' ಎಂಬುದು ತ್ರಿಕಾಲ ಸತ್ಯ.

✦ ✦ ✦

ಅಧ್ಯಾತ್ಮ ಕೃಷಿ

ಹಸಿಯಾಧಿತ ಕೂರಿಗ್ಹಾಸ ಲಗುಮಾಡಿ ।
ಹಿಂತಾ ಬರವ ಸಿಗಲಾಕಿಲ್ಲ ಬಿತ್ತ ದವಡಮಾಡಿ ।। ಪಲ್ಲ ।।
ಕುಂತು ನಿಂತು ಹೊತ್ತುಗಳಿಯಬ್ಯಾಡ ಖೋಡಿ ।
ನಾಳೆ ಹಸಿ ಬಿಗಿದರೆ ಹಲ್ಲ ನೀ ತೆರೆದಾಡಿ ।।1।।

ಶಮೆ , ದಮೆ ಎಂಬ ಎರಡು ಎತ್ತ ಹೂಡಿ ।
ನೀ ಸಾವಧಾನದಿಂದ ಬಿತ್ತ ತಿರುಗ್ಯಾಡಿ ।
ಕಾಮ ಕ್ರೋಧ ಮಿಣಿ ಹಗ್ಗ ಜಗ್ಗಿ ಬಿಧಿಗಿ ।
ನೀ ನೇಮ ನಿತ್ಯದಿಂದ ಬಿತ್ತ ದವಡ ಮಾಡಿ ।।2।।

ನಾಲ್ಕು ತಾಳ ಒಂದು ಮೇಳಿ ಐದು ಕೂಡಿ ।
ಇವು ಪಂಚತತ್ವ ಆದುವಪ್ಪ ಸವಜೋಡಿ ।।
ಕಡಸಾಲ ಕೂಡಸಾಲ ಮಾಡಿಗೀಡಿ ।
ನೀ ತಿರಿಗೊಮ್ಮೆ ನೋಡಿ ಮನ ಆನಂದ ಮಾಡಿ ।।3।।

ಕೀರ್ತಿಯೆಂಬ ಬೀಜಕಟ್ಟು ಉಡಿಯಲ್ಲಿ ।
ನೀ ನಿರ್ತನೋಡಿ ಬೀಜ ಬಿಡು ಮಂಡಿಯಲ್ಲಿ ।।
ಗುರ್ತ ತೋರುವ ಗುರು ಹಾನ ನಿನ್ನಲ್ಲಿ ।
ನೀ ಮರ್ತ ಇರಬ್ಯಾಡ ನಿನ್ನ ಮನದಲ್ಲಿ ।।4।।

ಬಿತ್ತುವಾಗ ನೀನು ಭಾಳ ದಣಕೊಂಡಿ ।
ಮುಕ್ತಿಯೆಂಬ ಬೆಳೆಯನ್ನು ಮುಂದ ಕಂಡಿ ।।
ಕಂತು ಹರನಂಗ ನೀ ಕುಂತು ಉಂಡಿ ।
ನಿನ್ನ ಅಂತರಂಗದೊಳು ಕಂತುಹರನ ಕಂಡಿ ।।5।।

ಲೇಸವಾದ ತಿಂತಿಣಿ ಊರಣ್ಣ ।
ಅಲ್ಲಿ ಸೃಸ್ಟಿ ಕರ್ತನಿರುವನು ಮೌನೇಶ್ವರ ।।
ಅಷ್ಟಮದಗಳ ತಿಳಿಯೊ ಪಾಮರ ।
ನೀ ಏಕನಿಷ್ಠದಿಂದ ನೆನಿಯೊ ಶಂಕರನ ।।6।।

✦ ✦ ✦

ಹೊಸಾ ಹೊಲ ಮಾಡಬೇಕು :

ಬಸವಣ್ಣನ ದಯದಿಂದ । ಹೊಸ ಹೊಲಾ ಮಾಡಬೇಕಾ ।
ಹೊಸ ಹೊಲದ ಗಡ್ಡಿ ಕಡಿಬೇಕ । ಮಡ್ಡಿ ಮುಡಿಬೇಕ ॥ ಪಲ್ಲ॥
ಗಡ್ಡಿ ಕಡಿಯಲುಬೇಕ । ಒಡ್ಡು ಹಾಕಲು ಬೇಕ ।
ಗೊಬ್ಬರದ ಬಂಡಿ ಬರಬೇಕ । ತೆಳ್ಳಗೆ ಹರವಬೇಕ ॥1॥

ತೆಳ್ಳಗ ಹರುವಲ್ಲಿ । ಒಳ್ಳೊಳ್ಳಿ ಮಳೆಯಾಗಿ ।
ಒಳ್ಳೊಳ್ಳೆ ಭೂಮಿ ಹಸಿಯಾಗಿ । ದೈವ ಖುಷಿಯಾಗಿ ॥2॥
ಹದನೋಡಿ ಹರಗಲುಬೇಕ । ಹಸಿನೋಡಿ ಬಿತ್ತಲುಬೇಕ ।
ಮುತ್ತಿನ ಕೂರಗಿ ಕಟ್ಟಬೇಕ । ಬೀಜ ಬಿಡಬೇಕ ॥3॥

ಜೋಳ ಕೊಯ್ಯಲುಬೇಕ । ಗೂಡು ಹಾಕಲು ಬೇಕ ।
ಮುತ್ತೈದೆಧಿರೆಲ್ಲಾ ಬರಬೇಕ । ತೆನಿಯ ಮುರಿಬೇಕ ॥4॥
ಜೋಳ ತೂರಲುಬೇಕ । ಚೀಲ ತುಂಬಲುಬೇಕ ।
ಚೀಲದ ಬಾಯಿ ಹೊಲಿಬೇಕ । ಬಂಡ್ಯಾಗ ಹೇರಬೇಕ ॥5॥

ಬಸವಣ್ಣನ ದಯದಿಂದ ಹೊಸ ಹೊಲಾ ಮಾಡಬೇಕ ।
ಹೊಸ ಹೊಲದ ಹೆಸರ ಇಡಬೇಕ । ನಾವು ಮೆರಿಬೇಕ ॥6॥

✦ ✦ ✦

ತತ್ತ್ವಪದ

ಹಾಲ ಕಾಸ ಕಾಸ ತಂಗಿ ಹಾಲ ಕಾಸ
ನಿಂದು ಕೆಟ್ಟ ಮನಸಧಿ ।
ಹೆಪ್ಪ ಹಾಕಿ ಕೆನಿಯಧಿ ಬಲಿಸಧಿ
ಮೊಸರಧಿ ಸೋಸಧಿ ಅದು ಬಲೇ ಖಾಸ ॥ ಪಲ್ಲವಿ ॥

ಹೀನ ಗುಣಗಳ ಗೊಬ್ಬರನೆಲ್ಲಾ ಗ್ವಾಳೇಮಾಡಧಿ
ತಂಗೀ ಉಡಗೀ ಬಿಧಿಡ ।
ಸತ್ಯ ಸಾಧೂರ ಬೆಂಕೀ ತಂದು ಪುಟವಧಿ ಮಾಡಧಿ
ಗಡಗೀ ಸುಟ್ಟ ನೋಡಧಿ ॥ 1 ॥

ಸುಟ್ಟ ಗಡಗೀ ಸಿಂಪೀ ಹಚ್ಚಿ ಕಮ್ಮಗ ತೊಳಿಯಧಿ
ಕೆಡೊದಿಲ್ಲ ಧಿ ತಿಳಿಯಧಿ ।
ಮೊಸರಿನೊಳಗಧಿ ಕಡಗೋಲ್ಹಾಕೀ ಕಡದಧಿ ಕಡಿಯಧಿ
ಪೂರ್ವದ ಪುಣ್ಯಾ ತಿಳಿಯ ॥2॥

ಪುಣ್ಯಾ ಎಂಬೂ ಬೆಣ್ಣಿ ತಗದು ಮುದ್ದಿಧಿ ಮಾಡಧಿ
ತುಪ್ಪಾ ಕಾಸೀ ನೋಡಧಿ ।
ಕಡಕೋಳ ಮಡಿವಾಳನ ಪಾದಕ ಎಡಿಯ ಮಾಡಧಿ
ಅಲ್ಲೇ ಮುಕ್ತಿ ಬೇಡಧಿ ॥3॥

✦ ✦ ✦

ಬಿತ್ತುವ ಶಕುನ :

ಸರ್ವ ಜನರಿಗೆಲ್ಲ ಸಮಜ ಹೇಳುವೆನು
ಕುಂತ ಕೇಳ್ರಿ, ನೀವು ಕಿವಿಗೊಟ್ಟು।
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವುದಿಲ್ಲ ಒಂದ ಎಳ್ಳೆಷ್ಟು ॥ಪಲ್ಲ॥

॥ಏರು॥

ಕುರುಡರು ಕುಂಟರು ಇಬ್ಬರು ಕೂಡಿ
ಬರಬಾರದು ಬೀಜದಿದಿರೀಗಿ
ಬಿತ್ತಿದಷ್ಟು ಹೊಲ ನಷ್ಟ ಆಗುವದು
ಅಷ್ಟು ಕೇಡ ಆಗುವದು ಗಾಳಿಗಿ ॥

ಹೊಲ ಮೊದಲ ಮಾಡಿ ಅಗಸಿ ಪರಿಯಂತರ
ಅಗಸಗಿತ್ತಿ ಬಂದರ ಅಡ್ಡಾಗಿ
ಹಾಲ ಸೋರಿ ಹೊಲ ಹಾಳಾಗಿ ಹೋದಿತ್ತ
ಕಾಳ ಬರುವದಿಲ್ಲ ಸೇರಿಮನಿಗಿ ॥

ಅಗಸಿಯೊಳಗ ನಾವಲಿಗ್ಯಾ ಬಂದರ
ಹಸಬಿ ಹಾಕಿಕೊಂಡ ಹೆಗಲೀಗಿ
ಬಿತ್ತಿದಷ್ಟು ಹೊಲ ಚಂಡಿಕ್ಯಾಡುವರು
ಕೈಸೆರೆಯಾಗುವದು ತುಡುಗರಿಗಿ ॥

॥ ಇಳುವು ॥

ಮನಿಬಿಟ್ಟು ನೂರಾರು ಹೆಜ್ಜಿಗಿ ಶೆಗಣಿ ತುಳಿದರ
ಹಾಯ್ದುದು ಕಾಡಿಗಿ
ಅಗಸಿಯೊಳಗ ಬಂಜಿ ಬಂದರ ಎದುರಿಗೆ
ಹೋಗು ಹಿಂದಕ ತಿರುಗಿ ॥
ಇದಕು ಮೀರಿ ನೀ ಬಿತ್ತಲಾಕ ಹೋದರ
ಹ್ವಾದಿಯೊ ದುರ್ಮರಣಾಗಿ ॥

ಖಂಡ ಮಾಂಸ ಬಂದರ ಎದುರಿಗಿ
ಹೋಗಿ ಹೂಡು ಜೋಡು ಕೂರಿಗಿ

ತುಂಬಿದ ಕೊಡ ಎರಡು ಬಂದರ ಬೇಗ
ಮೂಲಿಲ್ಲದ ಬೆಳಿ ಹುಲುಸಾಗಿ ।।

।।ಏರು।।

ಇಷ್ಟು ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಉತ್ಕೃಷ್ಟ
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವುದಿಲ್ಲ ಒಂದು ಎಳ್ಳಷ್ಟ ।।1।।

ಹೊಲ ಬಲಕ ಮಾಡಿ ಕೂರಿಗಿ ಹೂಡು
ಬಿಳಿ ಎತ್ತ ಮಾಡುತ ಬಲಕ
ಎಡಗಡಿ ಎತ್ತ ಬೆದರಿ ಹೋದರ
ಯಜಮಾನ್ನ ಹೆಂಡತಿ ಸಾಯುವಳು ತಡಕ ।।

ಉಡಿಯೊಳಗಿನ ಬೀಜ ಬಿದ್ದರ
ಎಷ್ಟಂದ ಹೇಳಲಪ್ಪ ನಾ ಶೋಕ
ಹಿರಿಸೊಸಿ ರಂಡಿಯಾಗುವಳು ।
ಮನಿಯಾಗ ಏನಿಕಿ ಮುಂದ ಹೇಳುವೆ ಕೆಡಕ ।।

ಹ್ವಾದದಿನ ಹಣಿ ಹಗ್ಗ ಬಾರಕೋಲ ಕಳೆದು ಬಂದರ ತಿಳಿ ನಿನ್ನ ಮನಕ
ಬಿತ್ತಿದವನ ಹೆಂಡತಿ ಸಾಯುವಳು ಹೀಂಗ ನೇಮವಿದು ಕಡಿತನಕ ।।

।। ಇಳವು।।

ಕೂರಿಗಿ ದಿಂಡ ಒಡದರ ಮೇಳಿ ಬಂತು ನಿನ್ನ ಜೀವಕ ಹೋಳಿ
ಕಣಕ ಬೆಂಕಿ ಹತ್ತುವದು ತಿಳಿಯಿಷ್ಟು
ಇಷ್ಟು ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಬಲು ಉತ್ಕೃಷ್ಟ ।।

।। ಏರು ।।

ಬಿತ್ತಿ ಬಂದು ಒಳಕಲ್ಲ ಬೀಸುಕಲ್ಲ ಮ್ಯಾಲ ಕೂಡಬ್ಯಾಡ ತಿಳಿನೀನ
ಬಿತ್ತಿದ ದಿನ ಹೆಂಡತಿ ಹಂತ್ಯಾಕ ಹೋದರೆ
ಹೊಲ ಹರಕಾಗಿ ಆಗಿ ಸಾಯುವದು ಸುಳಿ ಬೀಳುವುದು ತಿಳಿ ಖೂನ

ತಾಳ ಮುರದರ ಬಲಗಡಿಯೊಳಗಿನ ಹೆಚ್ಚಹೆರಿಗಿ ನಾಕಮಾನ
ಹೀಂಗ ಇರುವದು ಪ್ರಮಾಣ
ಗೋಪಾಳ ದುರದುಂಡಿ ಹೇಳಿದ ಶಕುನ
ಗುರುಪಾದ ಸ್ವಾಮಿ ಹಾಡಿ ತಿಳಿಸ್ಯಾನ
ಇಷ್ಟು ಶಕುನವೆಲ್ಲ ತಿಳಿದು ನಡದರ
ಮುಂದ ಆದೀತು ಉತ್ಕೃಷ್ಟ
ಬಿತ್ತು ಶಕುನಗಳ ಬಿಚ್ಚಿ ಹೇಳುವೆನು
ಮುಚ್ಚಿ ಇಡುವುದಿಲ್ಲ ಒಂದು ಎಳ್ಳಷ್ಟ ॥2॥

✦ ✦ ✦

ಹಂತಿಯಲ್ಲಿ ಮೇದರ ಕೇತಯ್ಯನ ಹಾಡು

ಸೂಚಕ ಪದ್ಯ: ಮರಣ ಬಂದರು ಕೂಡ ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ ॥1॥

ಶರಣ ಶಿವ ಕಾಯಕವ ಒರೆಗೆ ಹಚ್ಚುವರಾರು
ಹರ ಸಹಿತ ಸೋತು ಬದುಕಿಸಿದ । ಮೇದಾರ
ವರಕೇತ ನಿನಗೆ ಸರಿಯಾರು ॥2॥

ಚಿರಜೀವಿ ಕೇತಯ್ಯ ಹರ ಭಕ್ತ ನೀನಯ್ಯ
ಹಿರಿಯರಾರಿಲ್ಲ ನಿನಗಿಂತ । ಜಗದೊಳಗೆ
ನರಲೋಕ ಹಾಡಿ ಭಜಿಸುವದು ॥3॥

ನಿನ್ನ ಭಜನೆಯ ಹಾಡು ಹೊನ್ನ ಮಳೆ ಸುರಿದಂತೆ
ಹಣ್ಣಾದ ಎದೆಯ ಒಕ್ಕಲಿಗ । ಮಣ್ಣೊಳಗೆ
ಚಿನ್ನ ಬೆಳೆಕೊಂಡ ಒಣ ಬಿತ್ತ ॥4॥

ರನ್ನ ಬಟ್ಟಿಲ ಸೆಡ್ಡಿ ನುಣ್ಣನ್ನ ಕೋಲುಗಳ
ಹೊನ್ನ ಕೂರಿಗೆಗೆ ಸರಿಪಡಿಸಿ । ಬಿತ್ತಿದರೆ
ಚಿನ್ನ ಬೆಳವಲಕೆ ಕೇತಯ್ಯ ॥5॥

ಗುರುವಿಲ್ಲದೆ ಕಲಿತ ಹರಭಕ್ತ ನೀನೊಬ್ಬ
ನರಲೋಕದೊಳಗೆ ಯಾರುಂಟು। ಕೇತಯ್ಯ
ಚಿರವಂತ ಊಟ ನೀನ್ಹಾಡು ॥6॥

ಮಲೆನಾಡ ಗಡಿಯೊಳಗೆ ಉಳಿಮೆ ಬೆಟ್ಟದ ಕೆಳಗೆ
ಬೇಲೂರ ಕೇತ ಮೇದಾರ । ಕಾಡೊಳಗೆ
ಬೆಳೆದಾಡಿ ಕಲೆತ ಶಿವಮತವ ॥7॥

ಕೇತಯ್ಯ ನಿನ ಮಡದಿ ಸಾತವ್ವಳೆಂಬವಳು
ಜಾತಿ ಮೇದರದು ಕಸಬಿನಲಿ । ನಾಡೊಳಗೆ
ನೀತಿ ಶಿವಮತದ ಒರೆಗಲ್ಲು ॥8॥

ಕಾಡಿನೊಳಗಿರು ಹಾದಿ ಮೂಡಿ ವೇದಗಳಾಗಿ
ನಾಡೆನ್ನ ನುಂಗಿ ನಗುತಿರಲು । ಹೊಸ ಮತವು
ನಾಡಮೇಲಿರುವ ಶಿವಲೋಕ ॥9॥

ಹುಲಿಸಿಂಗ ಕರಡಿಗಳು ಬಲವಂತ ಪ್ರಾಣಿಗಳು
ಛಲದಿಂದ ಕೊಂದು ತಿನ್ನುವವು । ಥೂ ಹಿಂಸೆ
ಮಲೆತು ನಿಂತಿಹುದು ಕಾಡೊಳಗೆ ॥10॥

ನಾಡವರು ಹಾರುವರು ತೋಡಿ ಹೇಳುತ
ಹೂಡಿ ಯಾಗವನೆ ಕುರಿತಿಂದೂ । ಸಾರಿದರೆ
ನಾಡಿಗರು ಹೌದೆ ಶಿವಲಿಂಗ ॥11॥

ವೇದದೊಳು ದಯವಿಲ್ಲ ವೇದಗಳೆ ಕಾರುತಿವೆ
ಸಾಽಸಲು ಹೊಟ್ಟೆ ಹಾರುವರು । ಮೋಡಿಕೆಯು
ವೇದೆಂದು ಹೇಳಿ ಜಗನುಂಗಿ ॥12॥

ನಿತ್ಯದಲಿ ಕೇತಯ್ಯ ಕೆತ್ತುವನು ಬಿದಿರೆಳೆಯ
ಚಿತ್ತರದ ಬುಟ್ಟಿ ಮೊರ ಹೆಣೆದು । ಮಾರುವನು
ಉತ್ತಮರ ನಾಡು ಬೆಳೆವಲಕೆ ॥13॥

ಬತ್ತಿಸ ರಾಗದೊಳು ಸುತ್ತು ಹಾಡಿದ ಬಿದಿರು
ಹೊತ್ತೊಯ್ವ ಕಂಬಿ ಪರವುತಕೆ । ಮಾಗಡದ
ಸತ್ಯುಳ್ಳ ತೇರು ಬೆಳವಲಕೆ ॥14॥

ಚೆನ್ನಂಗಿ ಬಿದಿರೆಳೆಯ ನುಣ್ಣ ಮಾಟದ ತೇರ
ಹೊನ್ನ ಮಾಗಡದ ಹೂದೇರ । ಮೇದಾರ
ಅಣ್ಣಂದಿರಂದು ಕಟ್ಟಿದರು ॥15॥

ವೀರಭದ್ರನ ಮಂದೆ ಊರಿ ನಂದಿಯ ಕೋಲ
ಹಾರಾಡಿ ಕುಣಿದು ಕಡೆಹೇಳಿ । ಜಗದೊಳಗೆ
ಸಾರುವದು ಬಿದಿರು ಶಿವಮತದ ॥16॥

ಬಿದಿರು ಶಿವಮತ ಹೇಳ್ವ ಚದುರ ಸಾಹಸವೆಂದು
ಉದರೆಂದು ತನ್ನ ಕಾಯಕವ । ನಡೆಸುದಕೆ
ನೆದರ ನಿಚ್ಚಣಿಕೆ ಶಿವಪುರಕೆ ॥17॥

ಉದಿತ ಜೀವನ ರಾಟಿ ಕದರ ಕಾಯಕ ಮಾಡಿ
ನೆದರೆಂಬ ನೂಲ ಬಲುನೇತ । ಬಸವಣ್ಣ ।
ಸದರೆಂದು ನೇದ ಹೊಸಮತವ ॥18॥

ಬಸವ ಸಾರಿದನಂದು ಕುಶಲದಲಿ ವಚನಗಳ
ಮಸುಕಿರುಳು ಹರಿದು ನಸುಕಾತು । ಜಗದೊಳಗೆ
ಹೊಸಮತದ ಸೂರ್ಯನುದಿಸಿದನು ॥19॥

ತುಂಬಿ ತುಳುಕಿತು ಬೆಳಕು ಇಂಬನೀಯಿತು ಜಗಕೆ
ಕಂಬ ಬಸವೆಂದು ಹೊಸಮತಕೆ । ಕಲ್ಯಾಣ
ಮುಂಬದಿಯ ಭೇರಿ ಮೊಳಗಿದವು ॥20॥

ನಾನು ಬೊಮ್ಮನು ಎಂದು ತಾನ ಹಿಡಿಯಿತು ವೇದ
ಹೀನೆಂದು ಹೇಳಿ ವಚನಗಳು । ಸಾರಿದವು
ಮಾನ್ಯರಿಗೆ ಎಲ್ಲ ಬೊಮ್ಮೆಂದು ॥21॥

ಮೇದಾರ ಕೇತಯ್ಯ ವಾದ ಹೂಡದೆ ಕಂಡ
ನಾದವಿಲ್ಲೆಂದು ವೇದದೊಳು । ವಚನಗಳು
ಬೋಽಸಲು ಮಿಗಿಲು ಜನಕೆಂದು ॥22॥

ಶಿವಲಿಂಗ ನೆನಸಿದರೆ ಶಿವಪದವೆ ದೊರಕುವುದು
ಭವದೊಳಗೆ ನೋಡು ವೇದಗಳು । ಹಾರುವರು
ರವಿಕೆ ಬಿಗಿದುಟ್ಟ ಗೊಂಬಿಗಳು ॥23॥

ಕೇತ ಕೇಳಿದನಂದು ಸಾತವ್ವ ಹೇಳಿದಳು
ಜೀತ ಶಿವಮತಕೆ ನಾವಿಂದು । ಪತಿದೇವ
ಮಾತಾಡಿ ಬಹಳ ಫಲವೇನು ॥24॥

ಕಲ್ಯಾಣ ಭೂಮಿಯೊಳು ಎಲ್ಲಿ ಜನ ಬಲ್ಲವರು
ಹೊಲ್ಲೆಂಬ ನುಡಿಗೆ ತಾಣೆಲ್ಲ । ಶಿವಮತದ
ಸೊಲ್ಲೊಂದೆ ಸುತ್ತ ಕೇಳುವದು ॥25॥

ಜೀಯ ಬಸವನೆ ಶರಣು ಕಾಯಕವು ಶರಣರಿಗೆ
ತಾಯಿಬೇರಂತೆ ಶಿವಮತಕೆ । ಜಗದೊಳಗೆ
ಕಾಯಕವೆ ಕಾಣೊ ಕೈಲಾಸ ॥26॥

ಮಲೆನಾಡ ಕಾಡೊಳಗೆ ಅಲೆದಾಡಿ ಕಲಿತಿರುವ
ಚೆಲುವ ಶಿವಮತದ ಬೆಳಕನ್ನು । ತಿಳಿಯುದಕೆ
ಒಲೆದು ಕಲ್ಯಾಣ ಸೇರೋಣ ॥27॥

ಎಂದು ಕೇಳಿದ ಕೇತ ಅಂದು ಮನೆ ಬಿಟ್ಟಾತ
ಅಂದದಲಿ ಕೂಡಿ ಸತಿಯೊಡನೆ । ಕಲ್ಯಾಣ
ಚಂದ ಪಟ್ಟಣವ ಸೇರಿದನು ॥28॥

ಕಲ್ಯಾಣ ಪುರದೊಳಗೆ ಎಲ್ಲ ಶರಣರ ಕಂಡು
ಸಲ್ಲಿಸಲು ಸೇವೆ ಶಿವಮತಕೆ । ಕೇತಯ್ಯ
ನಿಲ್ಲದಲೆ ಕೂಡಿ ಮಂಟಪಕೆ ॥29॥

ಅಲ್ಲಮ ಪ್ರಭುವಿನಾ ಸೊಲ್ನುಡಿಗೆ ಕಿವಿಗೊಟ್ಟು
ಬಲ್ಲವರ ಮುಂದೆ ಕೈ ಮುಗಿದು । ಕೇತಯ್ಯ
ಹುಲ್ಲಾಗಿ ಮಾತ ಬೆಳಸಿದನು ॥30॥

ಬತ್ತಲೆಯ ಜಗ ಬೈಲು ಎತ್ತ ನೋಡಲು ಬೈಲು
ಸುತ್ತಾಡಿ ನಾದ ಬಿಂದೊಡೆದು । ಕಲೆಯಾಗಿ
ಚಿತ್ಕಳೆಯು ತುಂಬಿ ಜಗ ಹುಟ್ಟಿ ॥31॥

ನಾದವೇ ಬೀಜಾಗಿ ಭೇದಿಸಲು ಬಿಂದೊಡೆದು
ಸಾಽಸಲು ಕಳೆಯು ಮಳೆಯಾಗಿ । ಹೊಸ ಮತವು
ಪಾದೂರಿ ನಿಂತ ಶಿವ ಸಸಿಯು ॥ ॥32॥

ಲಿಂಗವೆಂಬುದು ಕೇಳೊ ಸಂಗಡಿಸಿ ಮೂವೊಡವೆ
ಭಂಗಾಗಿ ಹುಟ್ಟಿ ಚಿತ್ಕಳೆಯು । ಪರಮಾತ್ಮ
ಕಂಗೊಳಿಸಿ ಬೆಳಗಿ ಜಗ ತುಂಬಿ ॥33॥

ನಾದ ಕಲೆ ಬಿಂದುಗಳ ಹಾದಿ ಹೇಳಲು ಗಣಕೆ
ಮೇಧಾವಿ ಚೆನ್ನ ಬಸವಣ್ಣ । ಸಾರಿದನು
ಮೇದಾರ ಕೇತ ಬಂಟೆಂದು ॥ ॥34॥

ದಿನ ದಿನಕೆ ಕೇತಯ್ಯ ಕನಕಾದ ಶರಣರಿಗೆ
ಜನಕಾದ ಕೇತ ನಿಚ್ಚಣಿಕೆ । ನಿಜ ಪದಕೆ
ಹೊನಲಾದ ಹೊಲಸು ತೊಳೆಯುದಕೆ ॥35॥

ಹೊಸ ಮತವೇ ಲಿಂಗಾಗಿ ಕಸಬೆಂಬ ಕರಡಿಗೆಯು
ಹಸನ ಮನವದಕೆ ಶಿವದಾರ । ದಾಸೋಹ
ಉಸಿರು ಶಿವಶರಣ ಕೇತನಿಗೆ ॥ ॥36॥

ಹರಮತದ ಹಾಡುಗಳ ಮೊರದೊಳಗೆ ಹಣೆ ಹಣೆದು
ಕರಡಿಗೆಯ ತುಂಬಿ ಕಲ್ಯಾಣ । ಪೇಟೆಯೊಳು
ಶರಣರಿಗೆ ಮಾರಿ ದಾಸೋಹ ॥ ॥37॥

ಜಡಜೀವಿ ಕೇತಯ್ಯ ಕಡುಭಕ್ತ ಶಿವಮತಕೆ
ಅಡವಿಯೊಳು ಬಿದಿರು ಬಲು ಬೆಳೆದು । ಕೇತನಿಗೆ
ಸಡಗರದಿ ತೂಗಿ ಕರೆಯುವುದು ॥ ॥38॥

ಬಿದಿರು ಕೊಳ್ಳಕೆ ಹೋಗಿ ಹೊದರೊಳಗೆ ಕೈ ಹಾಕಿ
ಬಿದಿರೆಳೆಯ ಕೊಯ್ದು ನಿತ್ಯದಲಿ । ಕಾಯಕವ
ಬದುಕಿಸುತಲಿದ್ದ ಸತಿಯೊಡನೆ ॥ ॥39॥

ನಿತ್ಯದಲಿ ಜಂಗಮಕೆ ಸತ್ಯ ಸತಿ ಸಾತವ್ವ
ಅತ್ತಳದಿ ಪೂಜೆಗೈದುಣಿಸಿ । ದಾಸೋಹ
ಚಿತ್ತದಲಿ ನಡೆಸಿ ಇರುತಿರಲು ॥ ॥40॥

ನೂರೊಂದು ಸಾವಿರದ ಭೂರಿ ಜಂಗಮರುಂಡು
ಸಾರಿದರು ವಚನ ಮಂಟಪಕೆ । ಕೇತನದು
ಹೇರೆಂದು ಭಕ್ತಿ ದಾಸೋಹ ॥ ॥41॥

ದಿನದಂದೆ ಕೇತಯ್ಯ ಬನಸೇರಿ ಬಿದಿರುಗಳ
ಗೊನೆಗೊನೆಯ ಸವರಿ ಹಾಕುತಲಿ । ಗಗನದೊಳು
ಮನಸಿಜನ ವೈರಿ ಸತಿಯೊಡನೆ ॥ ॥42॥

ನಂದಿ ವಾಹನವೇರಿ ಚೆಂದಾಗಿ ಬರುತಿರಲು
ಮುಂದೆ ಕಲ್ಯಾಣ ಕಾಡೊಳಗೆ । ಪಾರ್ವತಿಯು
ಮುಂದರಿತು ನೋಡಿ ಕೇತೆಂದು ॥ ॥43॥

ಬಿದಿರು ಗಳಗಳ ಸೀಳಿ ನೆದರಿಟ್ಟು ಬಲು ಸೋಸಿ
ಪೊದರುಗಳ ತೆಗೆದು ಒಣಹಾಕಿ । ಕೇತಯ್ಯ
ಚದುರ ಶಿವಶರಣ ಕೂತಿರಲು ॥ ॥44॥

ಕೇತಯ್ಯ ನಿರುವಿಕೆಯ ಭೂತೇಶಗರುಹಿದಳು
ಸೈತೆ ಬಡತನವು ಶರಣರಿಗೆ । ಪತಿದೇವ
ದಾತೆಂಬ ನಾಮ ಹುಸಿ ನಿನಗೆ ॥ ॥45॥

ಲೋಕದೊಳು ಇಳುವೇರು ಯಾಕೆ ಮಾಡಿದಿ ದೇವ
ಬೇಕು ಬೇಡೆಂಬ ಕಸತರದೆ । ಹುಡುಗಾಟ
ಸಾಕು ಮಾಡಿನ್ನು ಶರಣರಿಗೆ ॥ ॥46॥

ನೋಡಲಾರದೆ ಭಕ್ತಿ ಕಾಡುವಿರಿ ಶರಣರನು
ಈಡೇನು ನಿಮ್ಮ ಶರಣರಿಗೆ । ಜಗದೊಳಗೆ
ಪೀಡಿಸಲು ಪೀಠ ಹೊಂದುವರು ॥ ॥47॥

ಹೊನ್ನು ಕಾಸಲು ಮತ್ತೆ ಕನ್ನೆ ಕಳೆ ತುಂಬುವುದು
ಚಿನ್ನ ಕಾದಂತೆ ಶಿವಭಕ್ತಿ । ಕರೆಯುವದೆ
ಕನ್ನಡಿಯು ಜನಕೆ ನೋಡೆಂದು ॥ ॥48॥

ವರಶರಣ ಕೇತಯ್ಯ ಕೊರಗುವನೆ ಕಾಯಕಕೆ
ಕರುಣೆ ನಿಮಗಿಲ್ಲ ಶರಣರಲಿ । ಜಗದೊಡೆಯ
ಚೊರಕೆನದೆ ನಿಮ್ಮ ಮನವೆಂತು ॥ ॥49॥

ಸತಿಪತಿಯ ಮಹಿಮೆಯನು ನುತಿಸದವರಾರುಂಟು
ಬತವೇನು ಕಾಡಬೇಕೆಂಬ । ಶರಣರಿಗೆ
ಜತನದಲಿ ಕಾಯೊ ಸುಖವಿತ್ತು ॥ ॥50॥

ಗಿರಿಜೆ ಹೇಳಲು ಹರಗೆ ಮರುಗಿ ಮಾತಾಡಿದನು
ಹೆರವರದು ತಟಕು ಮುಟ್ಟರೆಲೆ । ನೋಡೆಂದು
ಸುರಿಸಿದನು ಹೊನ್ನ ಬಿದಿರೊಳಗೆ ॥ ॥51॥

ಕಂಬಿಗಳು ಚೆನ್ನಾಗಿ ತುಂಬಿದವು ಮಣಿಮುತ್ತು
ಶಂಭುಹರ ದ್ರವ್ಯ ಹೆರವರದು । ಬೇಡೆಂದು
ಇಂಬೀಯದೆ ಮನಕೆ ಸಾಗಿದನು ॥ ॥52॥

ಭಂಗಾರ ಹುಳ ಹತ್ತಿ ಭಂಗವಾಗಿದೆ ಬಿದಿರು
ಕಂಗಳಿಗೆ ಬೇಡ ಹೊಲೆಯೆಂದ । ದಾಸೋಹ
ಸಂಗ ಜೋಡಣೆಗೆ ಕುಂದೆಂದ ॥ ॥53॥

ಮೆಳೆಮೆಳೆಯ ತಿರುಗಿದನು ಗಳವೊಂದು ಬಿದಿರಿಲ್ಲ
ಮೆಳೆ ತುಂಬ ನೋಡಿ ಮುತ್ತು ಮಣಿ । ಮಾಣಿಕವ
ಮಳ ಮಳಿಸಿ ತಿಳಿದ ಹೊಲೆಯೆಂದು ॥ ॥54॥

ಚಿಂತಿಸುತ ಶಿವನನ್ನು ಎಂಥ ಸಮಯವು ಬಂತು
ಪಂತವೇ ಹೋಯ್ತು ಕಾಯಕದ । ಕೇತೆಂದ
ಎಂತು ಸಾಗಿಸಲಿ ದಾಸೋಹ ॥ ॥55॥

ಗಗನವನೆ ಮುದ್ದಿಡುತ ಸೊಗಯಿಸಿತು ಬಿದಿರೊಂದು
ಮಿಗೆ ಬೆಳೆದು ನಿಂತು ಕಾಡೊಳಗೆ । ಕೇತಯ್ಯ
ಬಗೆದವನೆ ಕೊಯ್ದು ಚಲ್ಲುದಕೆ ॥ ॥56॥

ಕಸಬಗತ್ತಿಗಳನ್ನು ಮಸೆದು ಬಿಗಿದನು ನಡಕೆ
ಗಸನೆ ಕೈ ಕೊಟ್ಟು ಗಳವೇರಿ । ರೆಕ್ಕೆಗಳ
ತುಸು ಸವರಿ ತಳಕೆ ಚೆಲ್ಲಿದನು ॥ ॥57॥

ಮೇಲೇರಿ ಕಡಿವಾಗ ಕಾಲು ಜಾರಿತು ತಪ್ಪಿ
ಗಾಲ ಮೇಲಾಗಿ ಕೇತಯ್ಯ । ಧುಪ್ಪೆಂದು
ಹೋಳಾಗಿ ಬಿದ್ದ ಎದೆಯವಚಿ ॥ 58 ॥ ॥58॥

ಕೂರಲಗು ಬಲು ನಟ್ಟು ಏರಿ ಮುರಿಯಿತು ಎದೆಗೆ
ಕಾರಗತ್ತಲೆಯ ಬವಳಿಕೆಯೊ । ಮನ ತುಂಬಿ
ತೋರದಲೆ ಹೋಯ್ತು ಕಣ್ಮುಂದೆ ॥ ॥59॥

ಬಿಸಿರಗುತ ಚಿಮ್ಮುತಿರೆ ಹಸುನಗುತ ಕೇತಯ್ಯ
ನೊಸಲಗಣ್ಣನಿಗೆ ಕೈ ಮುಗಿದು । ಬೇಡಿದನು
ಕಸುವೊಂದೆ ಸಾಕು ಕಾಯಕಕೆ ॥ ॥60॥

ಹಾರದಿರು ಪಡುಗಡಲ ಏರಿ ಇಳಿಯುವ ರವಿಯೆ
ಮಾರ ಹರನಾಣೆ ಎನ್ನಾಣೆ । ಶಿವಶರಣ
ಽೀರ ಕಾಯಕದ ಮನದಾಣೆ ॥ ॥61॥

ಮೀರಿ ತುಂಬಿತು ಕಳೆಯು ವೀರ ಕೇತನಿಗಂದು
ತೀರಿಸುವೆ ದಿನದ ದಾಸೋಹ । ಈ ಹೊತ್ತು
ಹಾರಿದರೆ ಹರಣ ಕೇಡೆಂದು ॥ ॥62॥

ಕಡಿದೊಗೆದ ಬಿದಿರೆಳೆಯ ತಡೆಯದಲಿ ಕಟಗೊಂಡು
ಹಿಡಿದ ಮನೆಹಾದಿ ಅವಸರದಿ । ಮೊರಹೆಣೆದು
ಗಡನೆ ಮಾರೆಂದ ಹೆಂಡತಿಗೆ ॥ ॥63॥

ಹದಿಬದೆಯು ಸಾತವ್ವ ಕದಲಿಸದೆ ಆಣತಿಯ
ಕುದುಕಿನಲಿ ಹೋಗಿ ಪೇಟೆಯೊಳು । ಮೊರ ಮಾರಿ
ಒದಗಿಸಿದಳೂಟ ಜಂಗಮಕೆ ॥ ॥64॥

ದಾಸೋಹದಾಪರಸಿ ಸೂಸಿ ತುಂಬಿತು ಮನೆಯ
ಈಸಾಡಿ ಮನಸು ಕೇತನದು । ಜಂಗಮರು
ಆಸೆ ಹಸುವಿನದು ಹಿಂಗಿದುದು ॥ ॥65॥

ಬಂದ ಜಂಗಮ ಪರಿಸೆ ಅಂದೆ ಕರಗಿತು ಉಂಡು
ನಂದದಾ ದೀಪ ಕಾಯಕವು । ಕೇತನಿಗೆ
ಎಂದೆನುತ ಹೊಗಳಿ ನಡೆದಿರಲು ॥ ॥66॥

ಮುಂದೆ ಹೆಂಡತಿ ಕರೆದು ನೊಂದದಳಕದೆ ಕೇತ
ನಂದುವದು ದೀಪ ಮುರಿದಲಗ । ಕೀಳೆಂದ
ಹೊಂದುವೆನು ಶಿವನ ಅಡಿಗಳಿಗೆ ॥ ॥67॥

ಶಿವನೆಂದು ಎದೆ ನೋಡಿ ತವಕದಲಿ ಕಿತ್ತೊಗೆಯೆ
ಶಿವ ಶಿವನೆ ಮುಗಿಯಿತು ಕಾಯಕವು । ಎಂದೆನುತ
ಶಿವಯೋಗ ರವಿಯು ಮುಣಗಿದನು ॥ ॥68॥

ನೋಡಲಾರದೆ ರವಿಯು ಪಾಡ ಶಿವ ಶರಣರಿಗೆ
ಹೂಡುವುದು ಆಟ ಕತ್ತಲೆಯು। ತಂದೆಂದು
ಬಾಡಿತಾಕಾಶ ಕಣ್ಮುಚ್ಚಿ॥ ॥69॥

ಸಾತವ್ವ ಬಳಲಿದಳು ಯಾತನೆಯು ಬಲು ಆಗಿ
ಜೀತ ಶಿವ ಮತಕೆ ಕುಂಟಾತು। ನಂದಿಂದು
ಯಾತರದು ಬಾಳು ಶಿವಲಿಂಗ॥ ॥70॥

ಪತಿಯು ಲಿಂಗಾಗಿದ್ದ ಸತಿ ಶರಣೆ ನಾನಿದ್ದೆ
ರತನ ಕಾಯಕವೇ ಶಿವಪೂಜೆ। ಇಂದ್ಹೋತು
ಜತನೇಕೆ ಇನ್ನು ಬಾಳುದಕೆ॥ ॥71॥

ಅಂಗವಿಲ್ಲದ ಲಿಂಗ ಭಂಗ ನಿನಗೆಂದುಂಟು
ಜಂಗಮವೆ ನೀನು ಶಿವ ಬೆಳಕು। ನನ್ನಯ್ಯ
ಸಂಗ ಬೆರಸಿದನು ನಿನ್ನೊಡನೆ॥ ॥72॥

ಇರುಳೆಲ್ಲ ಸಾತವ್ವ ಹೊರಳಾಡಿ ಪತಿ ನೆನೆದು
ಮರುಳು ನಾನಿನ್ನು ಗೋಳಿಡಲು। ಎಲೆ ಜೀವ
ತರುಳಾಗಿ ಮಾಡು ಕಾಯಕವ॥ ॥73॥

ಇತ್ತ ಕೇತನ ಕಳೆಯು ಬತ್ತಲೆಯ ಜಗಬಿಟ್ಟು
ನೆತ್ತಿ ದಿಕ್ಕಿನೊಳು ಮೇಲೇರಿ। ಸುಳಿಸುಳಿದು
ನಿತ್ಯ ಪರಮನೊಳು ಒಂದಾಗಿ॥ ॥74॥

ಕತ್ತಲೆಯು ತುಂಬಿದರು ಚಿತ್ಕಳೆಯು ಕೇತನದು
ಗುತ್ತ ಕಾಯಕದ ಕಿಡಿಕಾರಿ। ಸಿಡಿಸಿಡಿದು
ಸುತ್ತೇರ ಬಾನ ಚಿಕ್ಯಾಗಿ॥ ॥75॥

ಕೇತನಾ ಚತ್ಕಳೆಯು ಹೋತು ಶಿವಸನ್ನಿಽಗೆ
ಮಾತು ಗುಗ್ಗಾತು ಶಿವ ಗಣಕೆ। ಶಿವ ಲೋಕ
ಚೇತನೆಯು ತುಂಬಿ ಬೆಳಗಾತು॥ ॥76॥

ಬೆಳಕು ಮನೆಮನೆ ಹೊಕ್ಕು ಕಳಕಳಿಯು ಬರುವಂತೆ
ತಿಳಿಸುವುದೊ ಸುದ್ದಿಯೆಂಬಂತೆ। ರವಿಕಿರಣ
ಹೊಳಪಿಳಿದು ಚದರಿ ಚೆಲ್ಲಿದವು॥ ॥77॥

ನಿತ್ಯದಲಿ ಊರೊಳಗೆ ಹೊತ್ತೊಯ್ದು ಹೂ ಪತ್ರಿ
ಹೊತ್ತು ಹೊರುಡುದಕೆ ಹೂಗಾರ । ಮಾದಣ್ಣ
ಸತ್ಯ ಶರಣರಿಗೆ ಕೊಡುತಿರುವ ॥ ॥78॥

ಮೇದಾರ ಕೇತಯ್ಯ ಹೋದಿರುಳು ನೀಗಿದುದು
ಚೋದ್ಯೆಂದು ಸುದ್ದಿ ಮಂಟಪಕೆ । ಹರವಿದನು
ಸೋದರರನ ಸಾವು ಮೇಲೆಂದು ॥ ॥79॥

ಕಲ್ಯಾಣ ಮಂಟಪವು ನಿಲ್ಲದಲೆ ಕೂಡೆದ್ದು
ತಲ್ಲಣಿಸಿ ಬಂತು ಆ ಮನಿಗೆ । ಕೇತನಿಗೆ
ಸಲ್ಲುಸಮಾsಯ ಮಾಡುದಕೆ ॥ ॥80॥

ಎಲ್ಲ ಶರಣರು ಸೇವೆ ಸಲ್ಲಿಸಲು ಕೂಡಿರಲು
ಜಲ್ಲೆಂದು ಗಣಕೆ ಕೇಳಿದನು । ಬಸವಣ್ಣ
ಎಲ್ಲಿ ಮಾಚಯ್ಯ ಕರೆಕಳಿಸು ॥ ॥81॥

ಉತ್ತಣ್ಣ ಪಡಿಹಾರಿ ಇತ್ತ ಬೇಗನೆ ಬಾರೊ
ಹೊತ್ತು ಗಳೆಯದಲೆ ಈ ಸುದ್ದಿ । ಮಾಚನಿಗೆ
ಹೊತ್ತೊಯ್ದು ತಿಳಿಸಿ ಬರಹೇಳು ॥ ॥82॥

ನಂದಿ ಬಟ್ಟಲ ಹಿಡಿದು ಬಂದಾನ ಪಡಿಹಾರ
ಅಂದು ಉತ್ತಣ್ಣ ಕೈಮುಗಿದು । ಮಾಚನಿಗೆ
ಬಂದ ಕಾರಣವ ಹೇಳಿದನು ॥ ॥83॥

ಶರಣಕೇತಯ್ಯೆಂದು ಹರಣ ನೀಗಿದ ದೇವ
ದೊರೆಬಸವ ನನ್ನ ಕಳಿಸಿದರು । ನಿಮ್ಮಡಿಗೆ
ಅರುಹಿ ಈ ಸುದ್ದಿ ಕರೆತರಲು ॥ ॥84॥

ಹರಹರನೆ ಶರಣರಿಗೆ ಮರಣವೊದಗಿತೆ ಇಂದು
ಬರಲಾರೆ ಹೇಳು ಬಸವನಿಗೆ । ನಾನಲ್ಲಿ
ಹೊರತಾಗಿ ಮಾತ ನುಡಿಲಾರೆ ॥ ॥85॥

ನಾನು ಬಸವನ ಮುಖವ ಏನು ನೋಡಲಿ ಕೇಳು
ಮಾನವಂತರಿಗೆ ತಮ್ಮೊಚನ । ಪ್ರಾಣೆಂಬ
ತಾನ ಬಿಟ್ಟಿಹನು ಬಸವೇಶ ॥ ॥86॥

ತಾನೇ ಆಡಿದನೆಂದು ಮಾನಿ ಬಸವೇಶನಿಗೆ
ಪ್ರಾಣ ಶರಣಳಿವು ತನಗೆಂದು । ಮರೆತಿಂದು
ಗಾನಿ ತಾನೆಂದು ಕಳಿಸಿದನೆ ॥ ॥87॥

ತನ್ನ ಮರೆತನು ಬಸವ ಇನ್ನೇನು ಜಗದೊಳಗೆ
ಎನ್ನ ಗೊಡವೇಕೆ ಬಸವನಿಗೆ । ಹೇಳವಗೆ
ತನ್ನಡತೆ ತನಗೆ ಮಿಗಿಲೆಂದು ॥ ॥88॥

ಆಚಾರ ಹೊರಗಾಡಿ ಆರು ಬಿಡಿಕಿಯರೊಳಗೆ
ನಾಚದಲೆ ಇರುವ ಜನವುಂಟು । ಉತ್ತಣ್ಣ
ಬಾಚಿ ಹೊತ್ತಿರುವೆ ನಾನದಕೆ ॥ ॥89॥

ಮಾಚಯ್ಯ ಬಿರುನುಡಿಯೆ ತೋಚದಲೆ ಉತ್ತಣ್ಣ
ಪೀಚಿ ತಾನೆಂದು ತಿಳಿಯುದಕೆ । ಬಸವನಿಗೆ
ಏಚುಪೇಚಿಡದೆ ಹೇಳಿದನು ॥ ॥90॥

ಪಡಿಹಾರಿ ಉತ್ತಣ್ಣ ಮಡಿವಾಳನಾಣತಿಯ
ನಡೆತಂದು ಹೇಳೆ ಶರಣರೊಳು । ದುಂಡೇಶ
ದಡಪಡಿಸಿ ಶಾಂತ ಹೊಂದಿದನು ॥ ॥91॥

ಕೇಳಿದನು ಬಸವೇಶ ತಾಳಿದನು ಗುರುವೆಂದು
ಹೇಳಿ ಕಳಿಸಿದನು ಎಚ್ಚರಿಕೆ । ಹರುಷದಲಿ
ನಾಳೆನದೆ ವಚನ ಪಾಲಿಸುವೆ ॥ ॥92॥

ಪ್ರಾಣಲಿಂಗವೇ ಹೋಗು ಆಣತಿಯ ಬಸವಿತ್ತ
ಮಾಣಿಸಲು ಬಂದ ಕುಂದೆನಗೆ । ಎಂದೆನುತ
ನಾಣಿ ಭಾವದೊಳು ತೂಗಡಿಸಿ ॥ ॥93॥

ಅನ್ನು ಅನ್ನುದರೊಳಗೆ ಮುನ್ನ ಹೋಯಿತು ಪ್ರಾಣ
ನನ್ನಿ ಕೇತನಿಗೆ ಸಗ್ಗದೊಳು । ಮಾತಾಡಿ
ನಿನ್ನಡಿಗೆ ಬಂದೆ ಶಿವನೆಂದು ॥ ॥94॥

ಅಂತು ಬಸವನು ಹರಣ ಕುಂತಲ್ಲೆ ನೀಗಿದನು
ನಿಂತು ನೋಡಿದರು ಜಂಗಮರು । ಗೋಳಿಡುತ
ಬಂತಿಂದು ಕೇಡು ಜಗಕೆಂದು ॥ ॥95॥

ಹಂಬಲಿಸಿ ಬೇಡಿದರೆ ಇಂಬು ಕೊಡುವರು ಯಾರು
ಶಂಭುಹರನಿದ್ದ ದಂಡೇಶ । ಇಂದಳಿದು
ಕಂಬ ಕುಸಿಬಿತ್ತು ಮಂಟಪಕೆ ॥ ॥96॥

ಕೇಳಲಾರೆವು ಗೋಳ ಹೇಳ್ಪೋಗು ಉತ್ತಣ್ಣ
ಬೀಳಾತು ಲೋಕ ಬಸವಳಿದು । ಮಾಚಯ್ಯ
ತಾಳಿ ಒಡೆತನವ ಆಳೆಂದು ॥ ॥97॥

ಉತ್ತಣ್ಣ ಪಡಿಹಾರಿ ಮತ್ತೆ ಮಾಚನ ಬಳಿಗೆ
ಕುತ್ತು ಹೊಸಮತಕೆ ಬಸವಳಿದ । ಎಂದೆನಲು
ಕತ್ತೆತ್ತಿ ಮಾಚ ಹರುಷದಲಿ ॥ ॥98॥

ಓಡುತೋಡುತ ಬಂದು ನೋಡಿ ಜನಜಂಗುಳಿಯು
ಗೋಳಿಡುತ ಕೇಳಿ ಎದೆ ತುಂಬಿ । ಮಾಚಯ್ಯ
ಹೇಳಿದನು ಜನಕೆ ಕೈ ಮುಗಿದು ॥ ॥99॥

ಭಾಪುರೆ ಬಸವಣ್ಣ ಭಾಪು ಶಿವಮತ ಮಣಿಯೆ
ಭಾಪು ನಿನ್ಹೆಸರು ಅಮರಾತು । ಜಗದೊಳಗೆ
ಭಾಪು ನಿನಗಾರು ಸರಿಯುಂಟು ॥ ॥100॥

ಇದ್ದು ಬೀಳ್ವರು ಜನರು ಬಿದ್ದು ಗೆದ್ದವನೊಬ್ಬ
ಗೆದ್ದಿ ಬಸವಯ್ಯ ನೀ ಬಿರುದ । ಶಿವಮತದ
ಸದ್ದು ಕೇಳುವದು ಜಗತುಂಬಿ ॥ ॥101॥

ಹರನಿಗಾಯಿತೆ ಎದೆಯು ಶರಣರಸುವೊಯ್ಯುದಕೆ
ತಿರುಗದಿರೆ ಪ್ರಾಣ ಇಬ್ಬರಿಗು । ಈ ಚಣಕೆ
ಹರನ ಉಪ್ಪರಿಗೆ ಉರುಳಿಸುವೆ ॥ ॥102॥

ಹೊಗಳುತಲಿ ಮಾಚಯ್ಯ ತೆಗೆದುಟ್ಟ ಕಂತೆಯನು
ನೆಗನೆಗೆದು ಘಂಟೆ ಬಾರಿಸಲು । ಮೂಜಗವು
ಮಗುವಾಗಿ ಕೇಳಿ ಹೌಹಾರಿ ॥ ॥103॥

ಆಕಾಶ ಘಂಟೆಗಾ ಏಕಗುಣಿ ಕಾಯಕವ
ಸಾಕೆನದೆ ಮಾಚ ಬಾರಿಸಲು । ಗಡಚಿಕ್ಕಿ
ತಾಕಿ ದಿಕ್ಕುಗಳು ಶಿವನೆದ್ದು ॥ ॥104॥

ನೂಕುವನು ಶಿವಲೋಕ ತೂಕ ಹಿಡಿಯಲು ಕಷ್ಟ
ಸಾಕು ಮಾಚಯ್ಯ ತಡೆನಿಲ್ಲು। ಅನ್ನುದಕೆ
ತೂಕಡಿಸಿ ಬಸವ ಕೇಳೆದ್ದು ॥ ॥105॥

ಪುರಪುರವೆ ಭಜಿಸುತಲಿ ಹರಲೋಕ ಹರಸುತಲಿ
ಮೆರೆಸಿದನು ಮಾಚ ಕಾಯಕವ । ಕಳೆತುಂಬಿ
ನವಲೋಕವಾತು ಶಿವಲೋಕ ॥ ॥106॥

ಶಿವನಬುಟ್ಟಿಯ ಮಾಡಿ ಭುವನ ಕಳಸಕೆ ಕಟ್ಟಿ
ಶಿವದೀಪ ಹಚ್ಚಿ ಕಲ್ಯಾಣ । ಪುರದೊಳಗೆ
ಶಿವಬೆಳಕ ಕಂಡ ಕೇತಯ್ಯ ॥ ॥107॥

ಶಿವ ಮತವೆ ತಾಯ್ಮತವು ಭವದೊಳಗೆ ಮತಗಳಿಗೆ
ನೆವಹಿಡಿದು ಚುಚ್ಚಿ ಕಾಡಿದರು । ಶಿವಮತವು
ಹವಣಿಸಿತು ಎತ್ತಿ ಆಡಿಸಲು ॥ ॥108॥

ಮಿಕ್ಕ ಕಸಬಿಗಳೆಲ್ಲ ಸಿಕ್ಕ ಮತವನೆ ಬಿಟ್ಟು
ಚೊಕ್ಕೆಂದು ಕೂಡಿ ಶಿವಮತಕೆ । ಕಾಯಕವು
ಉಕ್ಕಿ ಸಿರಿಯಾತು ಜನಪದಕೆ ॥ ॥109॥

ಕೇತ ನಿನ ನೆನದಿರಕೆ ಯಾತರದು ಈ ಜೀವ
ಸೂತಕದ ಕೊಂಡ ಹುಳುಗೊಂಡ । ನೋಡರಿತು
ಚೇತನೆಯ ಹೊಂದು ನೆನೆನೆನೆದು ॥ ॥110॥

ಮರಣ ಬಂದರು ಕೂಡ ಶರಣ ಕಾಯಕ ಮುಗಿಸಿ
ಹರುಷದಲಿ ಹರಣ ನೀಗಿದನು । ಕೇತಯ್ಯ
ಹರನಿತ್ತ ಪದವ ಕರುಣೆಯಲಿ ॥ ॥111॥

ಹಂತಿಯದು ಹಾಡೆಂದು ಪಂತಕಟ್ಟಲು ಬೇಡ
ಕಂತಿ ಕರಗುವದು ನಿಂತಲ್ಲೆ। ಕೇತಯ್ಯ
ಕುಂತು ಎದೆಯೊಳಗೆ ಹಾಡಿಸಿದ ॥ ॥112॥

ಶರಣುಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣ ಕೇತಯ್ಯ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿಗೊ ॥ ॥113॥

ಗ್ರಂಥಋಣ

1. ಕನ್ನಡ ಜಾನಪದ ಗೀತೆಗಳು	:	ಡಾ. ಬಿ. ಎಸ್. ಗದ್ದಗಿಮಠ, ಪ್ರಸಾರಾಂಗ, ಕ.ವಿ.ವಿ., ಧಾರವಾಡ, 3ನೇ ಮುದ್ರಣ 1986
2. ಮಲ್ಲಿಗೆ ದಂಡೆ	:	ದಿ। ಕಾಪಸೆ ರೇವಪ್ಪ ಹಲಸಂಗಿ, 2ನೇ ಮುದ್ರಣ 1948, 3ನೇ ಮುದ್ರಣ 1986
3. ಗರತಿಯ ಹಾಡು	:	ಸಂಪಾದನೆ ಹಲಸಂಗಿ ಗೆಳೆಯರು, 8ನೇ ಮುದ್ರಣ 2000
4. ಕನ್ನಡ ಜಾನಪದ ಸಾಹಿತ್ಯ	:	ಡಾ. ಬೆಟಗೇರಿ ಕೃಷ್ಣ ಶರ್ಮ , ಕ.ವಿ.ವಿ. ಪ್ರಕಟಣೆ, 1976
5. ನಮ್ಮ ಒಕ್ಕಲಿಗರ ನಂಬಿಕೆಗಳು	:	ಡಾ. ಎಂ. ಎನ್. ವಾಲಿ, ಕ.ವಿ.ವಿ. ಪ್ರಸಾರಾಂಗದ ಉಪನ್ಯಾಸ ಗ್ರಂಥ, 1995
6. ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ	:	ಡಾ. ಎಂ. ಎಂ. ಕಲಬುರ್ಗಿ , ಸಮಾಜ ಪುಸ್ತಕಾಲಯ, ಧಾರವಾಡ, 1978
7. ಜಾನಪದ ಜೀವಾಳ	:	ಡಾ. ಎಂ. ಎನ್. ವಾಲಿ, ಭುವನೇಶ್ವರಿ ಪ್ರಕಾಶನ, ವಿಜಾಪುರ, ದ್ವಿ. ಮು. 1997
8. ಸುವರ್ಣ ಜಾನಪದ ಸಂಪುಟ, 1 ಮತ್ತು 2	:	ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು. 1998
9. ಸಿಂಪಿ ಲಿಂಗಣ್ಣನವರ ಜೀವನ ಹಾಗೂ ಸಾಹಿತ್ಯ	:	ಡಾ. ಎಂ. ಎನ್. ವಾಲಿ ಪಿಎಚ್.ಡಿ . ಮಹಾಪ್ರಬಂಧ, ಪ್ರಕಟನೆ : 1990
10. ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ	:	ಡಾ. ನಂ. ತಪಸ್ವೀಕುಮಾರ, ಪ್ರಸಾರಾಂಗ, ಮೈಸೂರು. ವಿ.ವಿ. 1982
11. ಜಾನಪದ ಗ್ರಹಿಕೆ; ಪರಿಕಲ್ಪನೆ	:	ಪ್ರೊ. ಹಿ. ಶಿ. ರಾಮಚಂದ್ರೇಗೌಡ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು, 2004.


ಜಾನಪದ ಜಗತ್ತು ಸಂಚಿಕೆಗಳು
ಕರ್ನಾಟಕ ಭಾರತಿ ಸಂಚಿಕೆಗಳು
ಜಾನಪದ ಗಂಗೋತ್ರಿ ಸಂಚಿಕೆಗಳು

✦ ✦ ✦

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೯ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಚಿತ್ರಧಾರ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮